ಹೊಂದಾವರೆ

ಸಂಪಾದಕರು: ಮಹೇಂದ್ರ
ಮನ್ವಾಚಾರ್, ಎಸ್.ವಿ.

ಶ್ರೀ ಎಸ್. ಕೆ. ಕರೀಂಖಾನ್ ಅವರಿಗೆ

ಪ್ರೀತಿಯಿಂದ

ಚಿಂತನ

ದೂರವಾಣಿ (ಮನೆ) 353369

ಹೊಂದಾವರೆ

(ಕಮಲಾ ಹಂಪನಾ ಅವರ ಅಭಿನಂದನ ಸ್ಮರಣ ಸಂಚಿಕೆ)

ಸಂಪಾದಕರು

ಮಹೇಂದ್ರ

ಮನ್ನಾಚಾರ್, ಎಸ್. ವಿ.

ಕಮಲಾ ಹಂಪನಾ ಅಭಿನಂದನ ಸಮಿತಿ

ಬೆಂಗಳೂರು

HONDAVARE A Souvenier of Kamala Hampana felicitation function, Edited by Mahendra & Manvachar S. V. Published by A Kamala Hampana Abinandana Samithi Bangalore, 1986.

© ಹಕ್ಕುಗಳನ್ನು ಕಾಯ್ದಿರಿಸಿದೆ

ಬೆಲೆ : ಹತ್ತು ರೂಪಾಯಿಗಳು

ಮುದ್ರಕರು

ರುಕ್ಮಿಣಿ ಪ್ರಿಂಟರ್ಸ್
ನಂ. 11, 9ನೇ ಅಡ್ಡ ರಸ್ತೆ, ಬೈರಸಂದ್ರ
1ನೇ ಬಡಾವಣೆ ಪೂರ್ವ ಜಯನಗರ
ಬೆಂಗಳೂರು-560 011

ನುಡಿ ತೋರಣ

ಪ್ರೊ॥ ಕಮಲಾ ಹಂಪನಾರವರು ಕಳೆದುಕೊಂಡಿಲ್ಲದ ಸಾರ್ಥಕವಾದ ಸಿಹಿಯಾಗಿರುವ ಅಯ್‌ವತ್ತು ವರುಷಗಳ ಸುಂದರ ವರ್ಣರಂಜಿತ ಬದುಕು-ಬರೆಹದ ಅಭಿನಂದನೆಯ ಸಮಾರಂಭವು ಹಸಿರಾಗಿ ಶ್ರೀಮಂತವಾಗಿ ಶಾಶ್ವತವಾಗಿ ಉಳಿಯುವ ಸಾಂಸ್ಕೃತಿಕಕ್ಕೆ ಸಂಕೇತ ವಾಗಿ ಶ್ವೇತನಕ್ಷತ್ರವಾಗಿ ಚಿಕ್ಕದಾಗಿ ನಿಮ್ಮ ಕೈಯಲ್ಲಿರುವ ಈ ಪುಟ್ಟ ಸ್ಮರಣ ಸಂಚಿಕೆಯನ್ನು ಅಭಿಮಾನ ಮತ್ತು ಹೆಮ್ಮೆಯಿಂದ ಹೊರತಂದಿದ್ದೇವೆ.

ಸ್ತ್ರೀಗೆ ಸ್ವಾತಂತ್ರ್ಯವೇ ಇಲ್ಲ ಅನ್ನುವುದು ಈಗ ಹಳಸಿ ತಂಗಳಾದ ಮಾತು. ಮನೆ ಕಟ್ಟುವ ಕೂಲಿಯಾಳಿನಿಂದ ಹಿಡಿದು ರಾಷ್ಟ್ರಕಟ್ಟಿ ಮೆರೆದಾಡಿದ ಸ್ಥಿತಿಯವರೆಗೂ ಹೆಣ್ಣು ಹರಿದಾಡಿರು ವುದನ್ನು ನಾವೆಲ್ಲ ಕಂಡಿದ್ದೇವೆ. ಆದರೆ ನಮ್ಮ ಕಣ್ಣಿಗೆ ಸದಾ ಹೂವಮಾರುವ, ಬಾಳೆಹಣ್ಣು ಮಾರುವ, ಅನೇಕ ಮನೆಗಳಲ್ಲಿ ಚಾಕರಿ ಮಾಡುವ, ಪಾತ್ರೆ, ತಟ್ಟೆ-ಲೋಟ ತೊಳೆಯುವ, ಭತ್ತ ತೂರುವ, ಬುತ್ತಿ ಕಟ್ಟುವ-ಮೊದಲಾದ ಜೀವನಕ್ಕೆ ಅಗತ್ಯವಾಗಿ ಪೂರೈಸಲೇಬೇಕಾದ ಕ್ರಿಯೆಗಳಲ್ಲಿ ಸೊಳ್ಳೆಗಳಂತೆ, ನೊಣಗಳಂತೆ ಹೆಂಗಸರು ಸಿಕ್ಕಿಹಾಕಿಕೊಂಡು ಬಿಟ್ಟಿರುವಂತೆ ಕಂಡಿದ್ದಾರೆ. ಒಣಗಿಹೋದ ಎಲೆಗಳು ಗಾಳಿಗೆ ಹಾರಾಡಿ ಹೋದಂತೆ ಜೀವನಾರಾಧನೆ ಯಲ್ಲಿ ಅವರೆಲ್ಲ ತೊಡಗಿಬಿಟ್ಟಿರುತ್ತಾರೆ.

ಸಮುದ್ರದ ಮಧ್ಯದಲ್ಲಿ ಸಿಂಹಶಕ್ತಿಯಿಂದ ಆಗಾಗ ದೊಡ್ಡ ಹಡಗುಗಳು ಪ್ರಯಾಣ ಮಾಡುವುದುಂಟು. ಪುರುಷಶಕ್ತಿಗಳು ನಾಚಿಕೊಳ್ಳದೆ ಒಪ್ಪಿಕೊಳ್ಳುವ ಸ್ಥಿತಿಗಳೂ ಇವೆ. ಅಂಥವರಲ್ಲಿ ಗಾಯನದ ರಾಣಿ ಲತಾ ಮಂಗೇಶ್ಕರ್, ಚಕ್ರವರ್ತಿನಿ ದಿ॥ ಇಂದಿರಾಗಾಂಧಿ, ಹಿಂದಿನವಳಾದರೆ ಕಿತ್ತೂರು ಚೆನ್ನಮ್ಮ-ಮೊದಲಾದವರು ನಮ್ಮ ಮುಂದೆ ಹಾದು ಹೋಗಿ ದ್ದಾರೆ. ಸಾಹಿತ್ಯ ಪ್ರಪಂಚದಲ್ಲೂ ಕೂಡ ಕರ್ನಾಟಕದ ಉದ್ದಗಲಗಳಲ್ಲೂ ಉಯ್ಯಾಲೆ ಯಾಡುತ್ತಿರುವ ಹೆಸರೆಂದರೆ ಕ್ಯಾತ್ಸಂದ್ರದ ಕಮಲಾ ಹಂಪನಾರವರದು ಎಂದರೆ ಉತ್ಪ್ರೇಕ್ಷೆ ಅಥವ ಚಿಕ್ಕದನ್ನು ದೊಡ್ಡದಾಗಿ ಮಾಡಿ ಹೇಳುತ್ತಿಲ್ಲ ನಾವು.

ಈ ಕಮಲಾ ಹಂಪನಾ ದಂಪತಿಗಳಿಬ್ಬರು ಸಾಹಿತ್ಯದ, ಸಾರ್ವಜನಿಕದ ಎರಡೂ ಬರವಣಿಗೆ ಬದುಕಲ್ಲಿ ಕೆನೆ-ತೆನೆಗಳಂತೆ ಕಂಗೊಳಿಸುವ, ತೂಗಾಡುವಂಥವರಾಗಿದ್ದಾರೆ. ಜೀವನ ಮತ್ತು ಸಾಹಿತ್ಯಕ್ಕೆ ಚಿನ್ನದ ಪದಕಗಳನ್ನು ಯಾರಾದರೂ ಕೊಡುವುದಕ್ಕೆ ಮನಸ್ಸು ಮಾಡುವುದಾದರೆ ಆ ಪದಕಗಳಿಗಿಂತಲೂ ಮೇಲಾಗಿ ಈ ಇಬ್ಬರು (ಕಮಲಾ-ಹಂಪನಾ) ಅಲಂಕಾರವಾಗಿ ನಮ್ಮ ಪುಟ್ಟದೃಷ್ಟಿಗೆ ಕಂಡು ಬಿಟ್ಟಿದ್ದಾರೆ. ಸಾಹಿತ್ಯದ ಚಟುವಟಿಕೆಗಳು ಎಲ್ಲೆಲ್ಲಿ ಸ್ನೇಹದ

ಸ್ಪಂದನದಿಂದ ನಡೆದಿದೆಯೊ (ನಡೆಯುತ್ತದೆಯೊ) ಅಲ್ಲೆಲ್ಲ ಈ ಇಬ್ಬರು ತಪ್ಪಿಸಿಕೊಳ್ಳಲಾರರು. ಅಲ್ಲದೆ ಬಹುಪಾಲು ಎಲ್ಲ ಧೀವಂತರು, ಕಿರಿಯರು ಇವರ ಪರಿಚಯದ ಸಂಪುಟಗಳಲ್ಲಿ ದಾಖಲಾತಿಯಾಗಿ ಹೋಗಿದ್ದಾರೆ. ಅಭಿಪ್ರಾಯದ ಭಿನ್ನತೆ ಇದ್ದಾಗ್ಯೂ.

ಸಿ. ಆರ್. ಕಮಲಮ್ಮನವರನ್ನು ಹೆಚ್ಚು ಕಡಮೆಯಾಗಿ ೧೯೬೯ ರಿಂದ ಕುತೂಹಲದಿಂದ ನೋಡಿದವರಾಗಿದ್ದೇವೆ ನಾವು. ಎಂ. ಎ. ಪ್ಯಾಸಾಗಿ ಬಿಟ್ಟಿದ್ದೇನೆಂಬ ಜಂಬವಿಲ್ಲ. ಅಧ್ಯಾಪಿಕೆಯಾಗಿಬಿಟ್ಟಿನೆಂಬ ಉದ್ಯೋಗಸ್ಥ ಮಹಿಳೆಯ ನಿಶ್ಚಿಂತ ತಟಸ್ಥ ಜಡವಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಏನೇನೋ ಬರೆದಿಟ್ಟುಬಿಟ್ಟಿದ್ದೇನೆಂಬ ಸ್ವರತಿಯ ನಾರ್ಸಿಸಸ್ ಗುಣದೋಷವಿಲ್ಲ. ಕಮಲಮ್ಮನವರನ್ನು ಚುರುಕು ಮತ್ತು ರೋಮಾಂಚನದಲ್ಲಿ ನೋಡಲು ನಮಗೆ ಸಾಕಷ್ಟು ಸಂಗತಿಗಳಿವೆ. ಕಮಲಮ್ಮ ತನಗೆ ಇಷ್ಟವಾದ ಗಂಡಸನ್ನು ಸಂಗಾತಿಯನ್ನಾಗಿ ಪಡೆದವರು. ಅದೂ ಜಾತಿಕೋಟೆಯನ್ನು ಕೈಲಾದ ಮಟ್ಟಿಗೆ ಪುಡಿಪುಡಿ ಮಾಡಿ. ವೃತ್ತಿ ತೃಪ್ತಿಯಲ್ಲಿರುವ ಮಹಿಳೆ ಕೂಡ. ಸಾಹಿತ್ಯ ಮನನ ಮಾಡಬೇಕು. ಮೆಲುಕು ಹಾಕಬೇಕು. ಅಮೃತವಾಗಿ ವಿದ್ಯಾರ್ಥಿನಿಯರಿಗೆ ಸಮರ್ಥವಾಗಿ ಗುಟುಕುಕೊಡಬೇಕು. ಅಥವ ಕಕ್ಕಬೇಕು. ಈ ಪತಿ, ಈ ಸಾಹಿತ್ಯ, ಈ ಹಣ, ಈ ಮಕ್ಕಳು, ಈ ನಮ್ಮಂಥವರು, ಈ ರಚಿಸಲು ಎಡತಾಕುವ ಕೃತಿಗಳು, ಕಮಲಾಪ್ರಿಯ ವಚನಗಳೆಲ್ಲ ಕೆಸರಿನಲ್ಲಿ ಹುಟ್ಟುವ ಕಮಲದ ಪರಿಯಲ್ಲ. ಕೆಸರು ಸೃಷ್ಟಿಯಾದರೂ ಅದನ್ನು ನಾಶಮಾಡಿ, ತನಿರಸವನ್ನಾಗಿ ಮಾಡುವ ಆಯಾಮಕ್ಕೆ ಪರಿವರ್ತಿತವಾಗುವಂತಹದು.

ಎಳೆಯತನವು ಅಳಿಸಿಹೋಗಿ ಹರೆಯವು ಕಣ್ಣು ಬಿಡುತ್ತಿರುವ ನಮ್ಮ ಈ ವಯಸ್ಸಿನಲ್ಲಿ, ಇದುವರೆಗೆ ನಾವು ಕಾಲದ ಕಾಲುವೆಯಲ್ಲಿ, ಎಲ್ಲರಲ್ಲೂ ತಂಗಿದ್ದು, ಜೇನಹನಿಗಳನ್ನು ತುಂತುರು ತುಂತುರಾಗಿ ಸಿಂಪಡಿಸಿ ಓಡಿಹೋಗುವ ಸನ್ಮಾನ, ಸತ್ಕಾರ, ಸಮ್ಮೇಳನ, ಸಂತೋಷಕೂಟ, ಹುಟ್ಟುಹಬ್ಬ, ಪ್ರಶಸ್ತಿಪ್ರದಾನ, ಬಹುಮಾನ ವಿತರಣೆ, ಪುಸ್ತಕ ಬಿಡುಗಡೆ, ಶತಮಾನೋತ್ಸವಾಚರಣೆ–ಮೊದಲಾದವುಗಳಲ್ಲಿ ಇರುತ್ತ ಬಂದಿದ್ದೇವೆ.

ನಾವು ಹನ್ನೊಂದು ಜನ ಎಳೆಯ ಹುಡುಗರು ಸೇರಿ ತೀರಾ ಹೊಸತನದಲ್ಲಿ ಕಮಲಾ ಹಂಪನಾ ಅಭಿನಂದನಾ ಸಮಿತಿಯನ್ನು ರಚಿಸಿಕೊಂಡೆವು. ನಮ್ಮ ಕರೆಗೆ ಓಗೊಟ್ಟು ಲೇಖಕರೆಲ್ಲ ಸಹಕರಿಸಿದರು. ಅದರ ಪ್ರತಿಬಿಂಬವಾಗಿ ಕಮಲಾಭಿನಂದನ, ಕಮಲಾ ಹಂಪನಾ ಬದುಕು ಬರಹ, ಕಮಲಾಕೃತಿ ವಿಮರ್ಶೆಗಳೆಂಬ ಮೂರು ಕೃತಿಗಳು ಸ್ನೇಹ–ಅಭಿಮಾನದಿಂದ ಹೊರಬಂದವು. ಟೀಕೆಗಳೂ ಚುಟುಕಾಗಿ ಬಂದವು. ಈಗ ಟೀಕೆಗಳು ಬರುವುದೇ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಬಹುದೇನೋ ಎಂಬ ಅನುಮಾನಗಳೂ ನಮ್ಮಲ್ಲಿವೆ. ಇರಲಿ ಬಿಡಿ, ಕಮಲಾ ಹಂಪನಾ ಸನ್ಮಾನದ ದಿನದಂದು ನಗುನಗುತ್ತಾ ಟಿ. ಕೆ. ರಾಮರಾಯರು ಅದಕ್ಕೆ ಉತ್ತರಿಸಿಸಿದರು. ನಮಗಾಗ ಸಮಾಧಾನವಾಯಿತು. ಮನುಷ್ಯ ಉಪಯೋಗಿಸುವ ಒಂದು ಸಣ್ಣ ಬ್ಲೇಡಿನ ಮೇಲೆ, ಸಿಗರೇಟಿನ ಮೇಲೆ ಕಂಪನಿಯ ಹೆಸರಿರುತ್ತದೆ. ಅಂಥದರಲ್ಲಿ ಸುಮಾರು ೫೦ ವರ್ಷಗಳ ಕಾಲ ತನಗೆ ತೋಚಿದಷ್ಟನ್ನು ದಲಿತ ಮಹಿಳೆಯೊಬ್ಬಳು ಸಾಹಿತ್ಯ ಕ್ಷೇತ್ರದಲ್ಲಿ ದುಡಿದಿದ್ದಾರೆ ಎಂದರೆ ಯಾವುದೇ ರಿಯಾಯಿತಿ ತೋರದೆ ಗುರ್ತಿಸಬೇಕಾದ್ದು ನಮ್ಮ ಕರ್ತವ್ಯ. ನಮಗೆ ತಿಳಿದಂತೆ ಅದನ್ನು ಅಚ್ಚುಕಟ್ಟಾಗಿ ಮಾಡಿದ್ದೇವೆ. 'ಹೊಂದಾವರೆ'ಯೂ ಬೇಗನೆ ಬರಬೇಕಿತ್ತು. ಸ್ವಲ್ಪ ತಡವಾಗಿದೆ. ತಡವಾದರೇನಂತೆ. ನಮ್ಮ ಕೆಲಸಗಳು ಸುಸೂತ್ರವಾಗಿ ನಡೆದಿವೆ. ಇದನ್ನು ಹೊರ ತರುವಲ್ಲಿ ಸಹಕರಿಸಿದ ಸಂಪಾದಕ ಸಮಿತಿಗೂ

ಮುಖ್ಯವಾಗಿ ಸಹೋದ್ಯೋಗಿ ಜಿ. ಆರ್. ತಿಪ್ಪೇಸ್ವಾಮಿ ಅವರಿಗೂ ಸ್ಮರಣ ಸಂಚಿಕೆಯನ್ನು ಹೊರತರುವ ಸಂದರ್ಭದಲ್ಲಿ ಸಹಕರಿಸಿದ ಕುಮಾರಿ ಸೀತಾಲಕ್ಷ್ಮಿ ಅವರಿಗೂ ಕಲಾವಿದ ಪ. ಸ. ಕುಮಾರ್, ರಕ್ಷಾಕವಚವನ್ನು ಮುದ್ರಿಸಿಕೊಟ್ಟ ಭಗವಾನ್ ಇಂಡಸ್ಟ್ರೀಸ್ ಹಾಗೂ ಮುದ್ರಕರಾದ ರುಕ್ಮಿಣಿ ಪ್ರಿಂಟರ್ಸ್ ಮಾಲೀಕರಿಗೂ ನಮ್ಮ ಕೃತಜ್ಞತೆಗಳು. ವಿಶೇಷವಾಗಿ ಮುದ್ರಣ ವಿಷಯದಲ್ಲಿ ಸಲಹೆಸೂಚನೆ ನೀಡಿದ ಸಂಶೋಧಕ ಇತಿಹಾಸಜ್ಞರಾದ ಲಕ್ಷ್ಮಣ್ ತೆಲಗಾವಿ ಅವರಿಗೂ ನಮ್ಮ ವಂದನೆಗಳು.

ಇಂದು ಆ ನೆನಪೆಲ್ಲ ಕಲಶದ ರೀತಿಯಲ್ಲಿ ಇರುವಂತೆ ಕಮಲಾ ಹಂಪನಾರವರ ಅರ್ಧಶತ ಮಾನದ ಆಯುಸ್ಸಿನ ಅರ್ಥಪೂರ್ಣವಾದ ಸಂಕೇತದ ಉತ್ಸವಕ್ಕೆ ನಾವೆಲ್ಲ ಕೂಡಿದ್ದೇವೆ. ಕಮಲಾ ಹಂಪನಾ, ಹರ್ಷ, ರಾಜ್ಯಶ್ರೀ, ಆರತಿ–ಎಲ್ಲರೂ ನಾವು ಮತ್ತು ನೀವು ಮತ್ತೆ ಮತ್ತೆ ಇಂತಹ ಸುಮಧುರವಾದ ಹರ್ಷವರ್ಷಗಳನ್ನು ಬರಮಾಡಿಕೊಳ್ಳುತ್ತ, ಜೀವನದಲ್ಲಿ ಸಿಕ್ಕುವ ಸುಖ–ಸಂತೋಷಗಳನ್ನು ಸೋರಿಹೋಗಲು ಬಿಡದೆ, ಒಬ್ಬರಿಗೊಬ್ಬರು ಅಭಿಷೇಕ ಮಾಡಿಕೊಳ್ಳುತ್ತ, ಎರಚಾಡಿಕೊಳ್ಳುತ್ತ ಇರೋಣವೆಂದು ತಿಳಿದು ಹೃದಯದಿಂದ ಹೃದಯಕ್ಕೆ ತಲುಪೋಣ.

ಸ್ನೇಹದ ನಮಸ್ಕಾರಗಳೊಡನೆ

ಮಹೇಂದ್ರ

ಎಸ್. ವಿ. ಮನ್ವಾಚಾರ್

ತಂದೆ : ಸಿ. ರಂಗಧಾಮ ನಾಯಕ್

ತಾಯಿ : ಸಿ. ರಂಗಲಕ್ಷ್ಮಮ್ಮ

ಭಾಷಣದಲ್ಲಿ ತಲ್ಲೀನರಾಗಿರುವ ಲೇಖಕಿ



ರಾಷ್ಟ್ರಕವಿ ಕುವೆಂಪು ಅವರೊಡನೆ ಹಂಪನಾ ದಂಪತಿಗಳು

ಮೆಚ್ಚಿದ ಮಡದಿಗೆ ಪ್ರೀತಿಯ ಹೂಮಾಲೆ

ಭಾಷಣ ಮಾಡುತ್ತಿರುವುದು



'ನಕ್ಕು ನಗಿಸುವ ನಗೆ ಲೇಸು' : ಸರಸ ದಾಂಪತ್ಯ



ಅಭ್ಯಾಸನಿರತರು



ಪೂಜ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರಿಂದ ಗೌರವ

ಸಚಿವ ಡಾ॥ ಜೀವರಾಜ ಆಳ್ವರಿಂದ ಸನ್ಮಾನ

ಕೆಂಗಲ್ ಹನುಮಂತಯ್ಯನವರು ಆಲಿಸಿ ಆನಂದಿಸುತ್ತಿರುವುದು : ಎಡದಿಂದ ಬಲಕ್ಕೆ :
ಕೆಂಗಲ್ ಹನುಮಂತಯ್ಯ, ಡಾ॥ ದೇ. ಜ. ಗೌ., ಪಿ. ಮಲ್ಲಿಕಾರ್ಜುನಪ್ಪ

ಸಹಲೇಖಿಕಿ ವಾಣಿ ಹಾಗೂ ಡಾ॥ ಹಾ. ಮಾ. ನಾಯಕರೊಡನೆ



ಸ್ವಪ್ನವಾಸವದತ್ತ ನಾಟಕದಲ್ಲಿ ವಸುಂಧರೆ ಪಾತ್ರಾಭಿನಯ   ಎಡದಿಂದ ಬಲಕ್ಕೆ :
ಶ್ರೀಮತಿಯವರಾದ ಶಾಂತಲಕ್ಷ್ಮಿ, ಕಮಲಾ ಹಂಪನಾ, ರುಕ್ಮಿಣಿ, ಸಿ. ಜಿ.

ಸಾಮಾಜಿಕ ನಾಟಕವೊಂದರಲ್ಲಿ ಶ್ರೀಮಂತನ ಪಾತ್ರದಲ್ಲಿ

ಭಾಷಣದಲ್ಲಿ ತಲ್ಲೀನತೆ

ನಾಟಕದಲ್ಲಿ ಅಭಿನಯನಿರತೆ



ಕಾರ್ಯಕ್ರಮವೊಂದರಲ್ಲಿ ಭಾಷಣ ಮಾಡುತ್ತಿರುವುದು



ಆಗ್ರಾ : ತಾಜಮಹಲಿನ ಹಿನ್ನೆಲೆಯಲ್ಲಿ



ಊಟಿಯಲ್ಲಿ ಕುದುರೆ ಸವಾರಿ

ಲೇಖಕಿಯ ನಾಲ್ಕು ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ
ಡಾ॥ ಸುಜನಾ, ಡಾ॥ ಕಂಬಾರ, ಚದುರಂಗ, ವೀರೇಂದ್ರ ಹೆಗ್ಗಡೆ, ಸಿದ್ಧಯ್ಯ ಪುರಾಣಿಕ, ಕಮಲಾ-ಹಂಪನಾ, ದಿವಾಕರ

ಮಕ್ಕಳ ನೃತ್ಯ ಕಾರ್ಯಕ್ರಮದಲ್ಲಿ : ಹಂಪನಾ, ರಾಜ್ಯಶ್ರೀ, ಹರ್ಷವರ್ಧನ, ಆರತಿ, ಕಮಲಾ

'ಸಮಕಾಲೀನ ಸಾಹಿತ್ಯ' ಒಂದು ದಿನದ ಸಮ್ಮೇಳನವನ್ನು ಕರ್ನಾಟಕ ಗೃಹ ಸಚಿವ ಬಿ. ರಾಚಯ್ಯ ಅವರು ಉದ್ಘಾಟಿಸುತ್ತಿರುವುದು. ಜೊತೆಯಲ್ಲಿ ಕಮಲಾ ಹಂಪನಾ, ಪ್ರೊ॥ ಸಿ. ಪಾರ್ವತಮ್ಮ.



ಲೇಖಕಿಯ ಅಭಿನಂದನ ಸಮಾರಂಭದಲ್ಲಿ ಡಾ॥ ಆರ್. ಸಿ. ಹಿರೇಮಠ್ ಅವರು ಮಾತನಾಡುತ್ತಿದ್ದಾರೆ.
ಕಮಲಾ ಹಂಪನಾ, ಅನುಪಮಾ ನಿರಂಜನ, ಚದುರಂಗ ಮತ್ತು ಚಂದ್ರಶೇಖರ ಕಂಬಾರ

ವಾಹನ ನಡೆಸುತ್ತಿರುವ ಲೇಖಕಿ



ರಿಜಿಸ್ಟರ್ಡ್ ಮದುವೆಯಾದ ದಿನ : ೨೪–೧೧–೧೯೬೧

ಕುಳಿತವರು : ಪಾರ್ವತಿ, ಶ್ಯಾಮಲಾದೇವಿ, ಕಮಲಾ–ಹಂಪನಾ, ಜಿ. ಶಂಕರಯ್ಯ, ಎಂ. ಎಚ್. ಕೃಷ್ಣಯ್ಯ

ನಿಂತವರು : ಎಂ. ಜಿ. ಸುರೇಂದ್ರಕುಮಾರ್, ಟಿ. ಬ್ರಹ್ಮಸೂರಯ್ಯ, ಪಿ. ಎ. ಅಬ್ದುಲ್ ಮಜೀದ್, ಮುನಿಯಪ್ಪ, ಚಂದ್ರಶೇಖರ್

ಅನುಪಮಾ ಅವರಿಗೆ ಬರೆದ ಲೇಖಕಿಯ ಹಸ್ತಾಕ್ಷರ

ಸಿ. ಆರ್. ಕಮಲಮ್ಮ
(ಕಮಲಾ ಹಂಪನಾ)
ರೀಡರ್

ಕನ್ನಡ ವಿಭಾಗ
ಮಹಾರಾಣಿ ಕಲಾ ಕಾಲೇಜು
ಬೆಂಗಳೂರು-560 001

14.7.84.

ಪ್ರಿಯ ಅನುಪಮಾ ಅವರಿಗೆ
ನಮಸ್ಕಾರ. ನಿಮಗೆ ಅಭಿನಂದನೆ, ಇದೀಗ
[illegible] ನಿಮ್ಮ 'ಅಂಗೈಯಲ್ಲಿ ಯೂರೋ-
ಅಮೇರಿಕ'ದ ಪ್ರವಾಸ ಮಾಡಿ ಮುಗಿಸಿದೆ. [illegible]
[illegible]

ನಿವಾಸ: ಸ್ವಸ್ತಿಕ, 1079, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010. ☎ 353369

② ಪ್ರಾಚೀನರು ಇಷ್ಟು ವಿದ್ವಾಂಸರಾದರೂ ಕುರುಡು ನಂಬಿಕೆಗಳು ಮಾತ್ರ ಇತ್ತು (ಪು-೯೫)।

④ ಈ ಅಧ್ಯಾಯದ ಪ್ರಮಾಣಗಳನ್ನು ಸುಲಭವಾಗಿ ಎಂದು ಗೊತ್ತಾಯಿತು. ನಾವು ಯಾರೂ ಬಾಲರಲ್ಲ, ಮುದುಕರು ಕೂಡ ಅಲ್ಲ. (೧೨೦)

ಇಂಥ ಕೆಲವು ನಿಮ್ಮ ಟಿಪ್ಪಣಿಗಳು ನನಗೆ ತುಂಬಾ ಪ್ರಿಯವಾದವು.

ಭೋಗಿ ನಾನಾ ನಿಮ್ಮ ಸಂಸ್ಕೃತಿ - ಹೋರಾಟಗಳಿಗೆ ಬಂದು ಜ್ವಲಂತ ಉದಾಹರಣೆ. (೧೨೧)

ಗೌರಿ [illegible] ತುಗಾಬ, [illegible] - [illegible] ಕಂಡಿದೆ.

ಶ್ರೀಮತಿ ಪ್ರಭಾ ಅವರ ಮುದಿಮೆ, 'ಕನ್ನಡ - ಕನ್ನಡನಾಡು ನಲ್ಲಿ [illegible] ಜನಪ್ರಿಯವಾಗಿದೆ' - ಎಷ್ಟು ನಿಮ್ಮ ಮಾತು [illegible]!

ಈ ಸುಂದರ ಪ್ರಬಂಧದ ಇನ್ನೊಂದು ಮುಖ [illegible] ಹಗರಣ ನಾಮಕ [illegible] ಕೊಂಡು [illegible] - [illegible] ಅವೆಲ್ಲ [illegible]. [illegible] ಭಯ - ಆರ್ಯರು [illegible] ಆ [illegible] ನಲ್ಲಿ [illegible]. ಇನ್ನು ನಿಮ್ಮ [illegible] ಅಂತ [illegible] ಸಮುದಾಯ. ಆದರೆ ಉತ್ತರ ಭಾರತದಲ್ಲಿ ಇಂಥ [illegible] ಕೊಡುತ್ತಿವೆ; ದಕ್ಷಿಣಕ್ಕೆ ಬರಲು [illegible] ಬೇಕಿಲ್ಲ. [illegible] ಪ್ರಭಾವ [illegible]

ಪ್ರಿ [illegible] ೧೫೪ ರಲ್ಲಿ ಬರುವ [illegible] ವಿವರ ತುಂಬಾ [illegible]. ಅವನ [illegible].

ಸಿ. ಆರ್. ಕಮಲಮ್ಮ
(ಕಮಲಾ ಹಂಪನಾ)
ರೀಡರ್

ಕನ್ನಡ ವಿಭಾಗ
ಮಹಾರಾಣಿ ಕಲಾ ಕಾಲೇಜು
ಬೆಂಗಳೂರು-560 001

[illegible] ಕೃತಿಗೆ ಚಿತ್ರ [illegible]. ನಿಮ್ಮ [illegible]
ವಿವರವಾದಲ್ಲಿ [illegible] ಮನಸಿನ ನೋವನ್ನು ನಾವೇ
ಅನುಭವಿಸಿದಷ್ಟು. ಯಾತನೆ [illegible] [illegible]
ದಷ್ಟು ನೋವು ಹೃದಯದ ಆಳಕ್ಕೆ ಇಳಿದು
ಭಾವನೆಗಳನ್ನು ಬೆದಕುತ್ತವೆ, ಕೆದಕುತ್ತವೆ, ತಲ್ಲಣ
ಗೊಳಿಸುತ್ತವೆ. ಹೀಗೆ ಮನಸ್ಸು [illegible] [illegible]
[illegible] ಒಂದು [illegible] ಅಥವಾ ಒಂದು
[illegible] [illegible]?

ನಿಮ್ಮ [illegible], ಧೈರ್ಯವಂತರು.
ಇದರ ನಿಮ್ಮನ್ನು ಬಾಲ್ಯದಿಂದ [illegible]
ಮಾಡಿದ [illegible] [illegible] [illegible]
[illegible]. ಮತ್ತು [illegible] ನಾನು.
[illegible], [illegible] [illegible] [illegible]
[illegible] [illegible], [illegible] [illegible] [illegible]
ನಿಮ್ಮ [illegible] ಧೈರ್ಯಕ್ಕೆ [illegible] [illegible]. ನಿಮ್ಮ
[illegible] [illegible] [illegible] [illegible]
[illegible], [illegible] [illegible]. [illegible]
ನಿಮ್ಮ [illegible] [illegible]!
ನಿಮ್ಮಿಂದ ಇನ್ನು ಉತ್ತಮ ಕೃತಿಗಳನ್ನು ನಾವು ನಿರಂತರ
ನಿರೀಕ್ಷಿಸುತ್ತೇವೆ [illegible].

1979ರಲ್ಲಿ [illegible] ನಡೆದ [illegible] ಭಾಗವಹಿಸಿದ್ದೆ!

ವಿಳಾಸ: ಸ್ಫೂರ್ತಿ, 1079, 5ನೇ ಕ್ರಾಸ್, [illegible], ಬೆಂಗಳೂರು-560 010. ☎ 353369

ಪುಸ್ತಕಗಳಲ್ಲಿ ನಾನು ಮೆಚ್ಚಿದ ಒಂದು ಲೇಖನದಲ್ಲಿ.
ಒಂದು ಮಾತಿದೆ [illegible] 'ಪ್ರಿಯದರ್ಶನ ಮಾಲಿಕೆ [illegible]
[illegible] ಗೌರವ ಗ್ರಂಥದಲ್ಲಿ ಡಾ. ಕೆ.ವಿ.ನ. [illegible]
[illegible]' – ಎಂದು – [illegible] ಬರೆದಿದ್ದೆ. [illegible]
[illegible] ಮರುಮುದ್ರಣ ನಂತರವೂ [illegible]ತ್ತಿದ್ದೇನೆ;
[illegible] – ಇಂದಿನ [illegible]ಗೂ ಬರವಣಿಗೆಯನ್ನು [illegible]
[illegible] [illegible] ಬರೆಯುತ್ತಿರುವ [illegible]
ಡಾ. [illegible] ಅವರಿಗೆ ಎಂದು.
'[illegible]' [illegible] [illegible] ಬರೆಯುವೆ.

[illegible] [illegible] [illegible] [illegible]
[illegible] ಮದುವೆಯ [illegible] [illegible]
[illegible] [illegible] [illegible] ನಮ್ಮ [illegible]
[illegible] [illegible] [illegible] ಬರುತ್ತೇನೆ.

ಮನೆಯಲ್ಲಿ [illegible] [illegible] [illegible]
[illegible] [illegible] [illegible] , ನನ್ನ [illegible]
[illegible] [illegible] ನಮಸ್ಕಾರಗಳು.
ಮತ್ತೆ [illegible] ಬರುತ್ತಿದ್ದೇನೆ. [illegible] ಚೆನ್ನಾಗಿ
ಬಂದಿವೆ. [illegible] [illegible]. [illegible]
[illegible] [illegible] [illegible] ಎಲ್ಲವೂ ಚೆನ್ನಾಗಿ
[illegible]. '[illegible] [illegible]' [illegible] ನಿಮ್ಮ [illegible]
[illegible] ಇದ್ದರೆ ಚೆನ್ನಾಗಿತ್ತು. . .
ಒಂದೇ [illegible] [illegible] ನನ್ನ [illegible]
[illegible]. '[illegible] (ಶ್ರೀ [illegible])' [illegible]
'[illegible]' [illegible] '[illegible]' [illegible].
[illegible]

[illegible]
[illegible]

X

ಶುಭವಾಗಲಿ

ಪ್ರೊ|| ಕಮಲಾ ಹಂಪನಾ ಅವರಿಗೆ ಐವತ್ತು ವರ್ಷಗಳು ತುಂಬುತ್ತಿರುವ ಈ ಶುಭ ಸಂದರ್ಭದಲ್ಲಿ ಅಭಿನಂದನಾ ಗ್ರಂಥವನ್ನು ಹೊರತರುತ್ತಿರುವುದು ತಿಳಿದು ಸಂತೋಷ ವಾಯಿತು.

ಈಗ ಹೊಸದಾಗಿ ನಾನು ಏನನ್ನೂ ಬರೆಯುತ್ತಿಲ್ಲವಾಗಿ ಅಭಿನಂದನ ಸಂಪುಟಕ್ಕೆ ಹಾರೈಕೆಯ ಹೊರತಾಗಿ ಏನನ್ನೂ ಹೇಳಲಾರೆ.

ಅಭಿನಂದನ ಸಂಪುಟವು ಯಶಸ್ವಿಯಾಗಿ ಹೊರಬರಲಿ ಎಂದೂ ಶ್ರೀಮತಿ ಕಮಲಾ ಹಂಪನಾ ಅವರಿಗೆ ಶುಭವಾಗಲಿ ಎಂದೂ ಹಾರೈಸುತ್ತೇನೆ.
ವಿಶ್ವಾಸಪೂರ್ವಕವಾಗಿ,

ಕುವೆಂಪು

* * * *

ಶ್ರೀಮತಿ ಕಮಲಾ ಹಂಪನಾ ಅವರು ಕನ್ನಡ ಭಾಷೆ ಸಾಹಿತ್ಯಗಳ ಅಧ್ಯಯನ – ಅಧ್ಯಾಪನಗಳಲ್ಲಿ ಅತ್ಯಂತ ಶ್ರದ್ಧೆ – ನಿಷ್ಠೆಗಳಿಂದ ತೊಡಗಿರುವ ಪ್ರಾಧ್ಯಾಪಕಿಯಾಗಿ ವಿದ್ಯಾರ್ಥಿ ಪ್ರಿಯತೆಯನ್ನು ಸಂಪಾದಿಸಿದ್ದಾರೆ. ಯಾವುದೇ ಶಿಕ್ಷಣ ಕ್ಷೇತ್ರದ ಹಂತದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕಿಯರಿಗೆ ದೊರೆಯುವ ಸಮಾಧಾನ ಸಾಫಲ್ಯ ಭಾವಗಳು ಅವರಿಗೆ ಲಭ್ಯವಾಗಿರುವುದು ಸಂತೋಷದ ವಿಷಯ. ಜೊತೆಗೆ ಅವರು ನಾಡಿನುದ್ದಕ್ಕೂ ಸಂಚರಿಸಿ ಸಾಹಿತ್ಯಿಕ ಸಾಂಸ್ಕೃತಿಕ ವಿಷಯಗಳನ್ನು ಕುರಿತು ಅಸ್ಖಲಿತವಾದ ಭಾಷಣಗಳನ್ನೂ ಮಾಡಿ ಒಳ್ಳೆಯ ಮಾತುಗಾರಿತಿಯೆಂದು ಹೆಸರು ಪಡೆದಿದ್ದಾರೆ. ವೈಚಾರಿಕವಾಗಿ ಪುರೋಗಾಮಿಯೆಂಬ ಖ್ಯಾತಿಯನ್ನೂ ಹೊಂದಿದ್ದಾರೆ. ಮಹಿಳೆಯರ ಸಮಸ್ಯೆಗಳು ಮತ್ತು ಮಹಿಳಾ ಸಾಹಿತ್ಯ ಇವಕ್ಕೆ ಸಂಬಂಧಪಟ್ಟ ಸಭೆ, ಸಮ್ಮೇಳನ, ವಿಚಾರ ಗೋಷ್ಠಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಬಂದಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿಯೂ ಅವರು ರಚಿಸಿದ, ಸಂಪಾದಿಸಿದ ಮತ್ತು ಸಂಕಲನ ಮಾಡಿದ ಕೃತಿಗಳು ಗಣನೀಯ ಪ್ರಮಾಣದಲ್ಲಿವೆ. ಅವರು ಸಣ್ಣಕತೆ. ಶಿಶುಸಾಹಿತ್ಯ, ಜೀವನಚರಿತ್ರೆ ಸಂಶೋಧನೆ, ಧಾರ್ಮಿಕ, ಸಾಂಸ್ಕೃತಿಕ, ವಿಚಾರ, ವ್ಯಕ್ತಿಚಿತ್ರ ಈ ಮುಂತಾದ ಪ್ರಕಾರಗಳಲ್ಲಿ

ಅವರು ಕೃತಿರಚನೆ ಮಾಡಿದ್ದಾರೆ. ಆಧುನಿಕ ಮಹಿಳಾ ಸಾಹಿತಿಗಳಲ್ಲಿ ಮಾತ್ರವಲ್ಲ, ಇಡೀ ಹೊಸ ಕನ್ನಡ ಸಾಹಿತ್ಯದಲ್ಲಿ ಪ್ರಖ್ಯಾತೆಯಾಗಿದ್ದಾರೆ.

ಅವರಿಗೆ ಐವತ್ತು ವರ್ಷ ತುಂಬುವ ಸಂದರ್ಭದಲ್ಲಿ ಅವರಿಗೆ ಗೌರವ ಸಲ್ಲಿಸುವ ಸಮಾರಂಭದ ಯೋಜನೆ ತಿಳಿಯಿತು. ಅವರಿಗೆ ನನ್ನ ಹೃತ್ಪೂರ್ವಕವಾದ ಶುಭ ಹಾರೈಕೆಗಳನ್ನು ಈ ಮೂಲಕ ತಿಳಿಸಬಯಸುತ್ತೇನೆ. ಅವರಿಂದ ಇನ್ನೂ ಮಿಗಿಲಾದ ನಾಡು ನುಡಿಗಳ ಸೇವೆ ಸಲ್ಲಲಿ ಎಂದು ಹಾರೈಸುತ್ತೇನೆ.

ರಂ. ಶ್ರೀ. ಮುಗಳಿ

* * * *

ಖ್ಯಾತ ಲೇಖಕಿ ಪ್ರೊ॥ ಕಮಲಾ ಹಂಪನಾರವರಿಗೆ ಐವತ್ತು ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಅಭಿನಂದನಾ ಸಂಪುಟವನ್ನು ಹೊರತರಲಿರುವ ವಿಚಾರ ತಿಳಿದು ಸಂತೋಷ ವಾಯಿತು. ಈ ಸಂಧರ್ಭದಲ್ಲಿ ಪ್ರೊ॥ ಕಮಲಾ ಹಂಪನಾರಿಗೆ ಶ್ರೀ ಮಂಜುನಾಥಸ್ವಾಮಿ ಹಾಗೂ ಭಗವಾನ್ ಶ್ರೀ ಚಂದ್ರನಾಥಸ್ವಾಮಿ ದೀರ್ಘಾಯುರಾರೋಗ್ಯವನ್ನಿತ್ತು ಹರಸಲಿ ಹಾಗೂ ಇನ್ನೂ ಹೆಚ್ಚಿನ ಸಾಹಿತ್ಯ ಸೇವೆ ಮಾಡುವಂತೆ ಅನುಗ್ರಹಿಸಲಿ ಎಂದು ಪ್ರಾರ್ಥಿ ಸುತ್ತೇನೆ.

ಶ್ರೀಮತಿ ಹಂಪನಾರವರು ಕಳೆದ ಇಪ್ಪತ್ತು ವರ್ಷಗಳಿಂದಲೂ ಶ್ರೀಕ್ಷೇತ್ರದಲ್ಲಿ ಲಕ್ಷದೀಪೋ ತ್ಸವ ಸಂದರ್ಭದಲ್ಲಿ ಏರ್ಪಡಿಸಲಾದ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದಾರೆ. ಅವರ ಸಾಹಿತ್ಯಪ್ರೇಮ, ಆಳವಾದ ಅಭ್ಯಾಸ, ಕೃತಿರಚನಾ ಸಾಮರ್ಥ್ಯ ಇವುಗಳಿಂದಾಗಿ ಅವರನ್ನು ಶ್ರೇಷ್ಠ ಲೇಖಕಿಯರ ಸಾಲಿನಲ್ಲಿ ಕಾಣುವಂತೆ ಮಾಡಿವೆ. ತನ್ನ ಪ್ರತಿಭೆಯನ್ನು ಅತ್ಯಂತ ಸೌಜನ್ಯಪೂರ್ವಕವಾಗಿ ತೋರಿಸಿಕೊಳ್ಳುವುದು ಅವರ ವೈಶಿಷ್ಟ್ಯತೆ. ಯಾವುದೇ ಸಂದರ್ಭದಲ್ಲಿಯೂ ಸೌಹಾರ್ದಯುತವಾಗಿ ನಡೆದುಕೊಂಡು ಮಾತೃ ಹೃದಯದಿಂದ ಸಂಭಾಷಿಸುವ ಶ್ರೀಮತಿಯವರಿಂದ ಸಹೃದಯ ಸಾಹಿತ್ಯಾಭಿಮಾನಿ ಗಳು ಇನ್ನೂ ಬಹಳ ನಿರೀಕ್ಷೆಯಲ್ಲಿದ್ದಾರೆ. ಅವರ ಇತ್ತೀಚಿನ 'ಚಂದನಾ' ಕೃತಿಯು ಅವರ ಸಮಾಜ, ಸಂಸಾರ ಜೀವನದ ಬಗ್ಗೆ ಎಷ್ಟು ಗಂಭೀರ ಮತ್ತು ಅನುಭವಪೂರ್ಣ ದೃಷ್ಟಿಯುಳ್ಳವರಾಗಿದ್ದಾರೆ ಎಂಬುದನ್ನು ಅರಿವು ಮಾಡಿಕೊಡುತ್ತದೆ.

ಈ ಶುಭ ಸಂದರ್ಭದಲ್ಲಿ ಶ್ರೀ ಮಂಜುನಾಥಸ್ವಾಮಿ ಹಾಗೂ ಭಗವಾನ್ ಚಂದ್ರನಾಥಸ್ವಾಮಿ ಅವರಿಗೆ ದೀರ್ಘಾಯುರಾರೋಗ್ಯವನ್ನಿತ್ತು, ಸಕಲ ಸನ್ಮಂಗಲವನ್ನುಂಟುಮಾಡಲಿ ಹಾಗೂ ಇನ್ನೂ ಹೆಚ್ಚಿನ ನಾಡು ನುಡಿಯ ಸೇವೆ ಸಲ್ಲಿಸುವಂತೆ ಅನುಗ್ರಹಿಸಲಿ ಎಂದು ಪ್ರಾರ್ಥಿಸು ತ್ತೇನೆ.

ಅಭಿನಂದನಾ ಸ್ಮರಣ ಸಂಪುಟ ಪ್ರಕಾಶನ ಕಾರ್ಯ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಡಿ. ವೀರೇಂದ್ರ ಹೆಗ್ಗಡೆ

* * * *

ಪ್ರೊ॥ ಕಮಲಾ ಹಂಪನಾ ಅವರಿಗೆ ಐವತ್ತು ತುಂಬುತ್ತಿರುವುದು ಸಂತೋಷದ ಸಂಗತಿ ಏನೂ ಅಲ್ಲ. ಏಕೆಂದರೆ ವಯಸ್ಸು ಹೆಚ್ಚಿದಂತೆ ವ್ಯಕ್ತಿಯ ಶಕ್ತಿ ಸಾಮರ್ಥ್ಯಗಳೂ ನಿಧಾನ ವಾಗಿ ಕಡಮೆಯಾಗುತ್ತಾ ಹೋಗುವುದೆಂಬುದು ನನ್ನ ಅನುಭವಕ್ಕೆ ಬಂದ ವಿಷಯ. ಐವತ್ತು ಸಂವತ್ಸರದ ಅವಧಿಯಲ್ಲಿ ತಂಗಿ ಕಮಲಾ ಮಾಡಿದ ಮಹತ್ವದ ಕಾರ್ಯಗಳ ಬಗ್ಗೆ ವಿಚಾರ ಮಾಡಿದಾಗ ಅಭಿಮಾನವೆನ್ನಿಸುತ್ತದೆ. ಹೆಮ್ಮೆಯೆನಿಸುತ್ತದೆ. ಕರ್ತವ್ಯಶಾಲಿ ಪತಿಗೆ ಯಾವ ರೀತಿಯಲ್ಲೂ ಕಡಮೆ ಅಲ್ಲದ ಪಾಂಡಿತ್ಯ, ಪ್ರತಿಭೆ, ವಾಗ್ಮಿತೆ, ಲೇಖನಶಕ್ತಿ ಕಮಲಾ ಅವರಲ್ಲಿದೆ. ಕಮಲಾ ವೇದಿಕೆಯ ಮೇಲೆ ನಿಂತು ಮಾತನಾಡತೊಡಗಿದರೆ, ಮಳೆಗಾಲದಲ್ಲಿ ಗೋಕಾಕದ ತಡಸಲು ಬೋರ್ಗರೆದಂತೆ ಭಾಸವಾಗುತ್ತದೆ. ಇವರಷ್ಟು ಸುಂದರವಾಗಿ ನಿರರ್ಗಳವಾಗಿ ಮಾತನಾಡುವ ಮಹಿಳೆಯರು ವಿರಳ. ಕಮಲಕ್ಕನ ಸರಳತೆ, ಸಹಜತೆ, ಸೋದರತೆ, ಆತ್ಮೀಯತೆ, ಅಪರೂಪದ್ದು. ತಂಗಿ ಕಮಲಾ ನೂರು ವರುಷ ಬಾಳಿ ಆಧುನಿಕ ಕನ್ನಡದ ಅಮರ ಮಹಿಳೆಯಾಗಿ ಕೀರ್ತಿ ಗಳಿಸಲಿ.

ಬಸವರಾಜ ಕಟ್ಟೀಮನಿ

*　　*　　*　　*

ಶ್ರೀಮತಿ ಕಮಲಾ ಹಂಪನಾ ಅವರ ೫೦ನೆಯ ವರ್ಷದ ಹುಟ್ಟಿದ ಹಬ್ಬಕ್ಕೆ ಅವರ ಅಭಿಮಾನಿಗಳು ಒಂದು ಗೌರವದ ಗ್ರಂಥಗಳನ್ನು ಅರ್ಪಿಸಲಿರುವ ವಿಚಾರ ತಿಳಿದು ಬಹಳ ಸಂತೋಷವಾಯಿತು. ಸೃಜನಶೀಲ ಸಾಹಿತ್ಯ ಹಾಗೂ ವಿದ್ವತ್‌ಪ್ರಚಾರ ವಾಙ್ಮಯ ವಿವಿಧ ಕ್ಷೇತ್ರಗಳಲ್ಲಿ ಅವರ ಅನೇಕ ಕೃತಿಗಳು ಪ್ರಕಟವಾಗಿವೆ. ಆ ಕೃತಿಗಳಲ್ಲಿ ಒಂದು ವಿಶಿಷ್ಟ ಗುಣವೂ ಇದೆ. ಅವರ ವಿನಯ ಹಾಗು ಸಜ್ಜನಿಕೆಗಳು ಕಂಡುಕೊಂಡಿರುವ ಗುಣಾಂಶಗಳು.

ಇಂತಹ ಒಳ್ಳೆಯ ವ್ಯಕ್ತಿಗಳು ಸಮಾಜದ ಪ್ರಗತಿಗೆ ಅನೇಕ ಬಗೆಯಲ್ಲಿ ಕಾರಣರಾಗುತ್ತಾರೆ. ಶ್ರೀಮತಿ ಕಮಲಾ ಹಂಪನಾ ಅವರಿಗೆ ಹಾಗೂ ಅವರ ಕುಟುಂಬದವರಿಗೆ ಈ ಶುಭ ಸಮಯದಲ್ಲಿ ಸರ್ವ ವಿಧದ ಯಶಸ್ಸು–ಸಫಲತೆಗಳನ್ನು ಕೋರುತ್ತೇನೆ. ಸುಖ–ಶಾಂತಿಗಳು ಅವರವಾಗಲಿ.

ವಿ. ಕೃ. ಗೋಕಾಕ್

*　　*　　*　　*

ಸನ್ಮಿತ್ರರಾದ ಡಾ. ಹಂಪ. ನಾಗರಾಜಯ್ಯನವರ ಸಹಧರ್ಮಿಣಿಯೂ ಆದರ್ಶ ಕನ್ನಡ ಪ್ರಾಧ್ಯಾಪಕಿಯೂ ಆದ ಶ್ರೀಮತಿ ಕಮಲಾ ಅವರಿಗೆ ಐವತ್ತು ವರುಷ ತುಂಬಿರುವ ಈ ಶುಭ ಸಂದರ್ಭದಲ್ಲಿ ಭಗವಂತನು ಅವರಿಗೂ ಅವರ ಕುಟುಂಬದ ಎಲ್ಲರಿಗೂ ಆಯುರಾ ರೋಗ್ಯ ಐಶ್ವರ್ಯಾದಿಗನ್ನಿತ್ತು ಅನುಗ್ರಹಿಸಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಅವರ ಸಾಹಿತ್ಯ ಸೇವೆ ವಿಪುಲವೂ ಆಗಿದೆ. ಅವರು ಸಾಹಿತ್ಯ ಸೇವೆಯನ್ನು ಮುಂದುವರೆಸಿ ಕೊಂಡು ಹೋಗುತ್ತಾ ಕನ್ನಡದ ಸಂಪತ್ತನ್ನು ಹೆಚ್ಚಿಸಲೆಂದು ಕೋರುತ್ತೇನೆ.

ಕೆ. ಎಸ್. ನರಸಿಂಹಸ್ವಾಮಿ

ಖ್ಯಾತ ಲೇಖಕಿ ಶ್ರೀಮತಿ ಕಮಲಾ ಹಂಪನಾ ಅವರಿಗೆ ೫೦ ವರ್ಷ ತುಂಬುವ ಸಂದರ್ಭದಲ್ಲಿ ಅಭಿನಂದನ ಗ್ರಂಥವೊಂದನ್ನು ಅರ್ಪಿಸುವ ಯೋಜನೆಯನ್ನು ಹಾಕಿಕೊಂಡಿದ್ದೀರೆಂದು ತಿಳಿದು ಬಹಳ ಸಂತೋಷವಾಯಿತು. ಶ್ರೀಮತಿ ಕಮಲಾ ಹಂಪನಾ ಅವರು ಸುಮಾರು ಕಾಲು ಶತಮಾನ ಕಾಲ ಸಾಹಿತ್ಯಸೇವೆ ಮಾಡಿದ್ದಾರೆ, ಕವನ, ವಚನ ಮೊದಲಾದ ಸೃಜನಶೀಲ ಕೃತಿಗಳು, ಜೀವನ ಚರಿತ್ರೆ, ವ್ಯಕ್ತಿಚಿತ್ರ, ಸಾಹಿತ್ಯ ವಿಮರ್ಶೆ, ಸಂಶೋಧನೆ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ವ್ಯವಸಾಯ ಮಾಡಿ ಉತ್ತಮ ಕೃತಿಗಳನ್ನು ಕನ್ನಡಿಗರಿಗೆ ನೀಡಿದ್ದಾರೆ. ಸಾವಿರಾರು ಶಿಷ್ಯೆಯರಿಗೆ ಜ್ಞಾನದಾನ ಮಾಡಿ ಅವರ ಜೀವನದ ದೃಷ್ಟಿಯನ್ನೂ ಅಭಿರುಚಿಯನ್ನೂ ತಿದ್ದಿ ರೂಪಿಸಿದ್ದಾರೆ. ಇದಕ್ಕಾಗಿ ಅವರಿಗೆ ಕನ್ನಡಗರ ಕೃತಜ್ಞತೆ ಸಲ್ಲುತ್ತದೆ. ಅವರಿಗೆ ಅಭಿನಂದನ ಗ್ರಂಥವನ್ನು ಸಮರ್ಪಿಸುವ ಯೋಜನೆ ಸ್ವಾಗತಾರ್ಹ. ಭಗವಂತ ಶ್ರೀಮತಿ ಕಮಲಾ ಹಂಪನಾ ಅವರಿಗೆ ದೀರ್ಘಾಯುಸ್ಸನ್ನೂ ಆರೋಗ್ಯವನ್ನೂ ಕರುಣಿಸಲಿ, ಅವರ ಲೇಖನಿ ಹಿಂದಿನಂತೆಯೇ ನಿರಂತರವಾಗಿ ಹರಿದು ಕನ್ನಡ ಸಾಹಿತ್ಯದ ಮತ್ತು ವಿದ್ವತ್ತಿನ ಸಂಪತ್ತನ್ನು ಮತ್ತಷ್ಟು ಹೆಚ್ಚಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಎ. ಎನ್. ಮೂರ್ತಿರಾವ್

* * * *

ಪ್ರೊಫೆಸರ್ ಕಮಲಾ ಹಂಪನಾ ಅವರಿಗೆ ಐವತ್ತು ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಅವರಿಗೆ ಗೌರವ ಗ್ರಂಥವನ್ನು ಅರ್ಪಿಸುವ ಯೋಜನೆ ಉತ್ತಮವಾದ ಕಾರ್ಯ. ಇದನ್ನು ಕೈಕೊಂಡುದಕ್ಕೆ ನಾನು ಈ ಸಮಿತಿಯನ್ನು ಅಭಿನಂದಿಸುತ್ತೇನೆ.

ಶ್ರೀಮತಿ ಹಂಪನಾರವರ ಹೆಸರು ಸಾಹಿತ್ಯ, ಶಿಕ್ಷಣ ಮತ್ತು ಸಮಾಜ ಸೇವಾ ಕ್ಷೇತ್ರಗಳಲ್ಲಿ ತುಂಬ ಪರಿಚಿತವಾಗಿರುವ ಹೆಸರು. ತಮ್ಮ ಅಧ್ಯಾಪಕ ವೃತ್ತಿಯ ಜೊತೆಯಲ್ಲಿ ಜನೋಪಯುಕ್ತವಾದ ಮತ್ತು ಉನ್ನತ ಮೌಲ್ಯದ ಆದರ್ಶಗಳ ಕಡೆಗೆ ಜನರನ್ನು ಸೆಳೆಯುತ್ತಾರೆ. ಮಹಿಳಾ ಕಾರ್ಯಕರ್ತರಲ್ಲಿ ಇವರು ಅಗ್ರಪಂಕ್ತಿಗೆ ಸೇರುತ್ತಾರೆ. ಶಿಕ್ಷಣದ ಇಂದಿನ ಪರಿಸ್ಥಿತಿಯಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುವುದಕ್ಕೂ ಬಹಳ ವಿವೇಕ ತಾಳ್ಮೆ ನಿಜವಾದ ವಿದ್ವತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಒಲಿಸಿಕೊಳ್ಳುವ ಚಾತುರ್ಯ ಇವು ಬೇಕು. ಜೊತೆಗೆ ಉನ್ನತಮಟ್ಟದ ವಿದ್ವತ್ತನ್ನು ಸಂಪಾದಿಸಿ ಅದಕ್ಕಾಗಿ ಸಹ ಶಿಕ್ಷರು ತಮ್ಮನ್ನು ಗೌರವಿಸುವಂತೆ ನಡೆಯಬೇಕು. ಪಠ್ಯದ ವಿಷಯವನ್ನು ಕರತಲಾಮಲಕವಾಗಿ ಮಾಡಿಕೊಂಡು ಏಕಾಗ್ರತೆಯಿಂದ ಮನಮುಟ್ಟುವಂತೆ ಬೋಧಿಸಬೇಕು. ಪಾಠವನ್ನು ಸಿದ್ಧಪಡಿಸಿಕೊಳ್ಳದೆ–ಆತ್ಮ ವಿಶ್ವಾಸದಿಂದ ಬೋಧಿಸದಿದ್ದರೆ ವಿದ್ಯಾರ್ಥಿಗಳು ಉಪಾಧ್ಯಾಯರನ್ನು ಗೌರವಿಸುವುದಿಲ್ಲ. ವಿದ್ಯಾರ್ಥಿಗಳನ್ನು ಅವರಿಗೆ ಅತಿಸಲಿಗೆ ಕೊಡದೆ ಹತೋಟಿಯಲ್ಲಿ ಇಟ್ಟುಕೊಳ್ಳುವುದು ಉಪಾಧ್ಯಾಯರಿಗೆ ಕಷ್ಟ. ಅದಕ್ಕೆ ಉಪಾಧ್ಯಾಯರಿಗೆ ವಿದ್ವತ್ತು ಮತ್ತು ಆಕರ್ಷಕವಾದ ಬೋಧನಾಶಕ್ತಿ ಇರಬೇಕು. ತಮ್ಮ ವಿಶೇಷ ಗುಣಗಳಿಂದ ಶ್ರೀಮತಿ ಕಮಲಾ ಹಂಪನಾ ಉತ್ತಮ ಪ್ರಾಧ್ಯಾಪಕರೆಂಬ ಹೆಸರನ್ನು ಗಳಿಸಿದ್ದಾರೆ. ಅವರು ವಿದ್ಯಾರ್ಥಿಗಳಂತೆ ಪಠ್ಯಪುಸ್ತಕಗಳನ್ನೆಲ್ಲ ಚೆನ್ನಾಗಿ ಓದುತ್ತಾರೆ. ಆ ವಿಷಯಕ್ಕೆ ಸಂಬಂಧಿಸಿದ ಇತರ ವಿಶೇಷ ಸಂಗತಿಗಳನ್ನೆಲ್ಲ ವ್ಯಾಸಂಗ ಮಾಡುತ್ತಾರೆ. ಅವರು ಅನೇಕ ವಿಷಯಗಳನ್ನು ಕುರಿತು ಅನೇಕ ಗ್ರಂಥಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ.

ಶ್ರೀಮತಿ ಕಮಲಾ ಒಳ್ಳೆಯ ಲೇಖಕಿ ಮತ್ತು ಗ್ರಂಥಕರ್ತೃ. ಅವರು ಕೃತಿರಚನೆ ವಿಶಾಲವೂ ವೈವಿಧ್ಯಪೂರ್ಣವೂ ಆಗಿದೆ. ಅವರು ಸುಮಾರು ಮುವ್ವತ್ತು ಪುಸ್ತಕಗಳನ್ನು ಬರೆದಿದ್ದಾರೆ. ಅಧ್ಯಾಪಕ ವೃತ್ತಿಯಂಥ ಪೂರ್ಣ ಅವಧಿಯ ಉದ್ಯೋಗದಲ್ಲಿದ್ದು ಇಷ್ಟು ಸಾಹಿತ್ಯ ರಚನೆ ಮಾಡಿರುವುದು. ಅವರ ವೈವಿಧ್ಯ ಚಟುವಟಿಕೆಯ ದ್ಯೋತಕವಾಗಿದೆ. ಅವರ ಸಾಹಿತ್ಯ ರಚನೆಯಲ್ಲಿ ಸಣ್ಣ ಕಥೆಗಳು, ಜೀವನದ ಚರಿತ್ರೆ, ವ್ಯಕ್ತಿಚಿತ್ರಗಳು. ವಿಮರ್ಶಕ ಗ್ರಂಥಗಳು, ವಚನಗಳು ಇವುಗಳೆಲ್ಲ ಸೇರಿವೆ. ಶ್ರೀಮತಿ ಕಮಲಾ ಶಿಶು ಸಾಹಿತ್ಯವನ್ನೂ ಅನೇಕವಾಗಿ ರಚಿಸಿದ್ದಾರೆ. ನಾಡಿನ ಅನೇಕ ವಿದ್ವತ್ ಸಂಕಲನಗಳು ಸ್ಮರಣ ಸಂಚಿಕೆಗಳು ಇವುಗಳಲ್ಲೆಲ್ಲ ಇವರ ಲೇಖನಗಳು ಅಚ್ಚಾಗಿವೆ. ಶ್ರೀಮತಿ ಕಮಲಾ ಹಂಪನಾರವರು ಒಳ್ಳೆಯ ವಿಮರ್ಶಕರೂ ಹೌದು. ಅವರು ಗೋವಿಂದ ಪೈ, ಬಿ. ಎಂ. ಶ್ರೀ., ಜನ್ನ, ರತ್ನಾಕರ ಇವರನ್ನೆಲ್ಲ ಕುರಿತು ಉತ್ತಮ ವಿಮರ್ಶಕ ಭಾಷಣಗಳನ್ನು ಮಾಡುತ್ತಾರೆ. ಯಾವ ವಿಷಯದ ಮೇಲೆಯೂ ಮುಖ್ಯವಾಗಿ ಸಾಹಿತ್ಯ ಸಂಸ್ಕೃತಿ ಕುರಿತು ಉತ್ತಮ ವಿಮರ್ಶಕ ಭಾಷಣಗಳನ್ನು ಮಾಡುತ್ತಾರೆ. ಯಾವ ವಿಷಯದ ಮೇಲೆಯೂ ಮುಖ್ಯವಾಗಿ ಸಾಹಿತ್ಯ ಸಂಸ್ಕೃತಿ ಕುರಿತು ನಿಂತನಿಲುವಿನಲ್ಲಿ ಉತ್ತಮವಾದ ಭಾಷಣವನ್ನು ಮಾಡಬಲ್ಲರು. ಇವರು ಆಧುನಿಕ ಸಮಸ್ಯೆಗಳು ಮತ್ತು ತೀವ್ರತರ ಬದಲಾವಣೆಗಳಿಗೆ ಸ್ಪಂದಿಸುವ ಮನೋಭಾವ ವುಳ್ಳವರು. ಮನಸ್ಸು ಮತ್ತು ಬುದ್ಧಿಯನ್ನು ಹಗುರವಾದ ಲವಲವಿಕೆಯ ಮಟ್ಟದಲ್ಲಿ ಇಟ್ಟುಕೊಂಡಿದ್ದಾರೆ.

ಈ ಇಪ್ಪತ್ತು ವರುಷಗಳಲ್ಲಿ ಶ್ರೀಮತಿ ಕಮಲಾರವರು ತಮ್ಮ ಉದ್ಯೋಗ ಸಾಹಿತ್ಯ ಕೃಷಿ ಗೃಹಕೃತ್ಯ ಎಲ್ಲದರಲ್ಲಿಯೂ ಸಾಮರಸ್ಯವನ್ನೂ ತೃಪ್ತಿಯನ್ನೂ ಸಾಧಿಸಿಕೊಂಡಿದ್ದಾರೆ. ಸಮಾಜ ವ್ಯವಸ್ಥೆಯಲ್ಲಿ ಸಾಮರಸ್ಯ ಹಿಂದುಳಿದ ವರ್ಗದಲ್ಲಿ ಜನಿಸಿದರೂ ಅವರು ಸ್ವಸಾಮರ್ಥ್ಯ ಆತ್ಮಾಭಿಮಾನ ಆದರ್ಶವಾದಗಳಿಂದ ಉನ್ನತಶಿಖರವನ್ನು ಏರಿದ್ದಾರೆ. ಈ ದಂಪತಿಗಳಲ್ಲಿ ಒಂದು ಅಪೂರ್ವ ಅಂಶವೆಂದರೆ ಇಬ್ಬರೂ ವಿದ್ಯಾವಂತರು, ಇಬ್ಬರೂ ಲೇಖಕರು, ಆತ್ಮಾಭಿಮಾನಿಗಳು. ಇವರಲ್ಲಿ ಭಿನ್ನಾಭಿಪ್ರಾಯಗಳೂ ಬರಬಹುದು. ಇವುಗಳನ್ನೆಲ್ಲ ಇವರು ನಿಭಾಯಿಸಿಕೊಂಡು ಸಂಸಾರವನ್ನು ಬೆಳೆಸಿ ನಡೆಸಿಕೊಂಡು ಬರುತ್ತಿದ್ದಾರೆ. ಕಮಲಾ ಹಂಪನಾರವರ ಸಾಧನೆ ಅನುಕರಣೀಯ.

ಒಬ್ಬ ವ್ಯಕ್ತಿಯ ಆಯುಸ್ಸಿನಲ್ಲಿ, ಐವತ್ತು ವರ್ಷ ಕೇವಲ ಅರ್ಧ ಭಾಗ ಮಾತ್ರ. ಮುಂದೆ ಇನ್ನೂ ಅರ್ಧಭಾಗ ಅನುಭವದಿಂದ ಪಕ್ವವಾದ ಆಯುಷ್ಯವಿದೆ, ಉತ್ಸಾಹವಿದೆ. ಸಂಸಾರ ಜೀವನದಲ್ಲಿ ತೃಪ್ತಿಯೂ ಶಾಂತಿ ಸಮರಸವೂ ಇದೆ. ಇವರು ದೀರ್ಘಾಯುಷಿಗಳಾಗಿ ನಮ್ಮ ಸಾಹಿತ್ಯಕ್ಕೂ ಸಮಾಜಕ್ಕೂ ಶಿಕ್ಷಣ ವೃತ್ತಿಗೂ ಇನ್ನೂ ಹೆಚ್ಚು ಮೌಲ್ಯದ ಕೊಡುಗೆ ಗಳನ್ನು ನೀಡಲಿ ಎಂದು ಹಾರೈಸುತ್ತೇನೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್

* * * *

ಸೋದರಿ ಕಮಲಾ ಹಂಪನಾ ಅವರಿಗೆ ಅಭಿನಂದನ ಗ್ರಂಥ ಅರ್ಪಿತವಾಗಲಿದೆಯೆಂಬ ಸಂಗತಿ ತಿಳಿದು ಹಿಡಿಸಲಾರದಷ್ಟು ಹಿಗ್ಗಾಯಿತು. ಕನ್ನಡ ಲೇಖಕಿಯರ ಪ್ರಥಮ ಶ್ರೇಣಿಯಲ್ಲಿರುವ ಅವರು ಈ ಗೌರವಕ್ಕೆ ಸರ್ವಥಾ ಅರ್ಹರು.

ಅವರ ವ್ಯಾಸಂಗಪ್ರಿಯತೆ, ಸೃಜನಶೀಲತೆ, ವಿನಯಪರತೆ, ಕನ್ನಡ ಸೇವಾತತ್ಪರತೆಗಳನ್ನು ನಾನು ತುಂಬ ಮೆಚ್ಚಿಕೊಂಡಿದ್ದೇನೆ ; ನನ್ನ ಮನೆಯವರೆಲ್ಲ ಮೆಚ್ಚಿಕೊಂಡಿದ್ದಾರೆ. ಅವರಿಗೆ ಈ ಗೌರವ ದೊರೆಯುತ್ತಲಿರುವುದು ನಮಗೆಲ್ಲ ಹಬ್ಬ.

ಕನ್ನಡ ತಾಯಿ ಅವರಿಗೆ ದೀರ್ಘಾಯು, ಸದೃಢ ಆರೋಗ್ಯ, ಸಫಲತೆ, ಸಂತೃಪ್ತಿಗಳನ್ನು ಕರುಣಿಸಿ ಕನ್ನಡ ನಾಡು ನುಡಿಗಳಿಗೆ ಅವರಿಂದ ಸ್ಮರಣೀಯ ಸೇವೆ ಸಲ್ಲುವಂತೆ ಮಾಡಲೆಂದು ಹಾರೈಸುತ್ತೇನೆ.

ಸಿದ್ಧಯ್ಯ ಪುರಾಣಿಕ

*　　*　　*　　*

ಶ್ರೀಮತಿ ಕಮಲಾ ಹಂಪನಾ ಅವರು ನನಗೆ ಬಹುದಿನಗಳಿಂದ ಪರಿಚಿತರು. ಅವರು ಸಾಹಿತ್ಯ, ವ್ಯಾಸಂಗ ರಂಗಗಳಲ್ಲಿ ಬೆಳೆದು ದೊಡ್ಡ ಸ್ಥಾನಕ್ಕೆ ಏರಿದುದು, ಹಿರಿಯರ ಬಗೆಗೆ ಅವರು ಎಂದಿನ ಸೌಜನ್ಯಪೂರ್ಣ ಗೌರವ ಭಾವನೆಯನ್ನು ಉಳಿಸಿಕೊಂಡು ಬಂದಿರುವುದು ನನಗೆ ಸಂತೋಷಕರವಾಗಿದೆ. ಅವರ ಅಭಿಮಾನಿಗಳು ಈಗ ಅವರ ಸುವರ್ಣ ಮಹೋತ್ಸವದ ಆಚರಣೆಯನ್ನು ಹಮ್ಮಿಕೊಂಡಿರುವುದು ಅವರ ಬೆಳವಣಿಗೆಯನ್ನು ಆಸ್ಥೆಯಿಂದ ನಿರೀಕ್ಷಿಸಿದ ನನಗೆ ಅಭಿಮಾನದ ಸಂಗತಿಯಾಗಿದೆ. ಶ್ರೀಮತಿಯವರ ಸಾಹಿತ್ಯ ಸೇವೆ ಉತ್ತರೋತ್ತರ ಬೆಳೆಯಲಿ. ಪರಮಾತ್ಮನು ಅವರಿಗೆ ಆರೋಗ್ಯ, ನಲಿವು, ಬೆಳಕು, ಗೆಲುವುಗಳನ್ನು ದಯಪಾಲಿಸಲಿ.

ಸ. ಸ. ಮಾಳವಾಡ

*　　*　　*　　*

'ಬಿಂದಲಿ'ಯನ್ನು ಶ್ರೀಮತಿ ಕಣವಿಯವರು ಮೊದಲು ಓದಿದರು. ಆಮೇಲೆ ನಾನು ಓದಿದೆ. ಕೆಲವು ವಚನಗಳು ಇಬ್ಬರ ಕುತೂಹಲವನ್ನೂ ತಣಿಸಿದವು.

ನಿಮ್ಮ ಮನಸ್ಸನ್ನು ಕಾಡುವ ಕೆಲವು ವಿವರಗಳು, ಭಾವನೆಗಳು ಆ ಕ್ಷಣದ ಚಿಂತನೆಗಳು ಅಲ್ಲಲ್ಲಿ ಚೆನ್ನಾಗಿ ಅಭಿವ್ಯಕ್ತಗೊಂಡಿವೆ. ಕೆಲವಂತೂ ಒಂದಲ್ಲ ಒಂದು ರೀತಿಯಿಂದ ನಿಮ್ಮ ತುಡಿತವನ್ನು ಓದುಗರಿಗೆ ಪರಿಣಾಮಕಾರಿಯಾಗಿ ಮುಟ್ಟಿಸಬಲ್ಲವು. ೧೮ ತುಂಬ ಸುಂದರ ; ೧೯ ರಲ್ಲಿಯ ಭಾವೋತ್ಕಟತೆ ಧ್ವನಿಪೂರ್ಣವಾಗಿದೆ. ೨೨, ೨೭, ೪೭ ಜೋಕುಗಳಿಗೆ ಈ ರೂಪ ತೊಡಿಸಿದಂತಿದೆ. ಕೆಲವುಗಳ ಧೋರಣೆಯು ಸರಿಯಿಲ್ಲವೆನಿಸಿದರೆ ಮತ್ತೆ ಕೆಲವುಗಳ ವಿಚಾರಗಳು ಸಮಗ್ರ ದೃಷ್ಟಿಗೂ ಸತ್ಯತೆಗೂ ಎರವಾಗಿದೆ ಎನಿಸುತ್ತದೆ. 'ಬಿಂದಲಿಗೊಂದು ಹರಳು' ನನಗೆ ಹೆಚ್ಚು ಮೆಚ್ಚಿಗೆಯಾಯಿತು. ಅಲ್ಲಿಯ ಬರವಣಿಗೆಯ ಚೊಕ್ಕ ಹಾಗೂ ಪ್ರಾಮಾಣಿಕತೆ. ಆಧುನಿಕ ವಚನಕಾರರಲ್ಲಿ ನೀವೂ ಒಬ್ಬರಾದುದು ತುಂಬ ಸಂತೋಷದ ಸಂಗತಿ. ಐವತ್ತು ವರ್ಷ ತುಂಬುತ್ತಿರುವ ಶುಭ ಸಂದರ್ಭದಲ್ಲಿ ನಮ್ಮಿಬ್ಬರ ಶುಭಾಶಯಗಳು.

ಚನ್ನವೀರ ಕಣವಿ

ಹೊಂದಾವರೆ

ನಾಡಿನಲ್ಲಿ ಹೆಸರಾಂತ ಲೇಖಕಿ ಪ್ರೊ. ಕಮಲಾ ಹಂಪನಾ ಅವರಿಗೆ ೫೦ ವರ್ಷ ತುಂಬಿದೆ ಸಂದರ್ಭದಲ್ಲಿ ಅವರ ಅಭಿಮಾನಿ ಬಳಗದವರು ಅವರ ಬದುಕು ಬರೆಹಗಳನ್ನೊಳಗೊಂಡ ಗೌರವ ಗ್ರಂಥವನ್ನು ಹೊರತರುವ ಯೋಜನೆಯನ್ನು ಕೈಗೊಂಡದು ನಮಗೆ ತುಂಬಾ ಸಂತೋಷ ತಂದಿದೆ. ಕಳೆದ ಸುಮಾರು ೧೨ ವರ್ಷಗಳಿಂದ ಶ್ರೀಮತಿಯವರನ್ನು ಹತ್ತಿರದಿಂದ ಬಲ್ಲ ನನಗೆ ಅವರ ಬಗ್ಗೆ ಎರಡು ಮಾತುಗಳನ್ನು ಬರೆಯಲು ಹರ್ಷವೆನಿಸುತ್ತಿದೆ.

ಮೊದಲು ದಿ॥ ಕೆ. ಎಸ್. ಧರಣೇಂದ್ರಯ್ಯನವರ ಬಳಗದಲ್ಲಿ ಹಾಗೂ ಅನಂತರ ಶ್ರೀಮಾನ್ ಹಂಪ. ನಾಗರಾಜಯ್ಯನವರ ಮೆಚ್ಚಿನ ಮಡದಿಯಾಗಿ, ಸಾಹಿತಿ ಮತ್ತು ಸಾಹಿತ್ಯ ಪ್ರೇಮಿಯಾಗಿ ಅವರು ಅನೇಕ ಬಾರಿ ಧರ್ಮಸ್ಥಳಕ್ಕೆ ಆಗಮಿಸಿದ್ದಾರೆ. ಇಲ್ಲಿನ ಸಾಹಿತ್ಯ ಸಮ್ಮೇಳನ ಹಾಗೂ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲುಗೊಂಡಿದ್ದಾರೆ. ಹೆಗ್ಗಡೆ ಕುಟುಂಬದವರ ಅಭಿಮಾನಿಗಳಾಗಿ, ಆತ್ಮೀಯರಾಗಿರುವ ಶ್ರೀಮತಿ ಕಮಲಾ ಹಂಪನಾ ಅವರು ತಮ್ಮ ಕೆಲವೊಂದು ಗ್ರಂಥಗಳಲ್ಲಿ ನಮ್ಮ ಬಗ್ಗೆ ಹಾಗೂ ನಾವು ನಂಬಿದ ಆದರ್ಶಗಳ ಬಗ್ಗೆ ಮನಸಾರೆ ಮೆಚ್ಚಿ ಉಲ್ಲೇಖಿಸಿದುದುಂಟು. ಹೀಗೆ ಹತ್ತು ಹಲವು ರೀತಿಯಲ್ಲಿ ನಮಗೆ ಮೆಚ್ಚುಗೆಯವರಾಗಿರುವ ಶ್ರೀಮತಿ ಕಮಲಾ ಹಂಪನಾ ಅವರು ಹಂತ ಹಂತವಾಗಿ ಸಾಹಿತ್ಯಕ್ಷೇತ್ರದಲ್ಲಿ ಏರಿ, ಬೆಳಗಿ ಬಂದುದನ್ನು ಕಂಡು ನಾವೆಲ್ಲ ಸಂತಸಗೊಂಡಿದ್ದೇವೆ. ಇಂದು ಅವರಿಗೆ ೫೦ ವಸಂತಗಳು ತುಂಬಿವೆ. ಎಂದಾಗ ಆಶ್ಚರ್ಯದೊಂದಿಗೆ, ಅಭಿಮಾನವೂ ಆಗುತ್ತಿದೆ. ಈ ಶುಭಸಂದರ್ಭದಲ್ಲಿ ಇಂತಹ ಸ್ತುತ್ಯ ಕಾರ್ಯ ಮಾಡುತ್ತಿರುವವರೆಲ್ಲರನ್ನೂ ಅಭಿನಂದಿಸಬೇಕಾಗಿದೆ.

'ಗೃಹಿಣೀ ಗೃಹಮುಚ್ಯತೇ' ಎಂಬ ಆಯೋಕ್ತಿಗನುಸಾರವಾಗಿ ಒಂದು ಮನೆಯ ಹಲವಾರು ಜವಾಬ್ದಾರಿಗಳನ್ನು ಶ್ರದ್ಧೆಯಿಂದ ಸಮರ್ಪಕವಾಗಿ ನಿರ್ವಹಿಸುವ ಆದರ್ಶ ಗೃಹಿಣಿಯಾಗಿ, ಪ್ರಥಮ ದರ್ಜೆಯ ಸರಕಾರಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಿಕೆಯಾಗಿ ತನ್ನ ಅತ್ಯುತ್ತಮ ಪಾಠ ಪ್ರವಚನ ವಿಧಾನದ ಮೂಲಕ ಸಾವಿರಾರು ವಿದ್ಯಾರ್ಥಿ–ವಿದ್ಯಾರ್ಥಿನಿಯರ ಹೃದಯವನ್ನು ಗೆದ್ದ ಓರ್ವ ಮಹಿಳೆಯು ಸಾಹಿತ್ಯ ಕ್ಷೇತ್ರದಲ್ಲೂ ತನ್ನ ಅಸಮಾನ್ಯವಾದ ಲೇಖನಿಯ ಬಲದಿಂದ ಲಕ್ಷಾಂತರ ಓದುಗರ ಹೃನ್ಮನಗಳನ್ನೂ ಸೆಳೆದಿದ್ದಾರೆಂದರೆ ಅಚ್ಚರಿಯ ಮೇಲೆ ಅಚ್ಚರಿಯೇ ಸೈ.

ಜವಾಬ್ದಾರಿಯ ಮೇಲೆ ಜವಾಬ್ದಾರಿಗಳು ಬಿದ್ದರೂ ಅವೆಲ್ಲವನ್ನೂ ಅತ್ಯಂತ ಸಮರ್ಪಕವಾಗಿ, ತೂಕವರಿತು ಪೂರೈಸುವ ಹಾಗೂ ಇತರರಿಗೊಂದು ಮಾದರಿಯೆನ್ನಬಹುದಾದ ಆದರ್ಶ ವ್ಯಕ್ತಿತ್ವವನ್ನು ರೂಪಿಸಿಕೊಂಡ ಶ್ರೀಮತಿ ಕಮಲಾ ಹಂಪನಾ ಅವರು ನಮ್ಮ ನಾಡಿನ ಮಹಿಳೆಯರಿಗೆಲ್ಲಾ ದಾರಿದೀಪವಾಗಿದ್ದಾರೆ.

ತಮ್ಮ ಪತಿಯ ವ್ಯಕ್ತಿತ್ವದ ಬೆಳಕಿನಲ್ಲಿ ತಮ್ಮ ಹಿರಿಮೆಯನ್ನು ಮೆರೆಯುವ ಮಂದಿ ಬಹಳಷ್ಟಿರಬಹುದು. ; ಆದರೆ ತಮ್ಮ ಸ್ವಕೀಯವಾದ ವ್ಯಕ್ತಿತ್ವ ಮತ್ತು ಕೃತಿರಚನಾ ಸಾಮರ್ಥ್ಯದಿಂದ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಗಣ್ಯತೆಯನ್ನೂ ಪಡೆಯುವ ಮಾನ್ಯತೆಯನ್ನೂ ಅರ್ಹತೆಯನ್ನೂ ಸಂಪಾದಿಸಿರುವ ಶ್ರೀಮತಿ ಕಮಲಾ ಹಂಪನಾ ಅವರ 'ಐವತ್ತು' ವಸಂತಗಳ ತುಂಬು ಅನುಭವದ ಪ್ರತಿಭಾಸಂಪತ್ತಿಯು ಕನ್ನಡ ಸಾಹಿತ್ಯ ಪ್ರೇಮಿಗಳಿಗೆ ಸಮೃದ್ಧ ಕೃತಿಗಳ ರೂಪದಲ್ಲಿ ಸಂತೃಪ್ತಿಯನ್ನು ನೀಡಲಿದೆ ಎಂಬಲ್ಲಿ ಸಂದೇಹವಿಲ್ಲ.

ಭಾರತೀಯ ಸಂಸ್ಕೃತಿ, ಧರ್ಮ, ಕಲೆ ಸಾಹಿತ್ಯಗಳ ಬಗೆಗೆ ಅಪಾರವಾದ ಅಭಿಮಾನವನ್ನು ಮೈಗೂಡಿಸಿಕೊಂಡು, ವಿಶೇಷಾಸಕ್ತಿಯಿಂದ ಅಧ್ಯಯನ ಮಾಡಿದ ಅವರು ತಮ್ಮ ಸಾಹಿತ್ಯ ಕೃತಿಗಳ ಮೂಲಕ ನಾಡಿನ ಲಕ್ಷಾಂತರ ಮಂದಿ ಸಾಹಿತ್ಯ ಪ್ರೇಮಿಗಳಿಗೆ ತಮ್ಮ ಅಧ್ಯಯನದ ಫಲವು ದೊರಕುವಂತೆ ಮಾಡಿದ್ದಾರೆ. ಪ್ರಾಧ್ಯಾಪಿಕೆಯಾಗಿ ತರಗತಿಯೊಳಗೆ ಅಧ್ಯಯನಾ ಕಾಂಕ್ಷಿಗಳ ಮನಸ್ಸನ್ನು ಗೆದ್ದಂತೆಯೇ ಸಮ್ಮೇಳನ, ವಿಚಾರಸಂಕಿರಣ, ಸಭೆ ಸಮಾರಂಭಗಳಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನರ ಹೃದಯಗಳನ್ನು ಸೂರೆಗೊಂಡಿದ್ದಾರೆ.

ಸಣ್ಣಕಥೆ, ಶಿಶುಸಾಹಿತ್ಯ, ಸಂಶೋಧನೆ, ಜೀವನ ಚರಿತ್ರೆ, ಸಂಪಾದನೆ–ಮೊದಲಾಗಿ ಹತ್ತಾರು ಕ್ಷೇತ್ರಗಳಲ್ಲಿ ಕೃತಿರಚನೆ ಮಾಡಿರುವ ಶ್ರೀಮತಿಯವರ ಲೇಖನಿಯು ವಿಶೇಷವಾಗಿ ಸಮಾಜದ ಶೋಷಿತ ಮಹಿಳೆಯರ ಕಣ್ಣೀರಿಗೆ ಅಭಿವ್ಯಕ್ತಿ ನೀಡುವಲ್ಲಿ ಯಶಸ್ವಿಯಾಗಿದೆ. ಹಾಗೂ ಓದುಗರ ಹೃದಯವನ್ನು ಕಲಕಿ, ಗಾಢವಾಗಿ ಚಿಂತಿಸುವಂತೆ ಮಾಡುತ್ತದೆ. ಮೂಲಭೂತವಾಗಿ ಸಾಹಿತ್ಯವು ತನ್ನ ಓದುಗರಲ್ಲಿ ಮಾಡಬೇಕಾದ ಹೃದಯ ಪರಿವರ್ತನೆಯ ದೃಷ್ಟಿಯಿಂದ ಅವರ ಕತೆಗಳು ಅತ್ಯಂತ ಯಶಸ್ವಿಯಾಗಿವೆಯೆನ್ನಬಹುದು.

ಅಕ್ಕಮಹಾದೇವಿ, ಹೆಳವನಕಟ್ಟೆ ಗಿರಿಯಮ್ಮ, ವೀರವನಿತೆ ಓಬವ್ವೆ, ಜನ್ನ, ಅಂಬೇಡ್ಕರ್ ಆದರ್ಶ ಜೈನ ಮಹಿಳೆಯರು, ಮುಡಿಮಲ್ಲಿಗೆ ಮೊದಲಾದ ಅವರ ಕೃತಿಗಳನ್ನು ಗಮನಿಸಿ ದರೆ, ಶ್ರೀಮತಿಯವರ ಆಸಕ್ತಿಯ ಕ್ಷೇತ್ರಗಳು ಯಾವುದೆಂಬುದನ್ನು ಅರ್ಥಮಾಡಿಕೊಂಡಾಗ, ಸಾಹಿತ್ಯ ಕ್ಷೇತ್ರದಲ್ಲಿನ ಅವರ ಆದರ್ಶೋನ್ಮುಖ ಪ್ರವೃತ್ತಿಯ ಬಗ್ಗೆ ತಲೆದೂಗಲೇಬೇಕಾ ಗುತ್ತದೆ.

ಸೊಬಗಿನ ಮನೆಯೊಂದರ ಹೊಣೆಯರಿತ ಒಡತಿಯಾಗಿ, ಮುದ್ದುಮಕ್ಕಳಿಗೆ ಮಮತೆಯ ಮಾತೆಯಾಗಿ, ಪತಿಯ ಪಾಲಿಗೆ ಒಲವಿನ ಸತಿಯಾಗಿ, ವಿದ್ಯಾರ್ಥಿಗಳಿಗೆ ಪ್ರಾಧ್ಯಾಪಿಕೆಯಾಗಿ, ಕನ್ನಡ ನಾಡಿನ ವಾಚಕರ ದೃಷ್ಟಿಯಲ್ಲಿ ಉತ್ತಮ ಬರೆಹಗಾರ್ತಿಯಾಗಿ, ಮೂವತ್ತೈಕ್ಕೂ ಮಿಕ್ಕಿ ಕೃತಿ ರಚನೆ ಮಾಡಿದ ಶ್ರೀಮತಿ ಕಮಲಾ ಹಂಪನಾ ಅವರ ಆದರ್ಶವು ನಮ್ಮ ನಾಡಿನ ಎಲ್ಲಾ ಮಹಿಳೆಯರ ಪಾಲಿಗೆ ಅನುಕರಣೀಯವಾಗಿದೆಯೆಂದರೆ ಅತಿಶಯೋಕ್ತಿ ಯೆನಿಸದು.

ಶ್ರೀಮತಿಯವರು ನೂರ್ಕಾಲ ಬಾಳಿ, ಕನ್ನಡ ಸಾಹಿತ್ಯರಂಗ ಹಾಗೂ ಶಿಕ್ಷಣ ರಂಗಗಳಿಗೆ ಇನ್ನಷ್ಟು ಅಮೂಲ್ಯ ಸೇವೆ ಸಲ್ಲಿಸಿ, ನಾಡಿನ ಮಹಿಳೆಯರಿಗೆ ಮತ್ತಷ್ಟು ಮಾರ್ಗದರ್ಶನದ ಬೆಳಕು ನೀಡುತ್ತಿರುವಂತೆ ಅನುಗ್ರಹಿಸಲೆಂದೂ ಶ್ರೀಮತಿಯವರಿಗೂ ಅವರ ಮನೆಯವ ರೆಲ್ಲರಿಗೂ ಪೂರ್ಣವಾದ ಆರೋಗ್ಯಾದಿ ಸಕಲ ಸಂಪತ್ತು ಒದಗಿಸಲೆಂದೂ ದಯಾಮಯ ರಾದ ಭಗವಾನ್ ಶ್ರೀ ಮಂಜುನಾಥಸ್ವಾಮಿ, ಶ್ರೀ ಬಾಹುಬಲಿಸ್ವಾಮಿ ಹಾಗೂ ಧರ್ಮ ದೇವತೆಗಳನ್ನು ಪ್ರಾರ್ಥಿಸುತ್ತೇನೆ.

ಮಾತೃಶ್ರೀ ರತ್ನಮ್ಮ

ಕಮಲಾ ಹಂಪನಾ ಅವರ ವಚನಗಳು

ಎಲ್ಲ ಬಿ.ಟಿ.ಎಸ್. ಬಸ್ಸಿನಲೂ
ಕುಳಿತಿಹರು ಸ್ತ್ರೀಯರ ಜಾಗವಲಿ
ಮೀಸೆವೊತ್ತಣ್ಣಂಗಳು
ಹೆಂಗಸರನು ಹೆಂಗಸರಾಗಿರಲು ಬಿಡರು
ತಾವೂ ಗಂಡಸರಾಗರು
ಎಲ್ಲಿ ನೋಡಿದರು ಹಬ್ಬುತಿದೆ
ಈ ಬೃಹನ್ನಳೆಯ ಸಂತತಿ
ಅದಕೆ ಆಗಿದೆ ನೋಡಾ ದೇಶಕೆ
ಈ ದುರ್ಗತಿ ಕಮಲಾಪ್ರಿಯ ।

ಬಾಯಾರಿ ಬಂದವಳಿಗೆ ನೀರನುಣಿಸಿದೆ
ಹಸಿದು ಬಂದವಳಿಗೆ ಅನ್ನನೀಡಿದೆ
ಬೆದರಿ ಭಯಗೊಂಡವಳಿಗೆ ಅಭಯ ನೀಡಿದೆ
ಬಸವಳಿದು ಬೆಂಡಾದವಳಿಗೆ
ಹಾಲೆರೆದು ಪೋಷಿಸಿದೆ ಸಂತಸದೆ
ಕಿರುಗತೆ ತಂದಿತ್ತವಳ ಕತೆಗಾರ್ತಿ
ಮಾಡಿ ಮೇಲೇರಿಸಿದೆ
ಕವನ ಒಂದಿತ್ತವಳ ಕವಯತ್ರಿ ಮಾಡಿ ಮೆರೆಸಿದೆ
ನಾನೇ ಬೆಳೆಸಿದ ಕೂಸೆಂದು ಕಂಡು ಆನಂದಿಸಿದೆ
ಹಾಲುಂಡ ಸರ್ಪ ಮಾಡಿತಾದರೂ ಏನು
ಕಚ್ಚಿತು, ವಿಷವ ಕಾರಿತು
ಇದ ಮೀರಿ ಮೇಲೇರಲೆಂತು
ಸಾಧ್ಯ ಅದಕೆ ಹೇಳಾ ಕಮಲಾಪ್ರಿಯ ।

ದೊಡ್ಡದಲ್ಲ ಬದುಕಿಗಿಂತ ಭಾಷೆ
ದೊಡ್ಡದಲ್ಲ ಬದುಕಿಗಿಂತ ಭಾವನೆ
ದೊಡ್ಡದಲ್ಲ ಬದುಕಿಗಿಂತ
ಸಾಹಿತ್ಯ–ಸಂಗೀತ–ಸಂಸ್ಕೃತಿ

ದೊಡ್ಡವನಲ್ಲ ಬದುಕಿಗಿಂತ ಭಗವಂತ
ದೊಡ್ಡದಲ್ಲ ಬದುಕಿಗಿಂತ ಏನೆಲ್ಲವು
ಬದುಕೇ ದೊಡ್ಡದು ನೋಡಾ ಕಮಲಾಪ್ರಿಯಾ ।

ಅಪ್ಪಲೇ ಬೇಕೆಂದು ಬಂದಾಗ
ನೀ ಜಾರಿ ಹೋಗುವೆ
ಮುದ್ದಿಸಲೇಬೇಕೆಂದಾಗ
ನೀ ಮಾಯವಾಗುವೆ
ರಮಿಸಬೇಕೆಂದಾಗ
ನೀ ಮುನಿಸ ತೋರುವೆ
ಒಲವ ತೋರ ಬಂದಾಗ
ನೀ ಬರಿದೆ ಓಡಿಹೋಗುವೆ
ಬರೆಯಲು ಕುಳಿತಾಗ
ನೀ ಭ್ರಮೆಯಲಿ ತೇಲಿಸುವೆ
ಕರುಣೆ ತೋರೆ ಏಕೆ
ನೀ ಕಾವ್ಯ ಕನ್ನಿಕೆಯೆ
ಕೈ ಹಿಡಿದು ಕರೆತರುವ
ಕಮಲಾಪ್ರಿಯ, ಬಾ, ಬಾರ
ಸರಸತಿಯೆ ಎನ್ನ ಬಳಿಗೆ ।

ಅಂಗಾತ ಬಿದ್ದ ಜಿರಲೆ ನಾನಯ್ಯ
ನೀರನಗಲಿದ ಮೀನು ನಾನು
ಕತ್ತರಿಯಲಿ ಸಿಲುಕಿದ
ಅಡಕೆ ನಾನಯ್ಯ
ಪಂಕದಲಿ ಬಿದ್ದ ಪಶು ನಾನು
ಅತ್ತ ದರಿ, ಇತ್ತ ಪುಲಿ
ಅಡಿಯಿಡಲರಿಯದೆ
ತತ್ತರಿಸುತಿಹೆನಯ್ಯಾ
ಎನ್ನ ಕಾಯುವವರಾರೋ ಕಮಲಾಪ್ರಿಯ ।

ಇವಳೊಬ್ಬ ಪೂತನಿ ನೋಡಾ
ಹಾಲನುಣಿಸ ಬಂದು ವಿಷವ ಕೊಟ್ಟವಳು
ಇವಳೊಬ್ಬ ಶೂರ್ಪನಖಿ ನೋಡಾ
ಪರಪತಿಯ ಬಯಸಿ
ಮೂಗು ಮುಂದಲೆ ಕೊಯ್ಸಿಕೊಂಡವಳು
ಇವಳೊಬ್ಬ ಕೈಕೇಯಿ ನೋಡಾ
ತನ್ನ ಹಿತಕಾಗಿ ಪರರ
ಬಲಿಗೊಟ್ಟವಳು

ಇವಳೊಬ್ಬ ಗಾಂಧಾರಿ ನೋಡಾ
ಮಾತ್ಸರ್ಯದಲಿ ಬಸಿರ
ಬಗೆದುಕೊಂಡವಳು ಕಮಲಾಪ್ರಿಯ ।

ಕುಳಿತ ಜಾಗ ಕತ್ತಲಾದರೇನು ?
ಇರುವ ಜಾಗ ಮೂಲೆಯಾದರೇನು
ಕಣ್ಣಿದ್ದೂ ಕುರುಡರಾದ ನಮಗೆ
ಚಿಂತೆ ಬಿಡು, ಯೋಚಿಸು, ವಿವೇಚಿಸು
ಬಂಡೆಯಲಿ ಸಿಲುಕಿಬಿದ್ದ
ಅರಳಿ ಬೀಜ, ಬಂಡೆ ಸೀಳಿ
ನೀರ ಹೀರಿ ಬೆಳೆಯದೆ ಹೆಮ್ಮರವಾಗಿ
ಕಾರ್ಮೋಡಗಳು ಮುಸುಕಿ ನಿಂತ
ಕತ್ತಲಿಂದ ಸಿಡಿದು
ಚಿಮ್ಮದೆ ಕೋಲ್ಮಿಂಚು ತಾನು
ಚಿಂತೆ ಬಿಡು, ತೆರೆ ಕಣ್ಣ
ಅಂತರಂಗದ ಕಣ್ಣ
ಕತ್ತಲೆ ಬೆಳಕಾದೀತು
ಮೂಲೆ ಬಯಲಾದೀತು ಕಮಲಾಪ್ರಿಯ ।

ಸಂದರ್ಶನ

ಸಂದರ್ಶಕರು

ಬಾ. ಹ. ರಮಾಕುಮಾರಿ

ರಮಾಕುಮಾರಿ : ಐವತ್ತು ವರ್ಷಗಳು ತುಂಬಿದ ನಿಮಗೆ ಅಭಿನಂದನೆಗಳು. ನಿಮ್ಮ ಅನಿಸಿಕೆ ಏನು ?

ಕಮಲಾ ಹಂಪನಾ : ನನಗೆ ಐವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ನೀವು ಹಾರೈಸಿದ ಅಭಿನಂದನೆಗೆ ವಂದನೆಗಳು.

ಕೆಲವೊಮ್ಮೆ ಐವತ್ತು ವರುಷಗಳು ಎಷ್ಟು ಸುದೀರ್ಘ ಎನಿಸುತ್ತದೆ. ಮತ್ತೊಮ್ಮೆ ಎಷ್ಟು ಬೇಗ ಐವತ್ತು ವರುಷಗಳು ಉರುಳಿಹೋಗಿವೆ ಎನಿಸುತ್ತದೆ. ಸಾಹಿತ್ಯದ ರಚನೆಗೆ ಸಂಬಂಧಿಸಿದಂತೆ ಹಿಂತಿರುಗಿ ನೋಡಿದಾಗ ಸ್ವಲ್ಪಮಟ್ಟಿನ ತೃಪ್ತಿ ದೊರೆತರೂ ಬಹುಮಟ್ಟಿಗೆ ಅತೃಪ್ತಿಯೇ ಮೂಡುತ್ತದೆ. ಬಿಂದಲಿ ಪುಸ್ತಕ ನಿಮ್ಮಲ್ಲಿ ಇದ್ದರೆ, ಅದರ ಅರವತ್ತನೆಯ ವಚನವನ್ನು ನೀವು ನೋಡಿ, ನನ್ನ ಅತೃಪ್ತ ಧ್ವನಿಯನ್ನು ನೀವು ಚೆನ್ನಾಗಿ ಗುರುತಿಸಬಹುದು (ವಚನ ೬೦ : ನಾನೊಬ್ಬ ನಿರ್ಗತಿಕಳು ನೋಡಾ).

ರ. ಕು. : ನಿಮ್ಮ ಬರವಣಿಗೆ ಮತ್ತು ನಿಮಗೆ ಬಂದ ಪ್ರಶಸ್ತಿಗಳ ಬಗ್ಗೆ ತಿಳಿಸಿ ಮೇಡಂ.

ಕ. ಹಂ. :ನಾನು ಗಂಭೀರವಾಗಿ ಬರವಣಿಗೆಯನ್ನು ಪ್ರಾರಂಭಿಸಿದ್ದು ೧೯೬೦ರಿಂದ. ನನ್ನ ಕೃತಿಗಳ ಪಟ್ಟಿಯೊಂದನ್ನು ಇದರ ಜೊತೆ ಲಗತ್ತಿಸಿದ್ದೇನೆ, ದಯವಿಟ್ಟು ನೋಡಿ. ನನ್ನ 'ಅನೇಕಾಂತವಾದ' ಸಂಶೋಧನ ಗ್ರಂಥಕ್ಕೆ ೧೯೮೭ರಲ್ಲಿ ವಿದ್ಯಾವರ್ಧಕ ಸಂಘ ಧಾರವಾಡದಿಂದ ಪ್ರಥಮ ಬಹುಮಾನ ಬಂದಿದೆ. ೧೯೮೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ 'ಜೈನ ಸಾಹಿತ್ಯ ಪರಿಸರ' ಎನ್ನುವ ವಿಮರ್ಶಾಗ್ರಂಥಕ್ಕೆ ಜೈನ ಸಾಹಿತ್ಯಕ್ಕೇ ಮೀಸಲಾದ ಬಹುಮಾನ ಲಭಿಸಿದೆ. 'ಬಿಂದಲಿ'ಗೆ ಧಾರವಾಡದ ವಿದ್ಯಾವರ್ಧಕ ಸಂಘದ ಶ್ರೀಮತಿ ರತ್ನಮ್ಮ ಹೆಗಡೆ (ಧರ್ಮಸ್ಥಳ) ಎರಡನೇ ಬಹುಮಾನ ಬಂದಿದೆ.

ಕಾದಂಬರಿಯನ್ನು ರಚಿಸುವ ಉದ್ದೇಶವಿದೆ. ಸುಮಾರು ನಾಲ್ಕಾರು ಕಾದಂಬರಿಗಳಿಗೆ ವಸ್ತು ಹಾಗೂ ಟಿಪ್ಪಣಿ ಸಿದ್ಧವಿದೆ. ಆದರೆ ಆ ಕ್ಷೇತ್ರಕ್ಕೆ ಪ್ರವೇಶಿಸಲು ನಾನೇ ಇನ್ನೂ ನಿಯಂತ್ರಿಸಿಕೊಳ್ಳುತ್ತಿದ್ದೇನೆ.

ರ. ಕು. : ನಿಮ್ಮ ಸಾಹಿತ್ಯ ಪ್ರವೇಶಕ್ಕೆ ಸಿಕ್ಕ ಪ್ರೇರಣೆಗಳ ಬಗ್ಗೆ ಸ್ವಲ್ಪ ತಿಳಿಸುವಿರಾ ?

ಕ. ಹಂ. : ನಾನು ಮೊದಲು ಹಳಗನ್ನಡ ಚಂಪೂ ಕಾವ್ಯವಾದ ಶಾಂತಿನಾಥ ಕವಿಯ 'ಸುಕುಮಾರ ಚರಿತೆ' ಗ್ರಂಥವನ್ನು ಸಂಗ್ರಹಿಸಿ ಸಂಪಾದಿಸಿದೆ. ಆ ಕೃತಿಯನ್ನು ಸಂಪಾದಿಸಲು ನನಗೆ ನನ್ನ ವಿದ್ಯಾ

ಗುರುಗಳಾದ ಡಿ. ಎಲ್. ನರಸಿಂಹಾಚಾರ್ ಹಾಗೂ ದೇ. ಜವರೇಗೌಡರು ಕಾರಣಕರ್ತರು. ೧೯೬೫ರಲ್ಲಿ ನಾನು ಸಂಗ್ರಹಿಸಿದ ಸುಕುಮಾರ ಚರಿತೆಯ ಸಂಗ್ರಹ ಪ್ರಕಟವಾಯಿತು. ಅದು ೧೯೬೫–೬೬ರಲ್ಲಿಯೇ ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಥಮ ಬಿ. ಎ., ಬಿ. ಎಸ್ಸಿ. ತರಗತಿಗಳಿಗೆ ಪಠ್ಯಪುಸ್ತಕವೂ ಆಯಿತು. ನನ್ನ ಒಲವು ಸ್ವಲ್ಪಮಟ್ಟಿಗೆ ಸಂಶೋಧನೆ ಹಾಗೂ ವಿಮರ್ಶೆಯ ಕಡೆಗಿದ್ದು ನಾನು ತುಲನಾತ್ಮಕವಾಗಿ ವಡ್ಡಾರಾಧನೆಯ ಸುಕುಮಾರಸ್ವಾಮಿ ಕತೆ ಹಾಗೂ ಇತರ ಪೋಷಕ ಸಾಮಗ್ರಿಗಳನ್ನು ಹೆಕ್ಕಿಕೊಂಡು ಸುದೀರ್ಘವಾದ ಮುನ್ನುಡಿಯನ್ನು ಆ ಗ್ರಂಥಕ್ಕೆ ಬರೆದೆ. ಡಿ. ಎಲ್. ನರಸಿಂಹಾಚಾರ್ಯರು ಅದನ್ನು ನೋಡಿ ಓದಿ ಸಂತೋಷಗೊಂಡರು. ಆ ಪುಸ್ತಕವನ್ನು ಅವರಿಗೆ ಹಾಗೂ ನನ್ನ ಇನ್ನೊಬ್ಬ ವಿದ್ಯಾ ಗುರುಗಳಾದ ಶ್ರೀ ತ. ಸು. ಶಾಮರಾಯರಿಗೆ ಅರ್ಪಣೆ ಮಾಡಿದ್ದೇನೆ. ಹೀಗೆಯೇ ಡಾ॥ ಆ. ನೇ. ಉಪಾಧ್ಯೆ ಅವರ ಮೆಚ್ಚಿಗೆಯ ಮಾತುಗಳು ನನ್ನಲ್ಲಿ ಸಂಶೋಧನೆ, ಬರವಣಿಗೆ ಮೊದಲಾದುವಕ್ಕೆ ಆತ್ಮವಿಶ್ವಾಸವನ್ನು ಮೂಡಿಸಿದವು.

ರ. ಕು. : ನಿಮ್ಮ ವಿವಾಹದ ಬಗ್ಗೆ ಚೂರು ತಿಳಿಸಿ ?

ಕ. ಹಂ. : ನನ್ನ ಹಾಗೂ ಹಂಪನಾ ಅವರ ರಿಜಿಸ್ಟರ್ಡ್ ಮದುವೆ ದಿನಾಂಕ ೨೪–೧೧–೧೯೬೧ ರಲ್ಲಿ ಆಯಿತು. ಅಂತರ್‌ಜಾತಿ ವಿವಾಹಕ್ಕೆ ಎಂದೂ ಯಾರಿಂದಲೂ ಪ್ರೋತ್ಸಾಹ ದೊರಕುವುದಿಲ್ಲ. ಅದರಲ್ಲೂ ಇಪ್ಪತ್ನಾಲ್ಕು ವರುಷಗಳ ಹಿಂದೆ ವಿರೋಧ ಹೆಚ್ಚಾಗಿಯೇ ಇದ್ದಿತು. ಆದರೆ ನಮ್ಮಿರ್ವರ ಮಧ್ಯೆ ಬೆಸೆದಿದ್ದ ಪ್ರೇಮಭಾವ ಅದನ್ನೆಲ್ಲಾ ಗೆದ್ದುನಿಂತಿತು.

ರ. ಕು. : ಬಹಳ ಸ್ವಾರಸ್ಯವಾಗಿದೆ. ಇನ್ನಷ್ಟು ವಿವರಿಸಿರಿ ಕಮಲಾ ಹಂಪನಾರವರೆ.

ಕ. ಹಂ. : ಹೊಸಧರ್ಮ ಅಂದರೆ ನನ್ನ ಯಜಮಾನರ ಧರ್ಮವಾದ ಜೈನಧರ್ಮದ ವಿಷಯ ನೀವು ಕೇಳುತ್ತಿದ್ದೀರಿ. ನನಗೆ ಅದೇನೂ ಅಷ್ಟು ದೊಡ್ಡ ಸಮಸ್ಯೆಯ ವಿಷಯವಾಗಲಿಲ್ಲ. ನಾನು ಹೆಚ್ಚಾಗಿ ಧಾರ್ಮಿಕ ಆಚರಣೆಗೆ ಎಂದೂ ಮಹತ್ವ ಕೊಟ್ಟವಳಲ್ಲ. ನಮ್ಮ ಮನೆಯಲ್ಲಿ ಯಜಮಾನರಿಗೂ ಆ ವಿಷಯದಲ್ಲಿ ಆಸಕ್ತಿ ಇಲ್ಲ. ಜೈನ ಸಮಾಜ ನನ್ನನ್ನು ತುಂಬಾ ವಿಶ್ವಾಸದಿಂದ ಕಂಡಿದೆ, ನಾನು ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ ಕವಿ, ಕಾವ್ಯಗಳ ಬಗ್ಗೆ ಸಹಜವಾಗಿ ನನ್ನ ಒಲವು ಇದ್ದದ್ದೆ. ಜೈನ ಸಮಾಜದವರು ಪಂಪ, ರನ್ನ, ನಯಸೇನ, ರತ್ನಾಕರ, ಜನ್ನ, ನಾಗಚಂದ್ರ ಹೀಗೆ ಇವರುಗಳ ಬಗೆಗೆ ಭಾಷಣ ಮಾಡಲು ಆಹ್ವಾನಿಸಿದಾಗ ನಾನು ಒಪ್ಪಿ ಭಾಷಣಗಳನ್ನು ಮಾಡಿದೆ. ಅವರುಗಳು ಕೇಳಿದ ಪ್ರಬಂಧಗಳನ್ನು ಸಿದ್ಧಪಡಿಸಿಕೊಟ್ಟೆ. ಅದು ಆ ಸಮಾಜದವರಿಗೆ ಹೆಚ್ಚಿನ ಸಂತೋಷ, ಸಂತೃಪ್ತಿ ತಂದಿದೆ. ಅವರು ಅತ್ಯಂತ ಪ್ರೀತಿ ವಿಶ್ವಾಸದಿಂದ ನನ್ನನ್ನು ಕಂಡಿದ್ದಾರೆ.

ರ. ಕು. : ಕೆಲಸ ಮತ್ತು ಸಾಹಿತ್ಯ ರಚನೆ ಎರಡೂ ಸಾಧ್ಯವಾಗಿದೆಯಲ್ಲ. ಹ್ಯಾಗೆ ?

ಕ. ಹಂ. : ಮಾಡುವ ಮನಸ್ಸು, ಸಂಕಲ್ಪ ಇದ್ದರೆ ಸಾಧ್ಯವಾಗಬಹುದು. ಅನೇಕರು ಉದಾಹರಣೆಗೆ ನನ್ನ ಸಹೋದ್ಯೋಗಿಗಳಲ್ಲಿಯೇ ಕೆಲವರು ಅಯ್ಯೋ ರಜೆ ಬರುತ್ತದೆ, ಎರಡು ದಿವಸ ಹಾಯಾಗಿ ಇರಬಹುದು, ಅನಂತರ ತುಂಬಾ ಬೋರ್ ಹಿಡಿಯುತ್ತೆ ಎಂದು ಹೇಳುವುದನ್ನು ಕೇಳಿದ್ದೇನೆ. ಅವರು ಇಂಥ ಯಾವುದೇ ಚಟುವಟಿಕೆಗಳನ್ನು ಹಮ್ಮಿಕೊಳ್ಳದೇ ಇರುವುದೇ ಬೋರ್ ಹೊಡೆಯಲು ಕಾರಣವೆಂದು ಭಾವಿಸುವೆ. ನನಗೆ ರಜೆ ಬಂದರೂ ಸಾಲದು, ದಿವಸದ ಇಪ್ಪತ್ನಾಕು ಗಂಟೆಯೂ ಅನೇಕ ವೇಳೆ ಕಿರಿದು ಎನ್ನಿಸುತ್ತದೆ. ನನ್ನ ನಂಬಿಕೆ

ಎಂದರೆ 'ಹತ್ತು ಕೆಲಸವನ್ನು ಮಾಡುವವನೇ ಹನ್ನೊಂದನೇ ಕೆಲಸವನ್ನೂ ಮಾಡಬಲ್ಲ' ಎನ್ನುವುದು, ಮಾಡಲಾರದವರು ಒಂದೇ ಕೆಲಸವನ್ನೂ ಸರಿಯಾಗಿ ಮಾಡುವುದಿಲ್ಲ, ಅಷ್ಟೆ.

ರ. ಕು. : ಸಾಹಿತ್ಯ ಕ್ಷೇತ್ರದಲ್ಲಿ ನಿಮ್ಮ ಒಲವು ಯಾವುದರ ಕಡೆಗಿದೆ ?

ಕ. ಹಂ. : ನನಗೆ ಸಂಶೋಧನೆ, ವಿಮರ್ಶೆ ಹಾಗೂ ವೈಚಾರಿಕ ಸಾಹಿತ್ಯದ ಕಡೆ ಒಲವು ಹೆಚ್ಚು. ನನ್ನ ಕೃತಿಗಳ ಪಟ್ಟಿಯನ್ನು ನೀವು ನೋಡಿದರೆ ತಿಳಿಯುತ್ತದೆ. ಆದರೆ ಸಾಹಿತ್ಯದ ಇತರ ಪ್ರಕಾರಗಳೂ ನನಗೆ ಪ್ರಿಯವೇ. ಮೌಲಿಕ ಕೃತಿ, ಅದು ಯಾವ ಪ್ರಕಾರದ್ದಾದರೂ ನನಗೆ ಅಚ್ಚುಮೆಚ್ಚು.

ರ. ಕು. : ಇವತ್ತಿನ ಸಾಹಿತ್ಯದ ಬಗ್ಗೆ ಏನು ಹೇಳುವಿರಿ ?

ಕ. ಹಂ. : ಇತ್ತೀಚಿನ ಸಾಹಿತ್ಯದಲ್ಲಿನ ಬೆಳವಣಿಗೆ ಎಂದರೆ ದಲಿತ, ಬಂಡಾಯದ ಧೋರಣೆಗಳು. ಸಾಹಿತ್ಯದ ಯಾವುದೇ ಪ್ರಕಾರ ಹೆಚ್ಚುಕಾಲ ಇರಲು ಸಾಧ್ಯವಿಲ್ಲ. ಅದು ಕಾಲ ಕಾಲಕ್ಕೆ ಬೇರೆಬೇರೆ ಧೋರಣೆ ಹೊತ್ತೇ ನಡೆಯುತ್ತದೆ. ಕನ್ನಡ ಸಾಹಿತ್ಯದಲ್ಲಿ ಚಂಪೂ ನಂತರ ವಚನ, ಅದರ ನಂತರ ರಗಳೆ, ಷಟ್ಪದಿ, ಸಾಂಗತ್ಯ ಮಾರ್ಗಗಳು ಕಂಡಂತೆ, ಅವುಗಳ ವಸ್ತುವಿನಲ್ಲಿಯೂ ಸಾಮಾಜಿಕ ಕಳಕಳಿಗಳು ವ್ಯತ್ಯಾಸಗೊಂಡಂತೆ ಈಗ ದಲಿತ, ಬಂಡಾಯದ ಪ್ರೇರಣೆಗಳು ಧೋರಣೆಗಳು ನಮ್ಮ ಸಾಹಿತ್ಯದಲ್ಲಿ ಕಂಡಿವೆ. ಬಹುಶಃ ಇನ್ನು ಕೆಲವೇ ವರುಷಗಳಲ್ಲಿ ಇವು ತನ್ನ ಗಟ್ಟಿತನವನ್ನು ಪಡೆದುಕೊಳ್ಳಬಲ್ಲವು ಎನ್ನುವ ವಿಶ್ವಾಸ ನನಗಿದೆ.

ರ. ಕು. : ಮಹಿಳಾ ಸಾಹಿತ್ಯದಲ್ಲಿ ಜಾತ್ಯಾತೀತತೆ ಇರಬಹುದೆ ?

ಕ. ಹಂ. : ಈ ಪ್ರಶ್ನೆಗೆ ಒಳ್ಳೆಯ ಉತ್ತರವೆಂದರೆ ನನ್ನ 'ಬಾಸಿಂಗ'ದಲ್ಲಿನ 'ಮಹಿಳಾ ಸಾಹಿತ್ಯ ನೆಲೆ ಬೆಲೆ' ಎನ್ನುವ ಪ್ರಬಂಧ. ಇಲ್ಲಿಯೂ ಗುಂಪುಗಾರಿಕೆ ಇದೆ. ಒಬ್ಬ ಬಹುಸಂಖ್ಯಾತ (ಬ್ರಾಹ್ಮಣ, ಲಿಂಗಾಯಿತ) ವರ್ಗದ ಲೇಖಕಿಯನ್ನು ಬಹುಬೇಗ ಗುರುತಿಸುವಂತೆ, ಅವರಿಗೆ ಕೊಡುವ ಪ್ರಚಾರದಿಂದ ಹಿಡಿದು ಪುರಸ್ಕಾರದವರೆಗೂ ಆಕೆಗೆ ದೊರಕುವ ಪ್ರಸಿದ್ಧಿ ಇತರ ವರ್ಗದವರಿಗೆ ಅಷ್ಟಾಗಿ ದೊರೆಯುವುದಿಲ್ಲ. ಕಾರಣ ಪ್ರಚಾರ ಮಾಧ್ಯಮಗಳಾದ ಆಕಾಶ ವಾಣಿ, ದೂರದರ್ಶನ, ಎಲ್ಲಕ್ಕೂ ಮಿಗಿಲಾಗಿ ಪತ್ರಿಕೆಗಳ ಸ್ವಾಮ್ಯವೆಲ್ಲ ಕೆಲವೇ ಮಂದಿ ಬ್ರಾಹ್ಮಣರ ಕೈಯಲ್ಲಿರುವುದೇ ಇದಕ್ಕೆ ಕಾರಣ.

ರ. ಕು. : ಮಹಿಳೆಯರು ರಚಿಸಿದ ಕೃತಿಗಳಿಗೆ ಮೂಗು ಮುರಿಯುವುದೇಕೆ ?

ಕ. ಹಂ. : ಇದಕ್ಕೂ ನನ್ನ 'ಬಾಸಿಂಗ' ಲೇಖನದಲ್ಲಿ ಸುದೀರ್ಘ ವಿವರಣೆ ದೊರೆಯುತ್ತದೆ. ತುಂಬ ಜನ ಲೇಖಕಿಯರು ಬಹಳ ಕಳಪೆಯ ಸಾಹಿತ್ಯವನ್ನು ಸೃಷ್ಟಿಸುತ್ತಿರುವುದರಿಂದ ಎಲ್ಲೋ ಬೆರಳೆಣಿಕೆಯ ಪ್ರೌಢ ಬರವಣಿಗೆಯ ಆ ಲೇಖಕಿಯರನ್ನು ಅದೇ ಗುಂಪಿಗೆ ಸೇರಿಸಿ, ಮಹಿಳಾ ಸಾಹಿತ್ಯವೆಲ್ಲಾ ಕಳಪೆಯ ಸಾಹಿತ್ಯ ಎನ್ನುವ ಹಣೆಪಟ್ಟಿ ಕಟ್ಟಲಾಗಿದೆ. ಲೇಖಕಿಯರ ಸಾಹಿತ್ಯದ ಬಗ್ಗೆ ಸಮರ್ಪಕ ವಿಮರ್ಶೆ ನಡೆದೇ ಇಲ್ಲ.

ರ. ಕು. : ಸುತ್ತ–ಮುತ್ತಲ ಲೇಖಕಿಯರ ಬಗ್ಗೆ ನಿಮ್ಮ ಅಭಿಪ್ರಾಯ ?

ಕ. ಹಂ. : ಹೆಚ್ಚು ಜನ ಲೇಖಕಿಯರು ಕತೆ ಕಾದಂಬರಿಗಳ ಸೀಮಿತದಲ್ಲಿಯೇ ವಿಹರಿಸುತ್ತಿದ್ದಾರೆ. ಅದರಲ್ಲಿ ಬಹಳ ಮಂದಿಗೆ ಬಂಡಾಯ ಧೋರಣೆಯ ಪರಿಚಯವೇ ಇಲ್ಲ. ಆದರೆ ಇತ್ತೀ

ಚೆಗೆ ಕೆಲವು ಕವಯತ್ರಿಯರು ಕಾಣಿಸಿಕೊಳ್ಳುತ್ತಿದ್ದಾರೆ. ಕಾವ್ಯಮಾರ್ಗದಲ್ಲಿ ಸುಕನ್ಯಾ ಮಾರುತಿ, ಬಿ. ಟಿ. ಲಲಿತಾ ನಾಯಕ, ಕಾದಂಬರಿಯಲ್ಲಿ ಡಾ॥ ಅನುಪಮಾ ನಿರಂಜನ (ಘೋಷ, ಎಳೆ, ಕೊಳಚೆಕೊಂಪೆ ದಾನಿಗಳು) ಹಾಗೂ ಗೀತಾ ನಾಗಭೂಷಣರ (ಹಸಿಮಾಂಸದ ಹದ್ದುಗಳು, ಮಾಪುರದ ತಾಯಿಯ ಮಕ್ಕಳು), ವಿಮರ್ಶೆಯಲ್ಲಿ ಕಮಲಾ ಹಂಪನಾ ಅವರನ್ನು ಹೆಸರಿಸಬಹುದು. ಅನೇಕ ಜನ ಲೇಖಕರೇ ಇನ್ನೂ ತಮ್ಮ ಮಡಿ ವಂತಿಕೆಯಿಂದ ಬಂಡಾಯಕ್ಕೆ ಇಳಿದಿಲ್ಲ. ಇದೇ ಮಾತು ಲೇಖಕಿಯರಿಗೂ ಅನ್ವಯ ವಾಗುತ್ತದೆ.

ರ. ಕು. : ಮಹಿಳಾ ಕೃತಿಗಳಿಗೆ ಮಿತಿಗಳಿವೆ ಎನ್ನಿಸುತ್ತದೆಯೆ ?

ಕ. ಹಂ. : ಬಹುಮಟ್ಟಿಗಿನ ಲೇಖಕಿಯರೆಲ್ಲಾ ಮಧ್ಯಮವರ್ಗದ ಸಮಾಜದಿಂದ ಬಂದಿರುವುದರಿಂದ ಅವರ ರಚನೆಗೆ ಒಂದು ಮಿತಿ ಬಂದಿದೆ ಎನ್ನಿಸುತ್ತದೆ. ಇತ್ತೀಚೆಗೆ ಕೆಳಗಿನ ಸ್ತರದವರೂ ಲೇಖನಿ ಹಿಡಿದಿರುವುದರಿಂದ ಇನ್ನು ಮುಂದೆ ಹೆಚ್ಚು ಸ್ವತಂತ್ರ ಅಭಿವ್ಯಕ್ತಿಯ ಸಾಹಿತ್ಯ ರಚನೆಯಾಗ ಬಹುದು.

ರ. ಕು. : ಗಟ್ಟಿಯಾದ ಬರವಣಿಗೆ ಹೇಗೆ ಸೃಷ್ಟಿಯಾಗುತ್ತದೆ?

ಕ. ಹಂ. : ಆಳವಾದ ಅಭ್ಯಾಸ, ಚಿಂತನೆ ಮಾಡಿ, ಸಾಕಷ್ಟು ಪೂರ್ವಸಿದ್ಧತೆಯಿಂದ ಸಾಹಿತ್ಯ ರಚನೆಗೆ ತೊಡಗಿ, ಬರವಣಿಗೆಯನ್ನು ಗಂಭೀರವಾಗಿ ಹಾಗೂ ಒಂದು ಸವಾಲಾಗಿ ಸ್ವೀಕರಿಸಿ ಬರೆಯಲು ತೊಡಗಬೇಕು.

ರ. ಕು. : ನಿಮ್ಮ ಸಂಸಾರದ ಸಿಹಿ ಫಲಗಳನ್ನು ನಮಗೆ ಸ್ವಲ್ಪ ಹಂಚುವಿರಾ ?

ಕ. ಹಂ. : ಮಕ್ಕಳು ನಮಗೆ ಮೂರು ಮಂದಿ, ಹಿರಿಯ ಮಗ ಹರ್ಷ ನಾಲ್ಕನೇ ವರ್ಷದ ಬಿ. ಇ. ಓದುತ್ತಿದ್ದಾನೆ. ಎರಡನೆಯವಳು ಮಗಳು ರಾಜಶ್ರೀ, ಬಿ. ಎಸ್.ಸಿ. ಮುಗಿಸಿದ್ದಾಳೆ. ಮೂರನೆಯವಳು ಕಡೆಯ ಮಗಳು,ಆರತಿ. ಎರಡನೇ ಬಿ. ಎ. ವಿದ್ಯಾರ್ಥಿನಿ ಹೆಣ್ಣು ಮಕ್ಕ ಳಿಬ್ಬರೂ ಕವನಗಳನ್ನು ರಚಿಸಿದ್ದಾರೆ. ಒಳ್ಳೆಯ ಭಾಷಣಕಾರರು, ಚರ್ಚಾಸ್ಪರ್ಧೆ, ಭಾಷಣ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದಾರೆ.

ರ. ಕು. : ನೀವು ಮೆಚ್ಚಿದ ಕೃತಿಗಳಾವುವು ?

ಕ. ಹಂ. : ನನಗೆ ಮೌಲಿಕವಾದ ಪುಸ್ತಕಗಳೆಂದರೆ ಚದುರಂಗರ 'ವೈಶಾಖ' ಕಾದಂಬರಿ, ಡಾ॥ ಚಂದ್ರ ಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ', ಡಾ. ಶಾಂತಿನಾಥ ದೇಸಾಯಿಯವರ 'ಬೀಜ' ತೇಜಸ್ವಿಯವರ 'ಕರ್ವಾಲೊ' ಇವುಗಳನ್ನು ಹೆಸರಿಸಬಹುದು. ಇವುಗಳಲ್ಲಿ ಬದುಕಿನ ಅತ್ಯಂತ ಸೂಕ್ಷ್ಮ ಸಂವೇದನೆಗಳು ತುಂಬ ಚೆನ್ನಾಗಿ ನಿರೂಪಿತವಾಗಿವೆ. ಒಂದು ಹಳ್ಳಿಯ ಬದುಕು, ಇನ್ನೊಂದು ಮನೆಯ ಒಳಗಿನ ಚಿತ್ರ–ಇಲ್ಲೆಲ್ಲಾ ಕಾದಂಬರಿ ಕಾರರ ಕುಸುರಿ ಕೆಲಸದ ಬಗ್ಗೆಯನ್ನು ಗುರುತಿಸಬಹುದು. ಬದುಕಿನ ಅನೇಕ ಅರ್ಥಗಳನ್ನು ಈ ಕಾದಂಬರಿಗಳು ಧ್ವನಿಸುವುದರಿಂದ ಇವು ನನಗೆ ಹೆಚ್ಚು ಪ್ರಿಯವಾಗಿವೆ.

ರ. ಕು. : ನಿಮ್ಮ ಕೃತಿಗಳ ಸಿದ್ಧಿ–ಸಾಧನೆ ಬಗ್ಗೆ ಪೂರ್ಣ ತೃಪ್ತಿ ಇದೆಯೆ?

ಕ. ಹಂ. : ಖಂಡಿತಾ ಇಲ್ಲ. ತೃಪ್ತಿ ಮೂಡಿದರೆ ಬಹುಶ' ವ್ಯಕ್ತಿಯ ಬೆಳವಣಿಗೆ ನಿಂತು ಹೋಗುವುದೆಂದು ಭಾವಿಸುವೆ. ಅತೃಪ್ತಿ ಬೆಳೆಯುವ ಚೇತನದ ಕುರುಹು.

ರ. ಕು. : ಶ್ರೇಷ್ಠ ಲೇಖಕ ಅಥವ ಕೃತಿ ಇದೇ ಎಂದು ಬೆಟ್ಟು ಮಾಡಿ ತೋರಿಸಲು ಬರುವುದೇ ?

ಕ. ಹಂ. : ಹಾಗೆ ಹೆಸರಿಸಲು ಬರುವುದಿಲ್ಲ. ಒಬ್ಬೊಬ್ಬ ಲೇಖಕರ ಒಂದೊಂದು ಕೃತಿ ಇಷ್ಟವಾಗಬಹುದು. ಮತ್ತೊಂದು ಇಷ್ಟವಾಗದೆ ಹೋಗಬಹುದು. ಎಂತಹ ದೊಡ್ಡ ಸಾಹಿತಿಯೂ ತನ್ನ ಎಲ್ಲಾ ಕೃತಿಗಳಲ್ಲಿಯೂ ಸಮಾನವಾದ ಮೌಲ್ಯಪ್ರಜ್ಞೆಯನ್ನು ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ. ಹೀಗಾಗಿ ಓದುವ ನಮಗೂ ಅವು ಏರುಪೇರನ್ನು ಮೂಡಿಸುತ್ತವೆ.

ರ. ಕು. : ಸಾಹಿತ್ಯದ ಮೂಲಕ ಸಾಮಾಜಿಕ ಸಮಸ್ಯೆಗೆ ಉತ್ತರವಿದೆಯೆ ?

ಕ. ಹಂ. ಸಾಮಾಜಿಕ ಸಮಸ್ಯೆಗಳಿಗೆ ಲೇಖಕಿಯಾಗಿ ಆಕೆ ತನ್ನ ಬರವಣಿಗೆಯ ಮೂಲಕ ಎಚ್ಚರಿಕೆ ಕೊಡಬಲ್ಲಳು. ಸಾಹಿತ್ಯ ಸಮಸ್ಯೆಯ ಪರಿಹಾರಕ್ಕೆ ಒಂದು ಮಾರ್ಗ ಅಷ್ಟೆ. ಅದೇ ಸಮಸ್ಯೆಯ ನಿವಾರಣೆಗೂ ಎಲ್ಲ ಸಾಧ್ಯವಾಗದು. ಸಾಹಿತ್ಯದಿಂದ ಆಗುವ ಕೆಲಸ ಅಷ್ಟೆ, ಸಾಹಿತ್ಯವನ್ನು ಉಪಯೋಗಿಸಿಕೊಂಡು ಕವನಗಳ ಮೂಲಕ ಹಾಡುವುದು, ಸಾಮೂಹಿಕ ಹಾಡುವುದು, ಅದನ್ನು ನಾಟಕಗಳನ್ನಾಗಿ ಪರಿವರ್ತಿಸಿ ಅಭಿನಯಿಸುವುದು, ಅವುಗಳ ಬಗ್ಗೆ ದೂರದರ್ಶನ ನೆರವು ಪಡೆದು ದೃಶ್ಯ ಮಾಧ್ಯಮವಾಗಿ ತೋರಿಸುವುದು. ಸಮಸ್ಯೆಗೆ ಒಳಗಾಗಿರುವ ಜನತೆಗೆ ಮುಟ್ಟುವಂತೆ ಸಾಹಿತ್ಯವನ್ನು ಬಳಸಿಕೊಂಡು ಇತರ ಮಾಧ್ಯಮಗಳು ಕೆಲಸ ಮಾಡಿಕೊಳ್ಳಬೇಕಾಗುತ್ತದೆ. ಅದು ಸಾಹಿತಿಯ ಕೆಲಸವಲ್ಲ.

ರ. ಕು. : ಕ.ಸಾ.ಪ. ಅಧ್ಯಕ್ಷರಾಗಿದ್ದ ನಿಮ್ಮ ಪತಿಯವರಾದ ಹಂಪನಾ ಬಗ್ಗೆ ಸಿಹಿ–ಕಹಿ ಅಭಿಪ್ರಾಯ ಇದೆ. ಅದಕ್ಕೆ ನೀವೇನು ಹೇಳಬಲ್ಲಿರಿ ?

ಕ. ಹಂ. : ಪರಿಷತ್ತಿನ ಹಿತದೃಷ್ಟಿಯಿಂದ ಅವರು ಇನ್ನೂ ಎರಡು ವರುಷ ಮುಂದುವರಿಯಬಹುದಿತ್ತು. ಹಂಪನಾ ಅಧ್ಯಕ್ಷರಾದ ಮೇಲೆ ಸಾಕಷ್ಟು ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಬಹಳ ಜನ ಮೆಚ್ಚಿಕೊಂಡಿದ್ದಾರೆ, ಕೆಲವೇ ಜನ ಸ್ವಾರ್ಥಿಗಳು ತೆಗಳಿದ್ದಾರೆ. ಇಲ್ಲೂ ಅಷ್ಟೆ. ತುಂಬಾ ವರುಷಗಳ ಕಾಲ ಬ್ರಾಹ್ಮಣರ ಸ್ವತ್ತಾಗಿ ಉಳಿದಿದ್ದ ಪರಿಷತ್ತು, ಒಬ್ಬ ಅಲ್ಪಸಂಖ್ಯಾತನ ಕೈಗೆ ಬಂದಿದ್ದು, ಕೆಲವರಿಗೆ ಜೀರ್ಣಿಸಿಕೊಳ್ಳಲಾರದ ವಿಷಯ. ಜಾತಿ ಮಾತ್ಸರ್ಯ, ಉದ್ಯೋಗ ಮಾತ್ಸರ್ಯ–ಇವುಗಳಿಂದ ಒಂದು ಗುಂಪು ನಿರಂತರ ಅಧ್ಯಕ್ಷರಿಗೆ ಕಿರುಕುಳ ಕೊಡುತ್ತಲೇ ಬಂದಿದೆ. ಪರಿಷತ್ತಿನ ಪಟ್ಟಭದ್ರರನ್ನು ಸ್ವಲ್ಪದೂರ ಇರಿಸಿ, ಎಲ್ಲರಿಗೂ (ಅವರನ್ನೂ ಸೇರಿಸಿ) ಪರಿಷತ್ತಿನ ವೇದಿಕೆಯಲ್ಲಿ ಅವಕಾಶ ಕೊಟ್ಟಿದ್ದು ಆ ಒಂದು ಗುಂಪಿನ ಜನಕ್ಕೆ ಸಹಿಸಲಾರದ ಸಂಕಟ. ಅದಕ್ಕಾಗಿ ಏನಾದರೂ ಕಾರಣ ತೆಗೆದು ಆಗಾಗ ಕೊಚ್ಚೆ ಎರಚುವ ಕೆಲಸ ಮಾಡುತ್ತಲೇ ಇರುತ್ತಾರೆ. ಇದು ಒಬ್ಬ ಅಲ್ಪಸಂಖ್ಯಾತ ಅನಿವಾರ್ಯವಾಗಿ ಎದುರಿಸಬೇಕಾದ ಸನ್ನಿವೇಶ ಎನಿಸುತ್ತದೆ.

ರ. ಕು. : ಸದ್ಯದಲ್ಲಿ ಕ.ಸಾ.ಪ. ಅಧ್ಯಕ್ಷರಾಗುವಿರಾ ?

ಕ. ಹಂ. ದಿನಾಂಕ ೨೭-೧-೮೫ ರಂದು ನಡೆದ 'ಸಮಕಾಲೀನ ಸಾಹಿತ್ಯ' ಸಮ್ಮೇಳನದ್ದ ಅಧ್ಯಕ್ಷ ಭಾಷಣದ ಸಂದರ್ಭದಲ್ಲಿ ನಾನು ನನ್ನ ನಿಲುವನ್ನು ಸ್ಪಷ್ಟಪಡಿಸಿದ್ದೇನೆ. ನಾನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿಲ್ಲ.

ಸಂದರ್ಶನ ಮುಗಿಯುವಷ್ಟರಲ್ಲಿ ಬಿಸಿಬಿಸಿಯಾದ ಫಲಹಾರ ಬಂದಿತು. ಕಾಫಿ ಬಂದಿತು. ಹೊರಗೆ ತಂಗಾಳಿ ಬೀಸುತ್ತಿತ್ತು. ಕಳೆದು ಹೋಗುವ ದಿನಗಳನ್ನು ಸುವರ್ಣದ ರೇಖೆಗಳನ್ನಾಗಿಸಿಕೊಳ್ಳುವ ಕಮಲಾ ಹಂಪನಾರವರಂಥವರನ್ನು ಸಂದರ್ಶಿಸುವ, ರಂಗಾದ ಕ್ಷಣಗಳು ಮತ್ತೆ ಮತ್ತೆ ಎದುರಾಗಲಿ-ಎಂಬ ಸುಮನೋಹರ ಭಾವದಿಂದ ಹೊರಹೊರಟೆ.

ನನ್ನ ತಾಯಿಗೆ

ಅಪ್ಪನ ಆದರ್ಶಕ್ಕೆ ಚೆಲ್ಲಿದೆ
ಬೆಳಕು ಚಿಮ್ಮಿದೆ ಒಲುಮೆ
ಮಕ್ಕಳ ಶ್ರೇಯಸ್ಸಿಗಾಗಿ
ಟೊಂಕ ಕಟ್ಟಿ ನಿಂತೆ
ರೇಗುವೆ, ಕೂಗುವೆ–ಕ್ಷಣದಲ್ಲಿ
ಅದೆಲ್ಲ ಮರೆತು ನಗುವೆ ನಂದನವಾಗುವೆ
ಅಂತಃಕರಣ ಕಲಕುವೆ ..
ನೀನು ಪಡುವ ಪಾಡುಗಳೆಲ್ಲ
ಕುಟುಂಬದ ಒಳಿತಿಗಾಗಿ
ಅಪ್ಪನ ಮಾತಿನಲ್ಲಿ ನೀನೊಂದು
ಗಂಧದ ಕೊರಡು
ತೇದಷ್ಟೂ ಸುಗಂಧ ತರುತ್ತೀಯ
ತೇಯಲು, ತೇಯಿಸಿಕೊಳ್ಳಲು
ಬಯಸುತ್ತೀಯ...
ಜನ ಹೇಳುತ್ತಾರೆ
ಭಗವಂತ ಎಲ್ಲೆಲ್ಲೂ ಇರುವನೆಂದು
ಅದು ನನಗೆ ಗೊತ್ತಿಲ್ಲ
ಆದರೆ ಒಂದು ಹೇಳುವೆ...
ತಾಯಿ ನೀನು ಎಲ್ಲೆಲ್ಲೂ ಇರುವೆ
ಎಷ್ಟು ಹೇಳಿದರೂ ಅತಿಶಯೋಕ್ತಿ
ಇಲ್ಲಿಲ್ಲ
ಇದು ಸಹಜತೆಗೆ ಇನ್ನೊಂದು
ಹೆಸರು

ಹೆಚ್. ಎನ್. ಆರತಿ

ಕಮಲಾ ಹಂಪನಾ ಅವರ ೫೦ನೆಯ
ಹುಟ್ಟುಹಬ್ಬಕ್ಕೆ ಕಿರುಮಗಳು ಆರತಿಯ
ಕವನ ಕಾಣಿಕೆ ೨೮–೧೦–೧೯೮೫

ಲೇಖಕಿಯ ಪರಿಚಯ

ಸಾಹಿತಿ, ಉದ್ಯೋಗಸ್ಥ ಮಹಿಳೆ. ಕಾಲೇಜು ಅಧ್ಯಾಪಕಿ, ಉತ್ತಮ ಗೃಹಿಣಿ ಹಾಗೂ ಜನಪ್ರಿಯ ಭಾಷಣಕಾರ್ತಿಯಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವವರು ಶ್ರೀಮತಿ ಕಮಲಾ ಹಂಪನಾ. ಪೂರ್ವದ ಹಳಗನ್ನಡದಿಂದ ಹಿಡಿದು ಆಧುನಿಕ ಸಾಹಿತ್ಯ ಪ್ರಕಾರದವರೆಗೆ ಗಂಭೀರವಾಗಿ ಅಭ್ಯಾಸ ಮಾಡಿಕೊಂಡಿರುವ ಕಮಲಾ ಹಂಪನಾ ಅವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಬಿ. ಎ. ಆನರ್ಸ್, ಎಂ. ಎ. ಪದವೀಧರೆ. ೧೯೫೯ ರಿಂದ ಬೆಂಗಳೂರು ಹಾಗೂ ಮೈಸೂರು ಮಹಾರಾಣಿ ಕಾಲೇಜು, ವಿಜ್ಞಾನ ಕಾಲೇಜು, ಬೆಂಗಳೂರು–ಇಲ್ಲಿ ಉಪನ್ಯಾಸಕಿಯಾಗಿದ್ದ ಇವರು ಈಗ ಬೆಂಗಳೂರು ಮಹಾರಾಣಿ ಕಲಾ ಕಾಲೇಜಿನ ಕನ್ನಡ ವಿಭಾಗದ ರೀಡರ್ ಆಗಿದ್ದಾರೆ. ತಮ್ಮ ಪ್ರೌಢ ಉಪನ್ಯಾಸಗಳಿಂದ ಸಾವಿರ ಸಾವಿರ ಸಂಖ್ಯೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಮನಸ್ಸನ್ನು ಗೆದ್ದಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯೆಯೂ ಆಗಿದ್ದರು. ಕಾಲೇಜು ಹರಿಜನ ಗಿರಿಜನ ಅಧ್ಯಾಪಕ ಸಂಘದ ಉಪಾಧ್ಯಕ್ಷೆ. ಅನೇಕ ಸಂಘ–ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ದುಡಿಯುತ್ತಿದ್ದಾರೆ. ೧೯೮೫ ರಾಜ್ಯ ಸಾಹಿತ್ಯ ಅಕಾಡೆಮಿಯ ವಿಶೇಷ ಬಹುಮಾನಗಳನ್ನು ಪಡೆದು ಕೊಂಡಿದ್ದಾರೆ.

ಕಮಲಾ ಹಂಪನಾರವರ ಬರವಣಿಗೆಯ ಹರಹು ದೊಡ್ಡದು. ವಿಚಾರ, ವಿಮರ್ಶೆ, ಸಂಶೋಧನೆ–ಈ ಮೂರು ಕ್ಷೇತ್ರಗಳಲ್ಲಿ ಇವರ ಕೊಡುಗೆ ಬೆಲೆಯುಳ್ಳದ್ದಾಗಿದೆ. ಇವರ ಕೆಲವು ಕತೆಗಳು, ಪ್ರಬಂಧಗಳು ಇತರ ಭಾಷೆಗಳಿಗೆ (ಬಂಗಾಳಿ, ತಮಿಳು) ಅನುವಾದ ಗೊಂಡಿವೆ. ಕೆಲವು ಪುಸ್ತಕಗಳು ನಾಲ್ಕಾರು ಬಾರಿ ಮರುಮುದ್ರಣಗೊಂಡಿವೆ. ಸೃಜನಾತ್ಮಕ ಕೃತಿ ರಚನೆಯ ಜೊತೆಗೆ ಅನುವಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ. ಹಳಗನ್ನಡ ಗ್ರಂಥಗಳನ್ನೂ ಸಂಪಾದಿಸಿದ್ದಾರೆ, ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಮಕ್ಕಳ ಪುಸ್ತಕಗಳು, ವಿಮರ್ಶಾತ್ಮಕ ಹೊತ್ತಗೆಗಳನ್ನು ರಚಿಸಿದ್ದಾರೆ. ವಿಶ್ವಕೋಶ, ಸಾಹಿತ್ಯ ಚರಿತ್ರೆ, ಕನ್ನಡ ಭಾರತಿ–ಮುಂತಾದ ವಿವಿಧ ಪ್ರಮುಖ ಸಂಪುಟಗಳಲ್ಲಿ ವಿದ್ವತ್ಪೂರ್ಣ ಲೇಖನಗಳನ್ನು ಪ್ರಕಟಣೆ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಕಥೆಗಳು, ನಾಟಕಗಳು, ರೂಪಕಗಳು, ಶಬ್ದಚಿತ್ರಗಳು, ವಿದ್ವತ್ಪೂರ್ಣ ವಿಷಯಗಳ ಮೇಲೆ ಭಾಷಣಗಳು ಪ್ರಸಾರವಾಗಿವೆ. ಇವರಿಂದ ರಚಿತವಾಗಿರುವ ಸುಮಾರು ಮುವ್ವತ್ತೈದು ಪುಸ್ತಕಗಳೂ ವಿಷಯ ವೈವಿಧ್ಯತೆಯಿಂದ ಕೂಡಿದ್ದು ಸಾಹಿತ್ಯಾಸಕ್ತರ ಮನಸ್ಸನ್ನು ಆಕರ್ಷಿಸಿವೆ. ಬೊಂಬಾಯಿ ಹೈದರಾಬಾದ್, ಮಂಡ್ಯ, ಚಿಕ್ಕಮಗಳೂರು, ಬೆಂಗಳೂರು, ಧರ್ಮಸ್ಥಳ, ಶಿರಸಿ ಮೊದಲಾದ ಕಡೆಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳಲ್ಲಿ, ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

ಬೆಂಗಳೂರು ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಪ್ರಚಾರೋಪನ್ಯಾಸಗಳನ್ನು ಮಾಡಿದ್ದಾರೆ. ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಚಾರ ಸಂಕಿರಣ ಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ

ಸುಮಾರು ಇಪ್ಪತ್ತೈದು ವರುಷಗಳಿಂದ ಕರ್ನಾಟಕದಾದ್ಯಂತ ಹಾಗೂ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಕಾಶ್ಮೀರದಿಂದ ಖಟ್ಮಂಡುವರೆಗೆ, ಖಟ್ಮಂಡುವಿನಿಂದ ಕಲಕತ್ತೆ, ಕಾಶಿ ಕರ್ನಾಟಕದವರೆಗೆ ಪ್ರವಾಸ ಮಾಡಿ ಎಲ್ಲ ಕಡೆಗಳಲ್ಲಿಯೂ ಸಾಹಿತ್ಯಿಕ ಉಪನ್ಯಾಸಗಳನ್ನು ನೀಡಿದ್ದಾರೆ.

ಕಮಲಾಭಿನಂದನ*

ಡಾ|| ಹಾ. ಮಾ. ನಾಯಕ

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಈ ವರ್ಷದ ಪ್ರಶಸ್ತಿಗಳನ್ನು ಪಡೆದವರಲ್ಲಿ ಶ್ರೀಮತಿ ಕಮಲಾ ಹಂಪನಾ ಒಬ್ಬರು. ಈ ಮೊದಲು ಈ ಪ್ರಶಸ್ತಿ ಪಡೆದ ಲೇಖಕಿಯರಲ್ಲಿ ಶ್ರೀಮತಿಯರಾದ ತಿರುಮಲೆ ರಾಜಮ್ಮ, ಜಯಲಕ್ಷ್ಮೀ, ಆರ್. ಶ್ರೀನಿವಾಸನ್, ಜಯದೇವಿ ತಾಯಿ ಲಿಗಾಡೆ, ಎಂ. ಕೆ. ಇಂದಿರಾ, ಟಿ. ಸುನಂದಮ್ಮ, ವಾಣಿ, ಗೀತಾ ಕುಲಕರ್ಣಿ ಮೊದಲಾದವರು ಸೇರಿದ್ದಾರೆ. ಅವರೆಲ್ಲ ಹೆಚ್ಚುಕಡಿಮೆ ಒಂದು ತಲೆಮಾರಿಗೆ ಸೇರಿದವರು. ಕಮಲಾ ಹಂಪನಾ ಅವರಿಂದ ಇನ್ನೊಂದು ತಲೆಮಾರು ತೊಡಗುತ್ತದೆ. ಪ್ರಶಸ್ತಿ ಪಡೆಯುವ ಹೊಸ ತಲೆಮಾರಿನ ಲೇಖಕಿಯರಲ್ಲಿ ಕಮಲಾ ಮೊದಲಿಗರಾಗುವುದರಲ್ಲಿ ಔಚಿತ್ಯವಿದೆ. ಅವರು ಹಳೆಯ ಮತ್ತು ಹೊಸ ಸಾಹಿತ್ಯವನ್ನು ಬಲ್ಲವರು; ಸೃಜನಶೀಲ ಹಾಗೂ ಸೃಜನೇತರ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವವರು; ಸುಮಾರು ಮೂವತ್ತು ಪುಸ್ತಕಗಳನ್ನು ಪ್ರಕಟಿಸಿರುವವರು; ಕಾಲು ಶತಮಾನದಿಂದ ಕಾಲೇಜಿನಲ್ಲಿ ಪಾಠಹೇಳಿಕೊಂಡು ಬಂದಿರುವವರು ; ಕತೆ, ಕವಿತೆ, ವಿಮರ್ಶೆ, ಸಂಶೋಧನೆ ಮುಂತಾದ ಪ್ರಕಾರಗಳಲ್ಲಿ ಏಕಪ್ರಕಾರವಾಗಿ ಶ್ರಮಿಸಿರುವವರು. ಅವರಿಗೀಗ ಐವತ್ತು. ಐವತ್ತರ ಅಭಿನಂದನ ಸಮಾರಂಭಗಳು ಅಲ್ಲಲ್ಲಿ ನಡೆಯುತ್ತಿರುವ ಹೊತ್ತಿನಲ್ಲಿಯೇ ಅಕಾಡೆಮಿ ಪ್ರಶಸ್ತಿ ಬಂದಿರುವುದು ಅವರ ಸೇವೆಗೆ ದೊರೆತ ಅಧಿಕೃತ ಮನ್ನಣೆ: ಜನಪ್ರಿಯತೆಗೆ ಸಿಕ್ಕಿದ ಅನುಮೋದನೆ.

ಕಮಲಾ ಹಂಪನಾ ತಮ್ಮ ವೃತ್ತಿ ಜೀವನದಲ್ಲಿ ಸಿ. ಆರ್. ಕಮಲಮ್ಮ: ಪ್ರವೃತ್ತಿ ಕ್ಷೇತ್ರದಲ್ಲಿ ಕಮಲಾ ಹಂಪನಾ, ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕಿಯಾಗಿ ಕೆಲಸ ಮಾಡಿರುವ ಅವರು ಸದ್ಯ ರೀಡರ್ ಹಾಗೂ ವಿಭಾಗದ ಮುಖ್ಯರಾಗಿ ಬೆಂಗಳೂರಿನ ಮಹಾರಾಣಿಯವರ ಕಾಲೇಜಿನಲ್ಲಿದ್ದಾರೆ. ಭಾಷಣಕಾರರಾಗಿರುವ ಅವರಿಗ್ಯೆ ತಮ್ಮ ವಿದ್ಯಾರ್ಥಿಗಳ ಮನಸ್ಸನ್ನು ಗೆದ್ದುಕೊಳ್ಳುವುದು ಸುಲಭ. ಯಶಸ್ವಿಯಾದ ಅಧ್ಯಾಪಕರಿಗೆ ಅಗತ್ಯವಾದ ಗುಣಗಳು ಎರಡೇ ಎರಡು, ಒಂದು. ತಾವು ಪಾಠ ಹೇಳುವ ವಿಷಯದ ಮೇಲೆ ಪ್ರಭುತ್ವ; ಇನ್ನೊಂದು, ನಿರರ್ಗಳವಾದ ನಿರೂಪಣೆಯ ಸಾಮರ್ಥ್ಯ. ಕಮಲಾ ಎರಡನ್ನೂ ಸಾಧಿಸಿಕೊಂಡಿದ್ದಾರೆ. ಕನ್ನಡ ಭಾಷೆ ಸಾಹಿತ್ಯಗಳಲ್ಲಿ ಬಿ.ಎ. ಆನರ್ಸ್ ಮತ್ತು ಎಂ.ಎ. ಪದವಿಗಳನ್ನು ಪಡೆದಿರುವ ಅವರು ಕನ್ನಡದ ಶ್ರೇಷ್ಠ ವಿದ್ವಾಂಸರಿಂದ ಕಲಿಯುವ ಅವಕಾಶವನ್ನೂ ಪಡೆದಿದ್ದರು. ಅವರ ಸಾಹಿತ್ಯದ ಆಸಕ್ತಿ ಆಯಾ ದಿನದ ಪಾಠ

*ಸಂಪ್ರತಿ, ಪ್ರಜಾವಾಣಿ ಸಾಪ್ತಾಹಿಕ ಪುರವಣಿ ಜನವರಿ, ೧೯೮೭.

ಹೇಳುವುದಕ್ಕಷ್ಟೇ ಸೀಮಿತವಾದುದಲ್ಲ. ಸಾಹಿತ್ಯದಲ್ಲಿ ತೀರ ಸಹಜವಾದ ಪ್ರೀತಿಯನ್ನು ತಾಳಿದ್ದರಿಂದ ಅವರು ಸಮಗ್ರಹಳಗನ್ನಡ, ನಡುಗನ್ನಡ ಸಾಹಿತ್ಯವನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿದ್ದಾರೆ. ಇದರಿಂದ ಅವರ ಅಧ್ಯಾಪನಕ್ಕೆ ಶಕ್ತಿ ಬಂದಿವೆ: ಸೊಗಸುಂಟಾಗಿದೆ.

ಸಮಾಜದ ದೀನದಲಿತ ಸ್ತರಗಳ ಪ್ರಥಮಾನುಭವವಿರುವ ಕಮಲಾ ಹಂಪನಾ ಇಂದಿನ ಸಾಹಿತ್ಯದ ದಿಕ್ಕು ದನಿಗಳು ಎತ್ತ ತಿರುಗಬೇಕೆಂಬುದರ ಅರಿವನ್ನು ಉಳ್ಳವರಾಗಿದ್ದಾರೆ. ಅವರು ಈಚೆಗೊಮ್ಮೆ ಹೇಳಿದರು : "ದಲಿತ ಸಾಹಿತ್ಯದ ಧ್ವನಿ ತರಂಗಗಳು ಇಂದು ಪೃಥ್ವಿಯನ್ನು ಸುತ್ತಿಕೊಂಡಿವೆ, ಭೂಗೋಳದಲ್ಲಿ ಎಲ್ಲೆಲ್ಲಿ ದಲಿತರನ್ನು ದಮನಿಸಲು ದಬ್ಬಾಳಿಕೆಯಾಗುತ್ತಿದೆಯೋ ಅಲ್ಲೆಲ್ಲಾ ಪ್ರತಿಭಟನೆಯ ಕೂಗು ಕೇಳಿಬರುತ್ತಿದೆ. ದಕ್ಷಿಣ ಆಫ್ರಿಕಾದಿಂದ ಹಿಡಿದು ದಕ್ಷಿಣ ಭಾರತದವರೆಗೆ ದಲಿತರ ಮೇಲೆ ದಾಳಿ ನಿಂತಿಲ್ಲ. ಶತಮಾನಗಳಿಂದ ನಿರಂತರವಾಗಿ ಶೂದ್ರ ದಲಿತರ ಮೇಲೆ ನಡೆಯುತ್ತಿರುವ ಶೋಷಣೆಗೆ ಪೂರ್ಣವಿರಾಮ ಹೇಳಲೇಬೇಕಾದ ಅಗತ್ಯವನ್ನು ಸಮಕಾಲೀನ ಸಾಹಿತ್ಯ ಮನಗಾಣಿಸಬೇಕಾಗಿದೆ." ಈ ಮಾತುಗಳಲ್ಲಿ ಕಮಲಾ ಹಂಪನಾ ಅವರ ಸಾಹಿತ್ಯದ ಆಸಕ್ತಿ ಆಶಯಗಳು ಪ್ರಕಟಗೊಂಡಿವೆ. ಇಂದು ಪ್ರಚಲಿತವಾಗಿರುವ ದಲಿತ ಮತ್ತು ಬಂಡಾಯ ಸಾಹಿತ್ಯ ಪ್ರವೃತ್ತಿಗಳನ್ನು ಕುರಿತು ಅವರು ಸಾಕಷ್ಟು ಬರೆದಿದ್ದಾರೆ: ಭಾಷಣ ಮಾಡಿದ್ದಾರೆ. ಅವರ ಬರಹಗಳನ್ನು ಓದಿರುವವರಿಗೆ ಅವರ ವಿಚಾರಗಳು ಕೇವಲ ಭಾವನೆಗಳನ್ನು ಆಧರಿಸಿದವಲ್ಲವೆಂಬುದೂ ದ್ವೇಷ ಮಾತ್ಸರ್ಯ ತಿರಸ್ಕಾರಗಳ ಫಲವಲ್ಲವೆಂಬುದೂ ಗೊತ್ತಾಗದೆ ಇರದು. ನಾವು ಸಮಕಾಲೀನತೆಯ ವಾರಸುದಾರರು. ಅದನ್ನು ಬಿಟ್ಟಿರುವುದು ಸಾಧ್ಯವೇ ಇಲ್ಲ. ಕಮಲಾ ಹಂಪನಾ ಇದನ್ನು ಬಲ್ಲರು.

ಕನ್ನಡದ ಮತ್ತೊಬ್ಬ ಲೇಖಕಿ ಕೆಲಸ ಮಾಡಿರಲಾರದಷ್ಟು ಪ್ರಕಾರಗಳಲ್ಲಿ ಕಮಲಾ ಕೆಲಸ ಮಾಡಿದ್ದಾರೆ. ಸಣ್ಣಕತೆ, ಶಿಶುಸಾಹಿತ್ಯ, ಅನುವಾದ, ಗ್ರಂಥಸಂಪಾದನೆ, ವಿಮರ್ಶೆ, ಸಂಶೋಧನೆ, ಜೀವನಚರಿತ್ರೆ, ಕಾವ್ಯ, ವ್ಯಕ್ತಿಚಿತ್ರ, ಸಂದರ್ಶನ– ಇವೆಲ್ಲ ಅವರ ಸಾಧನೆಯ ಪ್ರಕಾರಗಳು. **'ಬಿಂದಲಿ'** (1984) ಎಂಬ ವಚನಗಳ ಚಿಕ್ಕ ಸಂಕಲನದಲ್ಲಿ ಅವರ ನೈಜವಾದ ಸೃಜನಶೀಲತೆ ಪ್ರಕಟಗೊಂಡಿದೆ. ಇಲ್ಲಿನ ವಚನಗಳಲ್ಲಿ ಅಭಿವ್ಯಕ್ತಗೊಂಡಿರುವ ತುಡಿತ ಚಿಂತನೆಗಳು ಮನನೀಯವಾದವು : ರೀತಿ ಸ್ವಾರಸ್ಯವಾದದ್ದು. ಬಿಂದಲಿ ಎಂದರೆ ಚಿಕ್ಕ ಮಗುವಿನ ಒಂದು ಒಡವೆ. ಬಿಂದಲಿಯ ವಚನಗಳಲ್ಲಿ ಆ ಮಗುವಿನ ಹಾಗೂ ಒಡವೆಯ ಚೆಲುವು ಒಟ್ಟಾಗಿ ಕಾಣಿಸಿಕೊಳ್ಳುತ್ತದೆ.

"ಆಕಾಶವಾಣಿಯ ಸಮಾಚಾರದ ಮೊರೆ
ದೂರವಾಣಿಯ ಟ್ರಿಣ್ ಟ್ರಿಣ್ ಕರೆ
ಕರೆಗಂಟೆಯ ಕುಕಿಲ ಕರೆ
ಮಕ್ಕಳ ಮಮತೆಯ ಕರೆ
ಈ ವಿವಿಧ ಕರೆಗಳ ನಡುವೆ
ಎಂತು ಕೇಳುವೆ ನಾನು
ಎನ್ನಂತರಂಗದ ಕರೆಯ ಕಮಲಾಪ್ರಿಯ"

ಎಂಬೊಂದು ವಚನದಲ್ಲಿ ಕಮಲಾ ತಮ್ಮೊಂದು ಕೊರೆಯನ್ನು ತೋಡಿಕೊಳ್ಳುತ್ತಾರೆ. ಇದು ಆಧುನಿಕ ಬದುಕಿನ ಕೊರೆಯನ್ನೂ ಹೇಳುತ್ತದೆ. ಹೊರಗಿನ ಕರೆಗಳಿಗೆ ನಮ್ಮ ಕಿವಿಗಳನ್ನು ಸದಾ ತೆರೆದಿಡಬೇಕು. ಒಳಗಿನ ಕರೆ ಕೇಳಿಸುವುದೇ ಇಲ್ಲ.

'ಮುಡಿಮಲ್ಲಿಗೆ' ಎಂಬ ವ್ಯಕ್ತಿ ಚಿತ್ರಗಳ ಸಂಕಲನದಲ್ಲಿ ಗಳಗನಾಥ, ಕಮಲಾದೇವಿ ಚಟ್ಟೋಪಾಧ್ಯಾಯ, ಪುತಿನ, ದೊಲನ ಮೊದಲಾದವರ ಹತ್ತು ಚಿತ್ರಗಳಿವೆ. ಈ ಚಿತ್ರಗಳಲ್ಲಿ ಜೀವನ ವಿವರಗಳು ಮಾತ್ರವಲ್ಲದ ವ್ಯಕ್ತಿತ್ವದ ಗರಿಗಳೂ ಬಿಚ್ಚಿಕೊಳ್ಳುತ್ತವೆ. ಇನ್ನೊಂದು ಸಂಕಲನದಲ್ಲಿ ಸಾಹಿತಿಗಳ ಪತ್ನಿಯರ ಸಂದರ್ಶನಗಳನ್ನು ಕೊಟ್ಟಿದ್ದಾರೆ. ಇದೊಂದು ಹೊಸ ಬಗೆಯ ಪ್ರಯತ್ನ. ಪತ್ನಿಯರ ಕತೆಯಲ್ಲಿಯೇ ಪತಿಯವರ ವ್ಯಕ್ತಿತ್ವವೂ ಕಾಣಿಸಿಕೊಳ್ಳುವುದನ್ನು ಇಲ್ಲಿ ನೋಡಬಹುದು. ಮತ್ತೊಂದು ಪುಸ್ತಕದಲ್ಲಿ ಆದರ್ಶ ಜೈನ ಮಹಿಳೆಯರನ್ನು ಪರಿಚಯಿಸಿಕೊಟ್ಟಿದ್ದಾರೆ.

ಮೂರು ಕಥಾ ಸಂಕಲನಗಳನ್ನು (ನಕ್ಕಿತು ಹಾಲಿನ ಬಟ್ಟಲು', 'ರೆಕ್ಕೆ ಮುರಿದಿತ್ತು' ಮತ್ತು 'ಚಂದನಾ') ಕಮಲಾ ಹಂಪನಾ ಪ್ರಕಟಿಸಿದ್ದಾರೆ. ಈ ಸಂಕಲನಗಳು ಇಪ್ಪತ್ತೊಂಬತ್ತು ಕತೆಗಳನ್ನು ಒಳಗೊಂಡಿವೆ. ಈ ಕತೆಗಳು ಎಲ್ಲ ದೃಷ್ಟಿಯಿಂದಲೂ ವೈವಿಧ್ಯಮಯವಾಗಿವೆ. ಸುತ್ತಲಿನ ಪರಿಸರವನ್ನೂ ಒಳಗಿನ ಪರಿಗಳನ್ನೂ ಚಿತ್ರಿಸುವುದರಲ್ಲಿ ಲೇಖಕಿ ಸಾಕಷ್ಟು ಯಶಸ್ವಿಯಾಗಿದ್ದಾರೆ. ಸಂದರ್ಭಗಳನ್ನು ಹೃದಯಸ್ಪರ್ಶಿಯಾಗಿ ನಿರೂಪಿಸುವುದರಲ್ಲಿ ಅವರು ಕೌಶಲ ತೋರಿದ್ದಾರೆ. ಕೆಲವು ಕತೆಗಳ ವಸ್ತು ಪುರಾಣ, ಚರಿತ್ರೆ, ಜಾನಪದಗಳನ್ನೂ ಅವಲಂಬಿಸಿದೆ. ಇದು ಕತೆಗಳ ವ್ಯಾಪಕತೆಯನ್ನು ಹೇಳುತ್ತದೆ.

ಕವಿ ಶಾಂತಿನಾಥನ 'ಸುಕುಮಾರ ಚರಿತೆ' ಕಾವ್ಯವನ್ನು ಕಮಲಾ ಹಂಪನಾ ಸಮರ್ಥವಾಗಿ ಸಂಗ್ರಹಿಸಿದ್ದಾರೆ. ರತ್ನಾಕರನ 'ಭರತೇಶ ವೈಭವ'ವನ್ನು ಹಂಪನಾ ಮತ್ತು ಬ್ರಹ್ಮಪ್ಪನವರೊಡನೆ 'ಚಾವುಂಡರಾಯ ಪುರಾಣ'ವನ್ನು ಕೆ. ಆರ್. ಶೇಷಗಿರಿಯವರೊಡನೆ ಕೂಡಿ ಸಂಪಾದಿಸಿದ್ದಾರೆ. ಪ್ರಾಚೀನ ಕನ್ನಡ ಸಾಹಿತ್ಯ, ಜೈನಧರ್ಮ, ಆಧುನಿಕ ಸಾಹಿತ್ಯ ಮತ್ತು ಜೀವನಗಳನ್ನು ಕುರಿತಂತೆ ಕಮಲಾ ಅವರ ಲೇಖನಗಳ ಸಂಪುಟಗಳು ಕೆಲವು ಪ್ರಕಟವಾಗಿವೆ (ಜೈನ ಸಾಹಿತ್ಯ ಪರಿಸರ', 'ಅನೇಕಾಂತವಾದ' 'ಬಾಸಿಂಗ' ಇತ್ಯಾದಿ), ಇನ್ನೂ ಅನೇಕ ಸಂಪುಟಗಳಿಗೆ ಸಾಕಾಗುವಷ್ಟು ಲೇಖನಗಳು ಅವರಲ್ಲಿವೆ. ಈ ಲೇಖನಗಳು ಅವರ ಅಧ್ಯಯನದ ಹರವನ್ನೂ ಆಸಕ್ತಿಯ ವೈಶಾಲ್ಯವನ್ನೂ ತೋರಿಸುತ್ತವೆ. ಮಕ್ಕಳಿಗಾಗಿಯೂ ಅವರ ಅನೇಕ ಪುಸ್ತಕಗಳು ಪ್ರಕಟವಾಗಿವೆ.

ಲೇಖಕ ಎಷ್ಟೇ ದೊಡ್ಡವನಿರಲಿ, ಅವನ ಎಲ್ಲ ಕೃತಿಗಳೂ ಶ್ರೇಷ್ಠವೆನಿಸುವುದಿಲ್ಲ. ಪ್ರತಿಯೊಬ್ಬರ ಸೃಷ್ಟಿಯಲ್ಲಿಯೂ ಕೊರತೆಗಳು ಇದ್ದೇ ಇರುತ್ತವೆ. ಈ ಮಾತು ಕಮಲಾ ಹಂಪನಾ ಅವರಿಗೂ ಅನ್ವಯಿಸುತ್ತದೆ. ಅವರ ಬರಹಗಳಲ್ಲಿಯೂ ಒಳ್ಳೆಯದು, ಸಾಮಾನ್ಯವಾದದ್ದು ತೀರ ಸಾಮಾನ್ಯವಾದದ್ದು ಉಂಟು. ಅವರ ಸಾಹಿತ್ಯದ ಆಸಕ್ತಿ ಶ್ರದ್ಧೆ ಅಭಿರುಚಿಗಳು ಮೇಲುಮಟ್ಟದವು. ಕಾಲುಶತಮಾನ ಸಾಹಿತ್ಯದ ಪೂಜೆಯನ್ನೂ ಕೃಷಿಯನ್ನೂ ಸತತವಾಗಿ ನಡೆಸಿಕೊಂಡು ಬಂದ ಅವರಿಗೆ ಏಕಕಾಲದಲ್ಲಿ ಮೂರು ಸಂಭಾವನಾ ಗ್ರಂಥಗಳನ್ನು ಒಪ್ಪಿಸಿ ಜನರು ತಮ್ಮ ವಿಶ್ವಾಸಗೌರವಗಳನ್ನು ತೋರಿದ್ದಾರೆ. ಇದೊಂದು ದಾಖಲೆ. ಕೆಲಸ ಮಾಡಿದವರನ್ನು ಗೌರವಿಸುವುದು ಅಗತ್ಯ. ಅದು ಸಂಪ್ರದಾಯವಾಗಿ ಬೆಳೆಯಬೇಕು. ಅದಕ್ಕಾಗಿ ಯಾರೂ ಕರುಬಬಾರದು.

ಕಮಲಾ ಹಂಪನಾ ಅವರ ಐವತ್ತನೆಯ ಹುಟ್ಟು ಹಬ್ಬದ ಆಚರಣೆಯ ಸಂದರ್ಭದಲ್ಲಿ ಅಲ್ಲಲ್ಲಿ ಕ್ಷೀಣ ಒಡುಕು ದನಿಗಳು ಕೇಳಿಬಂದದ್ದು ದುರ್ದೈವದ ಮಾತು. ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುತ್ತಾರೆ, ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿಯಾಗುತ್ತಾರೆ ಮುಂತಾದ (ಅಪ) ಪ್ರಚಾರದ ಮಾತುಗಳು ಅರ್ಥಹೀನವಾದುವು. ಒಂದು ವೇಳೆ ಇದೆಲ್ಲ ನಿಜವೇ ಆದರೂ ಅದರಲ್ಲಿ ತಪ್ಪೇನಿದೆ? ಬೇರೆಯವರಂತೆಯೇ ಕಮಲಾ ಅವರಿಗೂ ಅರ್ಹತೆಗಳಿವೆ: ಹಕ್ಕುಗಳಿವೆ. ಹಂಪನಾ ಅವರನ್ನು ಒಲ್ಲದವರು, ಅಸಮಾಧಾನದಿಂದ ಕಾಣುವವರು ತಮ್ಮ ಅತೃಪ್ತಿಯನ್ನು ಕಮಲಾ ಅವರ ಮೇಲೆ ತೋರಿಸುವುದು ಸಣ್ಣತನ. ಬದುಕನ್ನೇ ಉತ್ತಮಗೊಳಿಸುತ್ತೇವೆಂಬ ಭ್ರಮೆಯಿಂದ ಸಾಹಿತ್ಯವನ್ನು ಸೃಷ್ಟಿಸುವವರು ತಮ್ಮ ದೃಷ್ಟಿಯನ್ನು ಮೊದಲು ಸರಿಪಡಿಸಿಕೊಳ್ಳಬೇಕು; ಮೊದಲು ತಾವು ದೊಡ್ಡವರಾಗಬೇಕು. ನಾಡು ನುಡಿಗಳ ಕೆಲಸ ಮಾಡುವ ಎಲ್ಲರಿಗೂ ನಮ್ಮ ಕೃತಜ್ಞತೆ ಸಲ್ಲಬೇಕು.

ಸಾರ್ಥಕ ಬಾಳು

ಐವತ್ತು ವಸಂತಗಳನ್ನು ಸಾಧಾರಣವಾಗಿ ಎಲ್ಲರೂ ದಾಟುತ್ತಾರೆ. ಆದರೆ ಅವುಗಳ ಕಂಪು-ಸೊಂಪುಗಳನ್ನು ತಳಿರು ನವಿರುಗಳನ್ನು ಉಳಿಸಿ-ಬೆಳೆಸಿ, ಜೀವನದಲ್ಲಿ ಅಳವಡಿಸಿಕೊಂಡು, ಇತರರಿಗೂ ತಮ್ಮ ಅರಿವಿನ ಶ್ರದ್ಧೆಯ ಚೇತನದ ಸಾರವನ್ನು ಹಂಚಬಲ್ಲವರು ವಿರಳ. ಅಂತಹ ಕೆಲವೇ ಮಂದಿಗಳಲ್ಲಿ ಶ್ರೀಮತಿ ಕಮಲಾ ಹಂಪನಾ ಒಬ್ಬರು. ಅಧ್ಯಾಪಕಿಯಾಗಿ ತಾವೂ ಅಧ್ಯಯನವನ್ನು ಹಲವಾರು ಮುಖಗಳಲ್ಲಿ ಮುಂದುವರಿಸುತ್ತ, ತಾಯಿಯಾಗಿ ಮಕ್ಕಳ ಏಳಿಗೆ ಎಲ್ಲ ರೀತಿಯಲ್ಲಿಯೂ ಸಮರ್ಪಕವಾಗಿ ನಡೆಯುವಂತೆ ನಿರ್ದೇಶಿಸುತ್ತ ಪ್ರಿಯ ಪತ್ನಿಯಾಗಿ ಕುಟುಂಬದ ಯಜಮಾನಿಯಾಗಿ ಆ ಕರ್ತವ್ಯಕ್ಕೆ ಲೋಪ ಬಾರದಂತೆ ನಡೆಯುವುದರ ಜೊತೆಗೆ ಸಾಹಿತ್ಯ ಸೇವೆಯನ್ನು ಹಲವು ರೀತಿಯಲ್ಲಿ ಮಾಡುತ್ತ ಸಮಾಜದ ಏಳಿಗೆಗೆ ಸಹಕಾರಿಯಾಗಿದ್ದಾರೆ.

ಸಬ್ ಇಂಜಿನಿಯರ್ ಆಗಿದ್ದ ಶ್ರೀ ಸಿ. ರಂಗಧಾಮ ನಾಯಕ್ ಅವರು ಎಂಟು ಮಕ್ಕಳಲ್ಲಿ ಆರನೆಯ ಸಂತಾನ ಶ್ರೀಮತಿ ಕಮಲಮ್ಮನವರು. ತಂದೆಯವರ ದೇಶಪ್ರೇಮ, ವಾಕ್ಪಟುತ್ವ, ಸರಳತೆ, ಮಕ್ಕಳಲ್ಲಿಯೂ ಅಚ್ಚೊತ್ತಿದೆ ಎಂದು ತಾಯಿಯವರು ಇಂದಿಗೂ ನೆನೆಸಿಕೊಳ್ಳುತ್ತಿರುತ್ತಾರೆ. ಅಂತಹ ತಂದೆಯನ್ನು ಕಳೆದುಕೊಂಡಾಗ ಕಮಲಮ್ಮನವರು ೯ ವರ್ಷದ ಬಾಲಕಿ. ತಾಯಿ ರಂಗಲಕ್ಷ್ಮಮ್ಮನವರು ಹಠಾತ್ತನೆ ಒದಗಿದ ಈ ಆಘಾತದಿಂದ ಧೃತಿಗೆಟ್ಟರೂ ಮಕ್ಕಳಿಗಾಗಿ ಧೈರ್ಯ ತಾಳಿದರು. ನೋವನ್ನು ನುಂಗಿ, ಮಕ್ಕಳ ಶಿಕ್ಷಣದತ್ತ ಗಮನವಿತ್ತು ಎಲ್ಲರಿಗೂ ಒಳ್ಳೆಯ ವಿದ್ಯೆಯನ್ನು ಕೊಟ್ಟರು.

ಇಂಟರ್ ಮೀಡಿಯೆಟ್ ಆದಮೇಲೆ ಮಗಳು ಶಿಕ್ಷಣವನ್ನು ಮುಂದುವರಿಸಲು ಅಪೇಕ್ಷೆ ತೋರಿದಾಗ ಆ ತಾಯಿ ಬೇಡವೆನ್ನಲಿಲ್ಲ, ಮೈಸೂರಿನಲ್ಲಿ ಹಾಸ್ಟಲಿನಲ್ಲಿಟ್ಟು ಓದಿಸಿದರು. ಅಲ್ಲಿಯೇ ಕನ್ನಡ ಎಂ. ಎ. ಮುಗಿಸಿದ ಕಮಲಮ್ಮನವರು ಬೆಂಗಳೂರಿನಲ್ಲಿ ಮಹಾರಾಣಿ ಕಾಲೇಜಿನ ಅಧ್ಯಾಪಕಿಯಾಗಿ ಕಾರ್ಯ ವಹಿಸಿಕೊಂಡರು.

ಪಿಶಸ್ಮೃಗ್ನೈ ಪದಿಹರೆಯದ ಆ ಚೇತನ, ಪ್ರೀತಿಯ ಸುಳಿಯಲ್ಲೂ ಸಿಕ್ಕಿತು. ಅದರ ಪಕ್ವತೆಗಾಗಿ ಆರು ವರ್ಷಗಳು ಕಾದು ಶ್ರೀ ಹಂಪ. ನಾಗರಾಜಯ್ಯನವರ ಕೈ ಹಿಡಿದರು. ಸಮಾನ ಅಭಿರುಚಿಯ, ಸಮಾನ ಗುರಿಯ ಆ ಪ್ರೇಮಿಗಳು ಸಮಾಜದ ವಿರೋಧವನ್ನು ಲೆಕ್ಕಿಸದೇ ದಂಪತಿಗಳಾಗಿ ಆದರ್ಶ ಜೀವನದ ಮೇಲ್ಪಂಕ್ತಿಯನ್ನು ಹಾಕಿದರು. ಇವರ ಆಪ್ತರು, ಇಷ್ಟರು, ಇವರ ಮನದಾಳವನ್ನು ಅರಿತವರು ಇದಕ್ಕೆ ಮನತುಂಬಿ ಹಾರೈಸಿದರು.

ಧಾರಿಣಿ

'ವನಿತಾ' ಮಾಸಿಕದಿಂದ

ಕಮಲಮ್ಮ 'ಕಮಲಾ ಹಂಪನಾ' ಆದಮೇಲೆ ಅವರ ಬಹುಮುಖಿ ಪ್ರತಿಭೆಗೆ ಎಲ್ಲ ರೀತಿಯಿಂದಲೂ ಸಹಕಾರ ದೊರೆತು, ಸಾಹಿತ್ಯ ಶ್ರೀಮಂತಿಕೆಗೆ ಕಾರಣವಾಯಿತು. ಇದುವರೆವಿಗೂ ಸುಮಾರು ೨೭ಕ್ಕೂ ಮಿಕ್ಕಿ ಹೊತ್ತಗೆಗಳು ಅವರಿಂದ ರಚಿತವಾಗಿವೆ. ಕಥಾ ಸಂಕಲನಗಳು ಮೂರು, ಏಳು ಶಿಶು ಸಾಹಿತ್ಯ, ಸಂಪಾದಿಸಿದ ಗ್ರಂಥಗಳು ಏಳು, ಜೈನರ ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಕೊನೆಯವರಾದ ಶ್ರೀ ವರ್ಧಮಾನ ಮಹಾವೀರರನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ವಿಮರ್ಶಿಸಿ, ಶ್ವೇತಾಂಬರ, ದಿಗಂಬರ ಆಮ್ನಾಯಗಳೆಡರಲ್ಲೂ ಹೇಳಿರುವ ಅಂಶಗಳನ್ನು ಮಿಳಿತ ಮಾಡಿ, ರಚಿಸಿರುವ ಜೀವನ ಚರಿತ್ರೆ ಶ್ರೀ ಮಹಾವೀರ. ಇದನ್ನು ತಮ್ಮ ಪತಿ ಶ್ರೀ ಹಂಪನಾರವರೊಂದಿಗೆ ಕೂಡಿ ರಚಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆಯಲ್ಲಿನ ಅವರ ಸಂಶೋಧನ ಭಾಷಣದ ಪುಸ್ತಕ ರೂಪ ಶಾಂತಿನಾಥ. ಶಾಂತಿನಾಥ ಕವಿಯ ಬಗ್ಗೆ ಸಂಶೋಧನಾತ್ಮಕ ಅಂಶಗಳನ್ನು ವೈಚಾರಿಕ ಸಂಗತಿಗಳನ್ನು ಅಳವಡಿಸಿರೂಪಿಸಿದ ಈ ಕೃತಿ ಕಮಲಾ ಹಂಪನಾರವರ ಸಂಶೋಧನಾಸಕ್ತಿಗೊಂದು ಒಳ್ಳೆಯ ಉದಾಹರಣೆ.

'ಆದರ್ಶ ಜೈನ ಮಹಿಳೆಯರು' ಇಂದಿಗೂ ಆದರ್ಶವಾಗಿ ಉಳಿದಿರುವ ಅಂದಿನ ಜೈನ ಮಹಿಳೆಯರ ಬದುಕನ್ನು ಕುರಿತ ಅಪರೂಪದ ಕೃತಿ. ಬೆಳಕಿಗೇ ಬಾರದ ಕೆಲವು ಮಹಿಳೆಯರ ಪರಿಚಯವನ್ನು ಶ್ರಮವಹಿಸಿ, ಸಂಶೋಧಿಸಿ ಪ್ರಕಟಿಸಿದ ಹೆಮ್ಮೆ ಶ್ರೀಮತಿಯವರದು. ಇವಲ್ಲದೆ ಇನ್ನೂ ನಾಲ್ಕಾರು ಸಂಶೋಧನಾತ್ಮಕ ಗ್ರಂಥಗಳು ಇವರಿಂದ ಬರೆಯಲ್ಪಟ್ಟಿವೆ. 'ಮುಡಿ ಮಲ್ಲಿಗೆ', ವ್ಯಕ್ತಿ ಚಿತ್ರಗಳ ಸಂಕಲನ ಹಾಗೂ 'ಬಿಂದಲಿ' ಎಂಬ ವಚನಗಳ ಸಂಗ್ರಹ. ಇದರಲ್ಲಿ ಶ್ರೀಮತಿಯವರು ಬದುಕಿನ ಅನುಭವದ ಸಾರವನ್ನು ಹಲವು ರೀತಿಯಲ್ಲಿ ಹಲವು ಕೋನಗಳಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಭಾಷಣ ಕಲೆ ಇವರಿಗೆ ಕರಗತ. ಯಾವ ವಿಷಯವೇ ಆಗಲಿ, ಶ್ರೋತೃಗಳ ಮನ ಹೊಕ್ಕು ನಿಲ್ಲುವಂತೆ ನಿರರ್ಗಳವಾಗಿ ಮಾತನಾಡಬಲ್ಲರು. ಲೇಖನಗಳು ಅದರಲ್ಲೂ ಸಂಶೋಧನಾತ್ಮಕ ಲೇಖನಗಳು ಸಾಹಿತ್ಯಾಭ್ಯಾಸಿಗಳಿಗೊಂದು ಕೈದೀವಿಗೆ.

'ರವಿ ಕಾಣದ್ದನ್ನು ಕವಿ ಕಂಡ, ಕವಿ ಕಾಣದ್ದನ್ನು ವಿಮರ್ಶಕ ಕಂಡ' ಎಂಬ ಗಾದೆ ಒಂದಿದೆ ಕಮಲಮ್ಮ ತಮ್ಮ ವಿಮರ್ಶನಾತ್ಮಕ ಲೇಖನಗಳಲ್ಲಿ ಪಂಪನ ಕೃಷ್ಣಭಕ್ತಿಯನ್ನು ಒಳಹೊಕ್ಕು ಚಿತ್ರಿಸಿದ್ದಾರೆ. ಚಾಮುಂಡರಾಯನ ವ್ಯಕ್ತಿತ್ವವನ್ನು ಎಳೆಎಳೆಯಾಗಿ ಬಿಡಿಸಿದ್ದಾರೆ. ಯಾರ ಮನಸ್ಸಿಗೂ ನೋವಾಗದಂತೆ, ಕರ್ತೃಗಳು ತಮ್ಮ ಲೇಖನದಿಂದ ಪೆಚ್ಚಾಗದಂತೆ, ತಮ್ಮ ಅನಿಸಿಕೆಗಳನ್ನು ಸಕಾರಣವಾಗಿ ತಿಳಿಸಿ ತಿದ್ದಿಕೊಳ್ಳುವಂತೆ ಮಾಡಿದ್ದಾರೆ. ಜೈನ ಧರ್ಮವನ್ನು ಆಳವಾಗಿ ಅಭ್ಯಸಿಸಿ, ಅಷ್ಟೇ ಸರಳವಾಗಿ, ಕರ್ಮತತ್ವ, ಅನೇಕಾಂತವಾದ ಅಹಿಂಸಾತತ್ವ ನಿರೂಪಣೆಯನ್ನು ಮಕ್ಕಳೂ ತಿಳಿದುಕೊಳ್ಳುವಂತೆ ಬರೆದಿದ್ದಾರೆ. ಚಾರಿತ್ರಿಕ ಹಾಗೂ ಪೌರಾಣಿಕ ಸ್ತ್ರೀ ವ್ಯಕ್ತಿತ್ವದ ವಿಶ್ಲೇಷಣೆ ಮಾಡಿ, ಅದನ್ನು ಮನಮುಟ್ಟುವಂತೆ ಕಂಡರಿಸಿದ್ದಾರೆ. ಜೈನ ಧರ್ಮ ಸ್ತ್ರೀಗೆ ಕೊಟ್ಟ ಸ್ಥಾನವನ್ನು (ಸ್ತ್ರೀ ಸಹಜವಾಗಿ ಪಡೆದುಕೊಂಡಿದ್ದೆಂದರೂ ಸರಿಯೆ) ಅನೇಕ ಲೇಖನಗಳಲ್ಲಿ ವಿವರವಾಗಿ ಚಿತ್ರಿಸಿದ್ದಾರೆ.

ವಚನ ಸಾಹಿತ್ಯದ ಹರಹು, ತಿಳಿವುಗಳನ್ನು ಜನ ಸಾಮಾನ್ಯರೂ ಅರಿತು, ನಡೆಯುವಷ್ಟರ ಮಟ್ಟಿಗೆ ಕಮಲಮ್ಮನವರು ಆ ಸಾಹಿತ್ಯವನ್ನು ಅಭ್ಯಸಿಸಿ, ಪ್ರಚುರಪಡಿಸುತ್ತಿದ್ದಾರೆ. ಅವರ ಭಾಷಣಗಳಲ್ಲಿ ಬರವಣಿಗೆಗಳಲ್ಲಿ ಈ ಸುಳಿವು ಸಿಗುತ್ತಿರುತ್ತದೆ.

ಈವರೆಗಿನ ಅವರ ಸಾಹಿತ್ಯ ಸಾಧನೆ, ಪಡೆದ ಸಿದ್ಧಿ ಪ್ರತಿಯೊಬ್ಬರಿಗೂ ಮಾರ್ಗದರ್ಶಕ. ಅವರಿಗೆ ಐವತ್ತು ತುಂಬುತ್ತಿರುವ ಈ ವೇಳೆಯಲ್ಲಿ ಸನ್ಮಾನಿಸಿದುದು ಅಷ್ಟೇ ಉಚಿತವೂ ಹೆಮ್ಮೆಯೂ ಸಂತೋಷವೂ ಕೂಡ.

ಅವರ ತಾಯಿಯವರನ್ನು "ನಿಮ್ಮ ಮಗಳಿಗೆ ಎಲ್ಲರೂ ಸನ್ಮಾನ ಮಾಡುತ್ತಿರುವರಲ್ಲ. ನಿಮಗೇನೆನ್ನಿಸುತ್ತೆ? ಹೆಮ್ಮೆಯೇ, ಸಂತೋಷವೇ? "ಎಂದಾಗ.

'ಸಂತೋಷ ಯಾರಿಗೆ ತಾನೇ ಆಗುವುದಿಲ್ಲಮ್ಮ ಹೆಮ್ಮೆಯೇನೂ ಇಲ್ಲ; ನನ್ನ ಮಗಳಂತೆಯೇ? ಇನ್ನೂ ಅನೇಕರಿದ್ದಾರೆ. ಸಮಾಜ ಅವರನ್ನೂ ಗುರ್ತಿಸಿ, ಸನ್ಮಾನಿಸಬೇಕು' ಎಂದರು. ಇದಕ್ಕೆ ನಾವು ದನಿಗೂಡಿಸಿ ಕಮಲ ಹಂಪನಾರವರ ಸರ್ವತೋಮುಖ ಅಭ್ಯುದಯ ನೂರ್ಕಾಲ ನಡೆಯುತ್ತಲೇ ಇರಲೆಂದು ಹಾರೈಸೋಣ.

ಕ
ಮ
ಲಾ

ಭಲೇ ಜೋಡಿ!

ಹಂ
ಪ
ನಾ

ಹಾಲು ಜೇನು ಹದವಾಗಿ ಬೆರೆತಂಥ ಮಧುರ ದಾಂಪತ್ಯದ ಆದರ್ಶ ಜೋಡಿ.

ಸಮರಸವೆ ಜೀವನ ಎಂಬ ತತ್ತ್ವವನ್ನು ನಂಬಿರುವ ಡಾ. ಹಂಪ. ನಾಗರಾಜಯ್ಯ ಮತ್ತು ಶ್ರೀಮತಿ ಕಮಲಾ ಹಂಪನಾ ಕನ್ನಡದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹತ್ವದ ಹೆಸರು.

ವೃತ್ತಿಯಿಂದ ಅಧ್ಯಾಪಕರೂ ಪ್ರವೃತ್ತಿಯಿಂದ ಸಾಹಿತಿಗಳೂ ಆದ ಈ ದಂಪತಿಗಳು ಸುಸಂಸ್ಕೃತಿಕ–ಸದಭಿರುಚಿಗಳ ಸಂಕೇತ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಪ್ರಾಧ್ಯಾಪಕರಾಗಿರುವ ಹಂಪ. ನಾಗರಾಜಯ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು. ಶ್ರೀಮತಿ ಕಮಲಾ ಹಂಪನಾ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕಿ. ಸಾಹಿತ್ಯ ಬೋಧನೆ, ಸಾಹಿತ್ಯ ರಚನೆ ಇವರಿಬ್ಬರ ಸಮಾನ ಅಭಿರುಚಿ, ಸಮಾನ ಗುಣ. ಸಾಹಿತ್ಯದಲ್ಲಿನ ಈ ಸಮಾನ ಅಭಿರುಚಿಯೇ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನಾಗರಾಜಯ್ಯ ಮತ್ತು ಕಮಲಾ ಅವರನ್ನು ದಾಂಪತ್ಯದ ಸುಮಬಂಧನಕ್ಕೆ ಸೆಳೆದದ್ದು.

ಕನ್ನಡದಲ್ಲಿ ಎಂ. ಎ. ಸ್ನಾತಕೋತ್ತರ ಪದವೀಧರರಾದ ಹಂಪನಾ ಮತ್ತು ಕಮಲಾ ೧೯೫೩ರಲ್ಲಿ ತುಮಕೂರಿನಲ್ಲಿ ಇಂಟರ್ ಮೀಡಿಯಟ್ ಓದುತ್ತಿದ್ದಾಗಿನಿಂದ ಸಹವಿದ್ಯಾರ್ಥಿಗಳು. ಕನ್ನಡದಲ್ಲಿ ಹೆಚ್ಚು ಅಂಕ ಗಳಿಸಿದ ಕಮಲಾಗೆ ಬಿ.ಎ. ಆನರ್ಸ್ ಸೇರಲು ಅಧ್ಯಾಪಕಿಯ ಸಲಹೆ. ಹಲವಾರು ಕಷ್ಟಕೋಟಲೆಗಳ ಮಧ್ಯೆ ಮೈಸೂರಿಗೆ ಬಂದು ಕನ್ನಡದಲ್ಲಿ ಬಿ.ಎ. ಆನರ್ಸ್ ತರಗತಿ ಸೇರಿದ್ದಾಯಿತು. ಹಾಸ್ಟೆಲ್‌ನಲ್ಲಿ ವಸತಿ. ಹೊಸ ಊರಿನಲ್ಲಿ 'ಅನಾಥ ಪ್ರಜ್ಞೆ' ಕಾಡಿದಾಗ ಅದೇ ತರಗತಿಯಲ್ಲಿ ಕಂಡ ಪರಿಚಿತ ಮುಖ ಹಂಪನಾ. ಈ ಪರಿಚಯ ಕ್ರಮೇಣ ಸ್ನೇಹಕ್ಕೆ ತಿರುಗಿ ಸಮಾನ ಅಭಿರುಚಿ ವಿಚಾರ ವಿನಿಮಯಕ್ಕೆ ನಾಂದಿಯಾಯಿತು. ಒಲವು, ಸ್ನೇಹಗಳ ಸೇಚನೆಯಿಂದ ಅಧ್ಯಯನಕ್ಕೆ ಹೊಸ ಹುರುಪು. ೧೯೫೯ರಲ್ಲಿ ನಾಗರಾಜಯ್ಯ ಮತ್ತು ಕಮಲಾ ಪ್ರಥಮ ತರಗತಿಯಲ್ಲಿ ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಒಂದೇ ವಾರದಲ್ಲಿ ಇಬ್ಬರಿಗೂ ಕನ್ನಡ ಉಪನ್ಯಾಸಕರ ಕೆಲಸ ಸಿಕ್ಕಿತು. ಕಮಲಾ ಬೆಂಗಳೂರಿನ ಮಹಾರಾಣಿ ಕಾಲೇಜಿಗೆ ಸೇರಿದರೆ ನಾಗರಾಜಯ್ಯನವರಿಗೆ ಮೈಸೂರಿನ ಮಹಾರಾಣಿ ಕಾಲೇಜ್. ಉಪನ್ಯಾಸಕರಾಗಿ ಕಮಲಾ ಮತ್ತು ಹಂಪನಾ ಕರ್ನಾಟಕದ ಹಲವಾರು ಊರುಗಳಲ್ಲಿ ಸರ್ಕಾರಿ ನಿಯಮದಂತೆ ಕೆಲಸ ಮಾಡಬೇಕಾಯಿತು. ದೇಹ ದೂರವಾದಷ್ಟೂ ಹೃದಯ ಹತ್ತಿರ. ಈ ಮಧ್ಯೆ ಪರಸ್ಪರ ಅರಿವಿನ ಬುನಾದಿಯ ಮೇಲೆ ಪ್ರೇಮದಾಂಗುಡಿ ಇಡಲಾರಂಭಿಸಿತು. ೧೯೬೦ರಲ್ಲಿ ಇಬ್ಬರೂ ಮದುವೆಯಾಗುವ ನಿಶ್ಚಯ

ಮುಂದುವರೆ

ಮಾಡಿದರು. ಆದರೆ ಜಾತಿಯ ಭೂತ ತಲೆ ಎತ್ತಿತ್ತು. ಧೈರ್ಯವಾಗಿ ಈ ಜಾತಿಯ ಭೂತವನ್ನು ಮೆಟ್ಟಿನಿಂತ ಹಂಪನಾ ಮತ್ತು ಕಮಲಾ ೨೪–೧೧–೧೯೬೧ರಂದು ಬೆಂಗಳೂರಿನ ಸಬ್-ರಿಜಿಸ್ಟ್ರಾರ್ ಆಫೀಸಿನಲ್ಲಿ ವಿವಾಹವಾದರು. ಅಂತರ್ಜಾತಿಯ ವಿವಾಹ ತರುವ ಕಷ್ಟ ಸಮಸ್ಯೆಗಳನ್ನೆಲ್ಲ ಧೈರ್ಯವಾಗಿ ಎದುರಿಸಿ ತಮ್ಮ ವಿವಾಹದ ಬೆಳ್ಳಿ ಹಬ್ಬದ ವರ್ಷದಲ್ಲಿ ಕಾಲಿರಿಸುವ ನಾಗರಾಜಯ್ಯ ದಂಪತಿಗಳು, ಈ ಇಪ್ಪತ್ತೈದು ವರ್ಷಗಳಲ್ಲಿ ಒಲವಿನ ಸಾಹಿತಿಗಳಾಗಿ, ಸಾಹಿತ್ಯದ ಪರಿಚಾರಕರಾಗಿ ಸಾಧಿಸಿರುವುದು ಅಷ್ಟಿಷ್ಟಲ್ಲ. ಬೋಧನೆ, ಸಂಶೋಧನೆ, ಗ್ರಂಥ ಸಂಪಾದನೆ, ಸಾಹಿತ್ಯ ರಚನೆಗಳಲ್ಲಿ ಎಂಥ ಕಟು-ವಿಮರ್ಶಕನೂ 'ಸೈ' ಎನ್ನುವಂಥ ಸಾಧನೆ ಈ ದಂಪತಿಗಳದು.

ಭಾಷಾ ವಿಜ್ಞಾನ, ಗ್ರಂಥ ಸಂಪಾದನೆ, ಜೀವನ ಚರಿತ್ರೆ, ಜಾನಪದ, ಸಂಶೋಧನೆ, ಶಿಶುಸಾಹಿತ್ಯ, ಕಾದಂಬರಿ, ಲಲಿತಪ್ರಬಂಧ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಐವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವ ಹಂಪ. ನಾಗರಾಜಯ್ಯ ಅವರ ಸಾಹಿತ್ಯ ಜೀವನ ದಲ್ಲಿ ಒಂದು ಮಹತ್ವದ ಮೈಲುಗಳು. ದ್ರಾವಿಡ ಭಾಷಾ ವಿಜ್ಞಾನ ಈ ಗ್ರಂಥಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಸಾಹಿತ್ಯ ರಚನೆಯಲ್ಲಿ ಗಂಡನಿಗಿಂತ ಕಡಿಮೆ ಏನಲ್ಲ ಕಮಲಾ ಹಂಪನಾ. ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವ ಕಮಲಾ ಹಂಪನಾ ಅವರ ಹೆಚ್ಚಿನ ಒಲವೂ ಗ್ರಂಥ ಸಂಪಾದನೆ ಮತ್ತು ಸಂಶೋಧನೆಯತ್ತ. ಸುಕುಮಾರ ಚರಿತೆ, ಭರತೇಶ ವೈಭವದಿಂದ ಮಹತ್ವದ ಕೃತಿಗಳ ಸಂಪಾದನೆಯ ಜೊತೆ ಮೂರು ಕಥಾ ಸಂಕಲನಗಳನ್ನೂ ಹತ್ತು ಶಿಶು ಸಾಹಿತ್ಯ ಕೃತಿಗಳನ್ನೂ ರಚಿಸಿ ಕಮಲಾ ಸೃಜನಶೀಲ ಕಥಾ ಸಾಹಿತ್ಯದಲ್ಲೂ ತಮ್ಮ ಪ್ರತಿಭೆಯನ್ನು ತೋರಿದ್ದಾರೆ. ಶಾಂತಿನಾಥ, ಅನೇಕಾಂತವಾದ, ಜೈನಸಾಹಿತ್ಯ ಪರಿಸರ ಕಮಲಾ ಅವರ ಮಹತ್ವದ ಸಂಶೋಧನ ಕೃತಿಗಳು. ಶ್ರೀಮತಿ ಕಮಲಾ ಹಂಪನಾ ಅವರ ಸೇವೆಯನ್ನು ಗುರುತಿಸಿದ ಅಭಿಮಾನಿಗಳು ಇತ್ತೀಚೆಗೆ 'ಕಮಲಾಭಿನಂದನ' ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಿ ಅವರನ್ನು ಸನ್ಮಾನಿಸಿದರು. ಈ ಸನ್ಮಾನಕ್ಕೆ ಕಳಶವಿಟ್ಟಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಕಮಲಾ ಹಂಪನಾ ಅವರಿಗೆ ಈ ವರ್ಷದ ಶ್ರೇಷ್ಠ ಸಾಹಿತಿಗಳಿಗೆ ನೀಡುವ ಪ್ರಶಸ್ತಿಯನ್ನು ಕೊಟ್ಟಿದೆ. ಸನ್ಮಾನ, ಪ್ರಶಸ್ತಿಗಾಗಿ ಅಭಿನಂದಿಸಿದ 'ವನಿತಾ' ಸಂದರ್ಶನ ಹಂಪನಾ–ಕಮಲಾ ಅವರ ಪರಿಚಯದ ದಿನಗಳಿಂದಲೇ ಶುರುವಾಯಿತು.

ವನಿತಾ : ನೀವು ಪರಸ್ಪರ ಆಕರ್ಷಿತರಾದದ್ದು ಹೇಗೆ ?

ಹಂಪನಾ : ನಮ್ಮಲ್ಲಿ ಮೊದಲ ನೋಟದಲ್ಲೇ ಪ್ರಣಯಾಂಕುರ ಪುಳಕಾದಿಗಳೇನೂ ಆಗಲಿಲ್ಲ. ಮೈಸೂರಿನಲ್ಲಿ ಕನ್ನಡ ಆನರ್ಸ್ ತರಗತಿಯಲ್ಲಿ ಓದುತ್ತಿದ್ದಾಗ ನಮ್ಮಲ್ಲಿ ಸಮಾನ ಅಭಿರುಚಿ ಇದೆ ಎಂದು ಇಬ್ಬರಿಗೂ ತಿಳಿಯಿತು. ಕಾವ್ಯ, ಸಾಹಿತ್ಯ, ಕಲೆ, ಸಂಗೀತ, ಭಾಷಣ ಇವುಗಳಲ್ಲಿ ನಾವು ಸಮಾನ ಅಭಿರುಚಿ ಉಳ್ಳವರು. ಇವುಗಳಲ್ಲಿ ನನ್ನಲ್ಲಿರುವ ಅಭಿರುಚಿಯನ್ನು ಕಮಲಳಲ್ಲೂ ಗುರುತಿಸಿದೆ. ಹೀಗಾಗಿ ನಾವಿಬ್ಬರೂ ದಂಪತಿಗಳಾದರೆ ಚೆನ್ನ ಎನಿಸಿತು. ಆಕೆಯ ಹತ್ತಿರ ಪ್ರಸ್ತಾಪಿಸಿದೆ. ಹೌದು ಎಂದು ಒಪ್ಪಿಕೊಂಡರು. ನಾವಿಬ್ಬರೂ ಪರಸ್ಪರ ಆಕರ್ಷಿತರಾಗಿದ್ದ ವಿಷಯ ನಮ್ಮ ಗುರುಗಳಾದ ತೀನಂಶ್ರೀ, ಡಿ.ಎಲ್.ಎನ್, ಅವರುಗಳಿಗೆಲ್ಲ ಗೊತ್ತಿತ್ತು. ಅವರೂ ನಮ್ಮನ್ನು ಪ್ರೋತ್ಸಾಹಿಸಿದರು. ನಮ್ಮ ಅಂತರ್ಜಾತಿಯ ವಿವಾಹಕ್ಕೆ ಇವರಿಬ್ಬರೂ ನಮಗೆ ಒಂದು ರೀತೀಲಿ ನೈತಿಕ ಬೆಂಬಲ ನೀಡಿದರು.

ವನಿತಾ : ನೀವು ರಿಜಿಸ್ಟರ್ ಮದುವೆಯಾಗಲು ಕಾರಣ ?

ಕಮಲಾ-ಹಂಪನಾ : ನಮ್ಮ ವಿಚಾರಗಳು ಕ್ರಾಂತಿಕಾರಕವಾಗಿದ್ದವು. ವಿಶೇಷವಾದ ವೈಭವ, ಅಟ್ಟಹಾಸ, ಆಡಂಬರಗಳು ಬೇಡ ಎಂಬ ಕಾರಣಕ್ಕಾಗಿ ಸರಳವಾಗಿ ರಿಜಿಸ್ಟರ್ ವಿವಾಹ ಮಾಡಿಕೊಂಡೆವು. ಜೊತೆಗೆ ಈ ವೈಭವ, ಆಡಂಬರಗಳಂಥ ಹೊರಗಿನ ಬಂಧನಗಳು ನಮ್ಮನ್ನು ಹೆಚ್ಚು ದಿನ ಹಿಡಿದಿರಿಸಲಾರವು. ಪರಸ್ಪರ ಅರಿವು, ಆತ್ಮದ ಒಲವು ಇದೇ ನಮ್ಮನ್ನು ಬಂಧಿಸಿಡುವುದು. ಇದಿಲ್ಲದೆ ಯಾವುದೇ ಸಂಪ್ರದಾಯವಾಗಲಿ, ವೈಭವ ವಿವಾಹವಾಗಲಿ ಊರ್ಜಿತವಾಗದು. ನಮ್ಮಲ್ಲಿ ಪರಸ್ಪರ ಅರಿವು, ಒಲವುಗಳಿರುವಾಗ ವಿವಾಹ ಯಾವರೀತಿಯದಾದರೇನು ಎಂದು ರಿಜಿಸ್ಟರ್ ಮದುವೆ ಆದೆವು.

ವನಿತಾ : ಅಂತರ್ಜಾತೀಯ ವಿವಾಹವಾದ್ದರಿಂದ ತೊಂದರೆಗಳನ್ನು ಎದುರಿಸಬೇಕಾಯಿತೆ ?

ಹಂಪನಾ : ಹೌದು. ಮನೆ ಹಾಗೂ ಆಗಿನ ಸಮಾಜದ ವಿರೋಧವನ್ನು ಎದುರಿಸ ಬೇಕಾಯಿತು. ಪರಸ್ಪರ ಧೈರ್ಯದಿಂದ, ಯಾರು ಏನು ಮಾಡಿದರೂ ನಮ್ಮನ್ನು ಅಗಲಿಸ ಲಾರರು ಎಂಬ ಆತ್ಮವಿಶ್ವಾಸದಿಂದ ಈ ವಿರೋಧವನ್ನು ಎದುರಿಸಿದೆವು. ಇದೇ ಕಾರಣ ಕ್ಕಾಗಿ ನಾನು ನನ್ನ ಪಾಲಿನ ಆಸ್ತಿಯನ್ನು ಬಿಟ್ಟುಕೊಡಬೇಕಾಯಿತು. ಬೇರೆ ಜಾತಿಯ ಹುಡುಗಿಯನ್ನು ಮದುವೆಯಾದರೆ ಆಸ್ತಿಯಲ್ಲಿ ಪಾಲು ಕೊಡಲ್ಲ ಅಂದರು. ಆಸ್ತಿ ಬೇಡ ಎಂದು ನಾನೇ ಖುದ್ದಾಗಿ ಆಸ್ತಿಯ ಮೇಲಿನ ನನ್ನ ಹಕ್ಕನ್ನು ಬಿಟ್ಟುಕೊಟ್ಟೆ.

ವನಿತಾ : ನೀವಿಬ್ಬರೂ ಪ್ರಾಧ್ಯಾಪಕರು ಹಾಗೂ ಸಾಹಿತ್ಯ ರಚನೆಯಲ್ಲಿ ಒಲವುಳ್ಳವರು ಸಾಹಿತ್ಯದಲ್ಲಿ ನಿಮ್ಮಲ್ಲಿ ಯಾರು ಯಾರಿಗೆ ಹೆಚ್ಚು ಸಹಾಯಕರಾಗಿದ್ದೀರಿ ?

ಹಂಪನಾ : ಕಮಲಾ ನನಗೆ ಹೆಚ್ಚು ಸಹಾಯಕರಾಗಿದ್ದಾರೆ. ಗೃಹಿಣಿಯಾಗಿ ಅವರು ಗೃಹಕೃತ್ಯದ ಹೊಣೆಯನ್ನು ಹೊತ್ತುಕೊಂಡು ಸಾಹಿತ್ಯ ರಚನೆ ಮತ್ತಿತರ ನನ್ನ ಸಾಹಿತ್ಯಕ ಚಟುವಟಿಕೆಗಳಲ್ಲಿ ನನಗೆ ಹೆಚ್ಚು ಸಹಾಯ ಮಾಡಿದ್ದಾರೆ. ನನ್ನಿಂದ ಕಮಲಾಗೆ ಆಕೆಯ ಸಾಹಿತ್ಯ ಚಟುವಟಿಕೆಗಳಲ್ಲಿ ಹೆಚ್ಚಿನ ಸಹಾಯವಾಗಿಲ್ಲ. ಈ ದೃಷ್ಟೀಲಿ ಒಮ್ಮೊಮ್ಮೆ ನಾನು ಆಕೇನ ಶೋಷಿಸುತ್ತಿದ್ದೇನೆಯೋ ಎಂದು ಅನಿಸುತ್ತದೆ.

ಕಮಲಾ : ನನ್ನ ಬದುಕು ಬರಹಕ್ಕೆ ನಿರಂತರ ನೀರೆರೆದು, ಗೊಬ್ಬರ ಹಾಕಿ ಪೋಷಿಸಿ ಬೆಳೆಸಿದವರು ಹಂಪನಾ ಅವರೇ. ನನ್ನ ಬದುಕಿನ ಬಹುಭಾಗ ಅಡಿಗೆಮನೆಯಲ್ಲಿ ಕಳೆದು ಹೋಗುವಾಗ ಅವರು ತುಂಬ ವ್ಯಥಿತರಾಗುತ್ತಾರೆ. ಆದರೆ ಗೃಹಿಣಿಯಾಗಿ ನಾನು ಮಾಡಲೇ ಬೇಕಾದ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ತಾಯಿಯಾಗಿ, ಪತ್ನಿಯಾಗಿ, ಗೃಹಿಣಿ ಯಾಗಿ ಯಾವುದೇ ನನ್ನ ಕರ್ತವ್ಯವನ್ನು ನಾನು ಊನಗೊಳಿಸಿದರೂ ಅಷ್ಟರಮಟ್ಟಿಗೆ ಅದ ನನ್ನ ಸೋಲು ಎಂದೇ ನಾನು ಭಾವಿಸಿದ್ದೇನೆ, ಸಾಮಾಜಿಕ ಬದುಕಿನಲ್ಲಿ ಸಂಸಾರ ಒಂದು ಪ್ರಮುಖ, ಪ್ರಬಲ ಘಟಕ. ಅದನ್ನು ನಿರ್ಲಕ್ಷಿಸಿದರೆ ಅಷ್ಟರಮಟ್ಟಿಗೆ ಅದು ನಿಷ್ಕ್ರಿಯ ಗೊಳ್ಳುತ್ತದೆ ; ರೋಗಪೀಡಿತವಾಗುತ್ತದೆ. ಆ ಲೋಪ ಸಾಧ್ಯವಾದಷ್ಟು ನನ್ನಿಂದ ಆಗದಿರಲೆಂಬ ಎಚ್ಚರಿಕೆಯಿಂದ ನಾನು ಸಂಸಾರ ಸಾಗಿಸುತ್ತಾ ಬಂದಿದ್ದೇನೆ. ನನಗೆ ಸಾಹಿತ್ಯ ಬೋಧನೆಯಷ್ಟೇ ಗಂಡ ಮಕ್ಕಳಿಗೆ ಅಡಿಗೆ ಮಾಡಿ ಬಡಿಸುವುದರಲ್ಲೂ ತೃಪ್ತಿ ಇದೆ.

ವನಿತಾ : ನಿಮ್ಮಿಬ್ಬರಲ್ಲಿ ಯಾರು ಯಾರಿಂದ ಹೆಚ್ಚು ಪ್ರಭಾವಿತರಾಗಿದ್ದೀರಿ ?

ಕಮಲಾ : ಪ್ರಭಾವದ ಮಾತು ಬಂದಾಗ ಇಬ್ಬರಿಗೂ ಹೆಚ್ಚು ಪ್ರಭಾವ, ಪ್ರೋತ್ಸಾಹ ದೊರೆತದ್ದು ನಮ್ಮ ಗುರುಗಳಿಂದ. ತೀ. ನಂ. ಶ್ರೀ, ಡಿ. ಎಲ್. ಎನ್., ಕುವೆಂಪು, ಡಾ॥ ಆ. ನೇ. ಉಪಾಧ್ಯಾಯ ಇವರುಗಳ ಪ್ರಭಾವ, ಪ್ರೋತ್ಸಾಹ ನಮ್ಮ ಮೇಲೆ ಗಾಢವಾಗಿದೆ. ಇಬ್ಬರು ಗುರುಗಳನ್ನು ನಾವು ಜೀವನದುದ್ದಕ್ಕೂ ಜ್ಞಾಪಿಸಿಕೊಳ್ಳುತ್ತೇವೆ. ಡಿ, ಎಲ್. ಎನ್ ಮತ್ತು ತೀನಂಶ್ರೀ ನಮಗೆ ಬರೀಪಾಠ ಹೇಳಲಿಲ್ಲ. ಬದುಕುವ ದಾರಿ ತೋರಿಸಿಕೊಟ್ಟರು.

ಹಂಪನಾ : ಕಮಲಳ ಮಾತನ್ನು ನಾನು ಒಪ್ಪುತ್ತೇನೆ. ಸಾಹಿತ್ಯ ರಚನೆಯಲ್ಲಿ ನಮ್ಮಿಬ್ಬರಲ್ಲಿ ಪರಸ್ಪರ ಸಹಾಯವಿದ್ದರೂ ಒಳಗಿನ ಪ್ರಚೋದನೆ, ಪ್ರಭಾವಗಳೆಲ್ಲ ತೀನಂಶ್ರೀ ಮೊದಲಾದವರದು. ಅದರಲ್ಲೂ 'ದ್ರಾವಿಡ ಭಾಷಾ ವಿಜ್ಞಾನ' ಗ್ರಂಥರಚನೆಗೆ ಅವರಿಂದ ದೊರೆತ ಪ್ರಚೋದನೆ, ಪ್ರೋತ್ಸಾಹ ಅಗಾಧವಾದದ್ದು.

ವನಿತಾ : ನಿಮ್ಮಿಬ್ಬರ ಒಲವೂ ಸೃಜನಶೀಲ ಸಾಹಿತ್ಯಕ್ಕಿಂತ ಗ್ರಂಥ ಸಂಪಾದನೆ ಹಾಗೂ ಸಂಶೋಧನೆಯತ್ತ ಹೆಚ್ಚಾಗಿದೆ. ಇದಕ್ಕೆ ಕಾರಣ ?

ಕಮಲಾ : ಮೊದಲ ಕೆಲಸವೇ ಗ್ರಂಥ ಸಂಪಾದನೆ. ಸುಕುಮಾರ ಚರಿತ್ರೆ ಮೊದಲ ಗ್ರಂಥ ನಂತರ ಕಥಾ ಸಾಹಿತ್ಯದಲ್ಲೂ ಸೃಜನಶೀಲ ಕೆಲಸ ಮಾಡಿದ್ದೇನೆ. ಮೂರು ಕಥಾ ಸಂಕಲನಗಳು ಪ್ರಕಟವಾಗಿವೆ. ಇತ್ತೀಚೆಗೆ ನನ್ನ ವಚನಗಳ ಸಂಕಲನ 'ಬಿಂದಲಿ' ಪ್ರಕಟವಾಗಿದೆ.

ಹಂಪನಾ : ನಾನು ಗ್ರಂಥ ಸಂಪಾದನೆ, ಸಂಶೋಧನೆ ಜೊತೆಗೆ ಒಂದು ಕಾದಂಬರಿ, ಲಲಿತ ಪ್ರಬಂಧಗಳನ್ನೂ ಬರೆದಿದ್ದೇನೆ. ಸಂಶೋಧನೆಯತ್ತ ಒಲವು ಹೆಚ್ಚಲು ಡಿ, ಎಲ್. ಎನ್ ಮತ್ತು ಡಾ॥ ಆ. ನೇ. ಉಪಾಧ್ಯಾಯ ಅವರ ಪ್ರಭಾವ ಕಾರಣ ಎನ್ನಬಹುದು. ಸಂಶೋಧನೆ ಮಾಡಬೇಕು. ಅದನ್ನು ಲಘುವಾಗಿ ಕಾಣಬಾರದು ಎಂದು ಡಿ. ಎಲ್. ಎನ್. ವಿದ್ಯಾರ್ಥಿಯಾಗಿದ್ದಾಗಲೇ ನನಗೆ ಹೇಳುತ್ತಿದ್ದರು. ಗುರುಗಳ ಈ ಮಾತು ಹೃದಯದಲ್ಲಿ ದಾಖಲಾಗಿದ್ದುದರಿಂದ ಸಂಶೋಧನೆ, ಗ್ರಂಥ ಸಂಪಾದನೆಯತ್ತ ನನ್ನ ಒಲವು ಹೆಚ್ಚಾಯಿತು.

ವನಿತಾ : ಕಮಲಾ ಅವರೆ, ಅಧ್ಯಾಪನ, ಬರಹ ಮನೆಗೆಲಸ ಇವೆಲ್ಲವನ್ನೂ ಒಟ್ಟಿಗೆ ಹೇಗೆ ನಿಭಾಯಿಸುತ್ತೀರಿ ?

ಕಮಲಾ : ನನ್ನ ನಂಬಿಕೆ ಎಂದರೆ ಹತ್ತು ಕೆಲಸ ಮಾಡುವವರು ಹನ್ನೊಂದನೆಯ ಕೆಲಸವನ್ನೂ ಮಾಡಬಲ್ಲರು, ಮಾಡುತ್ತಾರೆ. ಮಾಡಲಾಗದವರು, ಮಾಡದೇ ಇರೋರು ಏನೂ ಮಾಡಲ್ಲ ಅಥವಾ ಮಾಡಿದ ಒಂದು ಕೆಲಸವನ್ನೇ ದೊಡ್ಡದಾಗಿ ಹೇಳಿಕೋತಾರೆ, ನಾನು ಮನೆಗೆಲಸ. ಬರವಣಿಗೆ, ಪಾಠದ ಸಿದ್ಧತೆ ಹೀಗೆ ಇವುಗಳಿಗೆ ಸಮಯವನ್ನು ವಿಂಗಡಿಸಿ ಕೊಳ್ಳುತ್ತೇನೆ. ರಾತ್ರಿ ಎಷ್ಟು ಹೊತ್ತಾದರೂ ಮರುದಿನದ ಪಾಠದ ಸಿದ್ಧತೆ ಮಾಡಿಕೊಳ್ಳದೆ ಮಲಗಲ್ಲ. ಸಿದ್ಧತೆ ಮಾಡಿಕೊಳ್ಳದೆ ಕ್ಲಾಸ್‌ರೂಮಿನೊಳಗೆ ಕಾಲಿಡಬೇಡ ಎಂದು ಗುರುಗಳು ಹೇಳಿದ್ದನ್ನು ನಾನು ಇಂದಿಗೂ ಮರೆತಿಲ್ಲ.

ವನಿತಾ : ಇವರಿಂದ ದಣಿವಾಗುವುದಿಲ್ಲವೆ ?

ಕಮಲಾ : ಇಲ್ಲ. ಪಾಠ ಹೇಳೋದು, ಮನೆಗೆಲಸ, ಸಾಹಿತ್ಯ ರಚನೆ, ಓದುವುದು ಹೀಗೆ ಒಂದು ಕೆಲಸದ ನಂತರ ಇನ್ನೊಂದು ಕೆಲಸದಲ್ಲಿ ತೊಡಗುವುದರಲ್ಲೇ ನನಗೆ ಒಂದು ರೀತಿಯ ನೆಮ್ಮದಿ ಸಿಗುತ್ತೆ. ಈ ಒಂದು ಕೆಲಸದ ನಂತರ ಇನ್ನೊಂದರಲ್ಲಿ ತೊಡಗುವುದರಲ್ಲಿನ ಬದಲಾವಣೆಯೇ ನನಗೆ ವಿಶ್ರಾಂತಿ.

ವನಿತಾ : ಇತ್ತೀಚಿನ ದಿನಗಳಲ್ಲಿ ದುಡಿಯುವ ದಂಪತಿಗಳಲ್ಲಿ ವಿರಸವೇ ಹೆಚ್ಚಾಗಿ ಕಾಣುತ್ತೆ? ಇಂಥವರಿಗೆ ನೀವು ಹೇಳುವುದು ಏನಾದರೂ ಇದೆಯಾ ?

ಕಮಲಾ : ಗೃಹಿಣಿಯಾಗಿ, ತಾಯಿಯಾಗಿ, ಉದ್ಯೋಗಸ್ಥೆಯಾಗಿ ನಿರ್ವಹಿಸುವುದು ಕಷ್ಟ. ಮೊದಲಿಗೆ ತಾನು ಮಾಡುವ ಕೆಲಸದ ಬಗ್ಗೆ ಒಲವು, ಪ್ರಾಮಾಣಿಕತೆ ಗಂಡ-ಹೆಂಡತಿ ಇಬ್ಬರಿಗೂ ಇರಬೇಕು. ಪರಸ್ಪರ ಹೊಂದಾಣಿಕೆ, ತ್ಯಾಗ ಮನೋಭಾವ ಬೇಕು. ಇದು ಒಬ್ಬರಿಂದಲೇ ಅಲ್ಲ. ಗಂಡ-ಹೆಂಡತಿ ಇಬ್ಬರಿಂದಲೂ ಈ ಹೊಂದಾಣಿಕೆ, ತ್ಯಾಗ ಇದ್ದಲ್ಲಿ ಬಾಂಧವ್ಯ ಮಧುರವಾಗುತ್ತದೆ. ದುಡಿಯುವ ದಂಪತಿಗಳು ಇದನ್ನು ಅರಿತುಕೊಳ್ಳಬೇಕು.

ಹಂಪನಾ : ಅದರಲ್ಲೂ ಅಂತರ್ಜಾತಿಯ ವಿವಾಹವಾದವರ ಹೊಣೆ ಹೆಚ್ಚು. ಪರಸ್ಪರ ಅಂತರ್ಜಾತಿಯ ವಿವಾಹದ ಯಶಸ್ಸನ್ನು ತೋರಿಸಿಕೊಳ್ಳಬೇಕು.

ವನಿತಾ : ನಿಮ್ಮಿಬ್ಬರಲ್ಲಿ ವೈಚಾರಿಕ ಭಿನ್ನಾಭಿಪ್ರಾಯಗಳಿಲ್ಲವೆ ?

ಹಂಪನಾ : ಭಿನ್ನಾಭಿಪ್ರಾಯ ಬರುತ್ತೆ. ಯಾವುದೋ ಒಂದು ಸಾಹಿತ್ಯ ಕೃತಿಯೋ ಅಥವಾ ಚಿತ್ರವೋ ಅದಕ್ಕೆ ಸಂಬಂಧಿಸಿದಂತೆ ಕಮಲಾ ನನ್ನ ನಿಲುವನ್ನು ವಿರೋಧಿಸುವುದುಂಟು ನಾನು ಅವರ ನಿಲುವನ್ನು ವಿರೋಧಿಸುವುದೂ ಉಂಟು. ಬಿಸಿ ಬಿಸಿ ಚರ್ಚೆಯಾಗುವುದೂ ಉಂಟು. ಆದರೆ ಇದು ನಮ್ಮಿಬ್ಬರ ಮಧ್ಯೆ ವಿರಸಕ್ಕೆ ಕಾರಣವಾಗುವುದಿಲ್ಲ. ಭಿನ್ನಾಭಿಪ್ರಾಯ ಇಟ್ಟುಕೊಂಡು ಪ್ರೀತಿಯಿಂದ ಬದುಕುವುದು ಸಾಧ್ಯ ಎಂಬುದು ನಮ್ಮಿಬ್ಬರ ನಂಬಿಕೆ.

ವನಿತಾ : ಹಂಪನಾ, ನಿಮ್ಮ ಶ್ರೀಮತಿಗೆ ಇತ್ತೀಚೆಗೆ ಸನ್ಮಾನವಾಯಿತು. ಈಗ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ನಿಮಗೇನನ್ನಿಸುತ್ತೆ ?

ಹಂಪನಾ : ನನಗೆ ಹೊಟ್ಟೆ ಕಿಚ್ಚು, ನನ್ನ ಹೆಂಡತಿಗೆ ನನಗಿಂತ ಮುಂಚೆ ಪ್ರಶಸ್ತಿ ಬಂತಲ್ಲ ಅಂತ. ಆದರೆ ಇದು ಕೇವಲ ತಮಾಷೆಯ ಮಾತು, ನನಗೆ ಸಂತೋಷವಾಗಿದೆ. ಆಕೆ ಈ ಪ್ರಶಸ್ತಿಗೆ, ಸನ್ಮಾನಕ್ಕೆ ಅರ್ಹಳು. ಆಕೆ ಸದ್ದುಗದ್ದಲವಿಲ್ಲದೆ ಮಾಡುತ್ತಿರುವ ಕೆಲಸ ವನ್ನು ಜನ ಗುರುತಿಸಿದರಲ್ಲ. ನಿಜವಾಗಿ ಪ್ರೀತಿಸುವ ಗಂಡನಿಗೆ ಇದಕ್ಕಿಂತ ಹೆಚ್ಚಿನ ಸಂತೋಷ ಯಾವುದಿದೆ ಹೇಳಿ ?

ವನಿತಾ : ಕಮಲಾ ನಿಮಗೇನನ್ನಿಸುತ್ತೆ ?

ಕಮಲಾ : ಸಹಜವಾಗಿಯೇ ಸಂತೋಷವಾಗಿದೆ. ಜೊತೆಗೆ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ಸೃಜನಶೀಲ ಕೃತಿಗಳನ್ನು ಗುರುತಿಸುವುದೇ ಹೆಚ್ಚು. ಇಂಥಾದ್ದರಲ್ಲಿ ಅಕಾಡೆಮಿ ನನ್ನ ಸಂಶೋಧನಾ ಕೆಲಸವನ್ನು ಗುರುತಿಸಿರುವುದು ನನಗೆ ಸಂತೋಷ ಕೊಟ್ಟಿದೆ. ಕಾದಂಬರಿ

ಬರೀದೆ ಸಂಶೋಧನೆಗೆ ಪ್ರಶಸ್ತಿ ತಗೊಂಡಿದೀನಿ ಅನ್ನೋ ಹೆಮ್ಮೆ ನನಗೆ. ಅಂದರೆ ಕಥೆ, ಕಾದಂಬರೀನ ಕೀಳಾಗಿ ಕಾಣ್ತಿದೀನಿ ಅಂತ ಅರ್ಥ ಅಲ್ಲ. ಜವಾಬ್ದಾರಿ ಹೆಚ್ಚಿದೆ. ಜನ ನನ್ನಿಂದ ಇನ್ನೂ ಉತ್ತಮವಾದುದನ್ನು ನಿರೀಕ್ಷಿಸುತ್ತಾರೆ.

ಸಂದರ್ಶನ ಈ ಹಂತಕ್ಕೆ ಬರುವ ವೇಳೆಗೆ ಸಂಜೆ ಕಳೆದು ರಾತ್ರಿ ಕಾಲಿಡುತ್ತಿತ್ತು. ಹಂಪನಾಗೆ ಫೋನ್‌ನಲ್ಲಿ ಕರೆ ಬಂತು. ನಾವೂ ಎದ್ದೆವು.

ಹಂಪನಾ ದಂಪತಿಗಳ ಆದರ್ಶ ದಾಂಪತ್ಯ ಮತ್ತು ಕುಟುಂಬದ ಚಿತ್ರ ಇಲ್ಲಿಗೆ ಪೂರ್ತಿಯಾಗುವುದಿಲ್ಲ. ಹಂಪನಾ ದಂಪತಿಗಳಿಗೆ ಮೂವರು ಮಕ್ಕಳು. ಮಗ ಹರ್ಷವರ್ಧನ ವಾಸ್ತುಶಿಲ್ಪದ ವಿದ್ಯಾರ್ಥಿ. ರಾಜಶ್ರೀ, ಆರತಿ ಮುದ್ದಿನ ಕುವರಿಯರು. ಇಬ್ಬರಿಗೂ ನೃತ್ಯದಲ್ಲಿ ಆಸಕ್ತಿ. ಆರತಿಗೆ ಕಾವ್ಯದಲ್ಲಿ ಕೃಷಿ ಮಾಡುವ ಹಂಬಲ. ಒಂದು ಕವನ ಸಂಕಲನ ಪ್ರಕಟಣೆಗೆ ಸಿದ್ಧವಾಗಿದೆ.

ದಲಿತರ ದಮನದ ವಿರುದ್ಧ ಲೇಖಕರು ಧ್ವನಿ ಎತ್ತಬೇಕು*

ಕಮಲಾ ಹಂಪನಾ

ಸಮಕಾಲೀನ ಸಾಹಿತ್ಯವನ್ನು ಕೇಂದ್ರ ಪ್ರಜ್ಞೆಯಾಗಿಸಿಕೊಂಡು ವಿವೇಚಿಸುವ ವಿಶಿಷ್ಟ ಸಂದರ್ಭವೊಂದರಲ್ಲಿ ನಾವಿಲ್ಲಿ ಸಮಾವೇಶಗೊಂಡಿದ್ದೇವೆ. ನಮ್ಮ ಸಮಕಾಲೀನ ಸಾಹಿತ್ಯದ ಸಂದರ್ಭದಲ್ಲಿ ಚಲನೆಗೊಂಡು ತುಂಬ ಕ್ರಿಯಾಶೀಲವಾಗಿರುವ ಸಾಹಿತ್ಯಕ ಪ್ರವೃತ್ತಿಗಳಾದ ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯವನ್ನು ಕುರಿತು ನಾನು ಸಾಕಷ್ಟು ಬರೆದಿದ್ದೇನೆ. ಈಗಾಗಲೇ ಪ್ರಕಟವಾಗಿರುವ ಚಿಕ್ಕಮಗಳೂರು ಮತ್ತು ಶಿರಸಿಯಲ್ಲಿ ನಡೆದ ಅಖಿಲ ಭಾರತ ೫೩ ಮತ್ತು ೫೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಣದಲ್ಲೂ ಕನಕಪುರದಲ್ಲಿ ನಡೆದ ಸಾಹಿತ್ಯ ಗೋಷ್ಠಿಯಲ್ಲೂ ಮಾಡಿದ ಭಾಷಣಗಳಲ್ಲಿ ದಲಿತ ಮತ್ತು ಬಂಡಾಯ ಸಾಹಿತ್ಯ ಪ್ರಸ್ತಾಪ ಮಾಡಿ ವಿವೇಚಿಸಿದ್ದೇನೆ. ಈ ಮೂರೂ ಲೇಖನಗಳು 'ಬಾಸಿಂಗ' ಪುಸ್ತಕದಲ್ಲಿ ಅಚ್ಚಾಗಿವೆ. ಈಗ ಅದಕ್ಕೆ ಪೂರಕವಾದ ಇತರ ಸಾಮಾಜಿಕ ವಿಶ್ಲೇಷಣೆಯನ್ನು ಇಂದಿನ ಉಪನ್ಯಾಸದಲ್ಲಿ ನಡೆಸಲು. ಪ್ರಯತ್ನಿಸಿದ್ದೇನೆ.

ಸಾಮಾಜಿಕ–ಸಾಂಸ್ಕೃತಿಕ ಸಂದರ್ಭದಲ್ಲಿಯೇ ಸಾಹಿತ್ಯ ಪ್ರಸ್ತುತವಾಗುವುದು. ಸ್ವಾತಂತ್ರ್ಯ ಬಂದ ಮೇಲೆ ಭಾರತದಲ್ಲಿ ಅದ್ಭುತ ಪ್ರಗತಿಯಾಗಿದೆ. ಬೇಕಾದಷ್ಟು ಹೊಸ ಕೆಲಸಗಳಾಗಿವೆ. ಹಳ್ಳಿಹಳ್ಳಿಗೂ ರಸ್ತೆಗಳಾಗಿವೆ, ದೀಪ ಬಂದಿದೆ, ವಾಹನಗಳ ಸಂಚಾರ ಏರ್ಪಟ್ಟಿದೆ, ಸೇತುವೆಗಳಾಗಿವೆ, ಶಾಲೆ-ಕಾಲೇಜು, ಆಸ್ಪತ್ರೆ, ಅಂಚೆಮನೆ, ಪೋಲೀಸ್ ಠಾಣೆ ಏರ್ಪಾಟಾಗಿವೆ. ನೀರಿನ ಅನುಕೂಲ ಒದಗಿಬಂದಿದೆ. ಇಷ್ಟೆಲ್ಲಾ ಕೇವಲ ನಾಲ್ಕು ದಶಕಗಳಲ್ಲಿ ಆಗಿರುವ ಕೆಲಸ. ನಿಜ, ಇನ್ನೂ ಆಗಬೇಕಾದದ್ದು ನೂರಾರಿವೆ ; ಈಗ ಆಗಿರುವ ಹಾಲಿ ಕೆಲಸ ಕೂಡ

*೧೯೮೫ ಆಕ್ಟೋಬರ್ ೨೭ರಂದು ಕಮಲಾ ಹಂಪನಾ ಅಭಿನಂದನ ಸಮಿತಿಯವರು ಏರ್ಪಡಿಸಿದ್ದ 'ಸಮಕಾಲೀನ ಸಾಹಿತ್ಯ' ಒಂದು ದಿನದ ಸಾಹಿತ್ಯ ಸಮ್ಮೇಳನದಲ್ಲಿ ಕಮಲಾ ಹಂಪನಾ ಅವರು ಮಾಡಿದ ಅಧ್ಯಕ್ಷ ಭಾಷಣ

ಮತ್ತಷ್ಟು ಸಮರ್ಪಕವಾಗಿ ಸಾಧ್ಯವಾಗಬಹುದಿತ್ತು. ಅವೆಲ್ಲಾ ಕ್ರಮೇಣ ಆಗುತ್ತವೆ ಸರಿಹೋಗುತ್ತವೆಂಬ ಭರವಸೆಯಿದೆ. ಆದರೆ ದಲಿತರ ಮೇಲಿನ ದಬ್ಬಾಳಿಕೆ ಮಾತ್ರ ಘೋರತರವಾಗಿ ಮುಂದುವರಿದಿದೆ. ಶೂದ್ರ ದಲಿತರ ಶೋಷಣೆ ಕುರಿತು ಪ್ರಸ್ತಾಪಿಸುವ ಮೊದಲು, ನಮ್ಮ ಗಡಿ ಸಮಸ್ಯೆ ಬಗ್ಗೆ ಎರಡು ಮಾತು ಹೇಳಬಯಸಿದ್ದೇನೆ.

ಸ್ವಾತಂತ್ರ್ಯವೆಂಬುದು ನಿರಂತರವಾದ ಆಶಯ, ಆ ನಂದಾದೀವಿಗೆ ಉರಿಯುತ್ತಲೇ ಇರಬೇಕು. ಅದು ಎಲ್ಲ ಎಚ್ಚೆತ್ತ ಮನುಷ್ಯನ ಮೂಲಭೂತಾಕಾಂಕ್ಷೆ, ಸ್ವಾತಂತ್ರ್ಯ ಪರಿಕಲ್ಪನೆಗಳು ಜಾಗೃತವಾಗಿದ್ದುದನ್ನು ಕನ್ನಡ ಸಾಹಿತ್ಯದ ಉದ್ದಕ್ಕೂ ಕಾಣಬಹುದು. ಪಂಪನಿಂದ ಕುವೆಂಪುವರೆಗೆ ಇದನ್ನು ಮನಗಾಣುವುದು ಸಾಧ್ಯವಿದೆ. ಸ್ವಾತಂತ್ರ್ಯವನ್ನು, ಕೇವಲ ರಾಜಕೀಯವಾಗಿ ನೋಡದೆ, ಅದೊಂದು ಸಾಂಸ್ಕೃತಿಕ ಕಲ್ಪನೆಯೆಂದೂ ತಿಳಿಯ ಬೇಕು, ದಾಸ್ಯ ವಿಮೋಚನೆಯ ಅಭೀಪ್ಸೆ ಪ್ರಜ್ವಲಿತವಾಗಿಡುವಲ್ಲಿ ಲೇಖಕರ ಪ್ರಯತ್ನ ಗಣನೀಯವಾದುದು. ಸಾಹಿತಿಗಳು ಸ್ವಾತಂತ್ರ್ಯವೇ ಕೇಂದ್ರ ಪ್ರಜ್ಞೆಯಾಗಿ ಕೆಲಸ ಮಾಡಿ ರುವ ಅನೇಕ ಕೃತಿಗಳನ್ನು, ಕವಿತೆಗಳನ್ನು ರಚಿಸಿದ್ದಾರೆ. ಗುಲಾಮಗಿರಿಯನ್ನು ಖಂಡಿಸಿ, ಸ್ವಾತಂತ್ರ್ಯದಾಹ ಹೆಚ್ಚಿಸಿ, ದಾಸ್ಯ ವಿಮೋಚನೆಗೆ ಹುರಿದುಂಬಿಸಿ ಚೈತನ್ಯ ತುಂಬಿದ ಲೇಖಕರ ಹೊಣೆ ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿ ಸ್ವಲ್ಪ ಬದಲಾಗಿದೆ.

ಸಮಕಾಲೀನ ಸಮಾಜ ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸಲು ಜನಜಾಗೃತಿ ಉಂಟುಮಾಡುವಲ್ಲಿ ಸಾಹಿತಿಗಳು ಪ್ರಧಾನ ಪಾತ್ರ ವಹಿಸಬೇಕಾಗಿದೆ. ಬ್ರಿಟಿಷರ ದಬ್ಬಾ ಳಿಕೆಯನ್ನು ವಿರೋಧಿಸಿದ ದಿನಗಳು ಮುಗಿದುವು. ಇಂಗ್ಲಿಷನ್ನು ನಿರಾಕರಿಸಿ ಕನ್ನಡವನ್ನು ಬೆಂಬಲಿಸಿ ಕ್ರಾಂತಿಗೀತೆಗಳನ್ನು ಬರೆದು ಪಾಂಚಜನ್ಯ ಮೊಳಗಿಸಿದ್ದೂ ಆಯಿತು. ಇಂದು ಜನ ಬೌದ್ಧಿಕ ದಾಸ್ಯದಿಂದ ಬಿಡುಗಡೆ ಪಡೆದು ವಿಚಾರವಂತರಾಗಿ ಹೊಸಕಾಲದ ಪ್ರಸ್ತು ತತೆಗೆ ಸ್ಪಂದಿಸುವಂತೆ ಸಾಹಿತಿಗಳು ಕರೆಕೊಡಬೇಕಾಗಿದೆ.

ಕಾಸರಗೋಡು ಮತ್ತು ಬೆಳಗಾವಿ–ಕಾರವಾರ ಸಮಸ್ಯೆ ಕನ್ನಡ ಭಾಷೆ ಸಾಹಿತ್ಯಕ್ಕೂ ದೊಡ್ಡ ಅಪಾಯದ ಕರೆಗಂಟೆಯನ್ನು ಬಾರಿಸುತ್ತಿದೆ. ಅಲ್ಲಿ ಅಶಾಂತಿ ನಿರ್ಮಾಣಗೊಂಡ ಸಂದರ್ಭ ಗಳಲ್ಲಿ ಆಸ್ತಿಪಾಸ್ತಿ ನಿರ್ನಾಮವಾಗುತ್ತಿರುತ್ತದೆ. ದ್ವಿಭಾಷಾ ಪ್ರದೇಶಗಳಲ್ಲಿ ಗಡಿ ರೇಖೆ ಎಳೆಯುವುದು ಕಡುಕಷ್ಟ. ಭಾಷಾವಾರು ಪ್ರಾಂತ್ಯರಚನೆಯಾದ ಮೇಲೂ 'ಮಹಾಜನ ಆಯೋಗ'ವನ್ನು ನೇಮಿಸಲಾಯಿತು. ಅದು ಕರ್ನಾಟಕದ ಒಪ್ಪಿಗೆ ಇಲ್ಲವೇ ಬೇಡಿಕೆಯಿಂದ ನೇಮಕವಾದ ಆಯೋಗವಲ್ಲ. ಮಹಾರಾಷ್ಟ್ರದ ಒತ್ತಾಯಕ್ಕೆ ಮಣಿದು ಅಸ್ತಿತ್ವಕ್ಕೆ ಬಂದ ಸಮಿತಿ. ಆ ಆಯೋಗ ಕೊಟ್ಟ ತೀರ್ಪಿಗೆ ಕರ್ನಾಟಕ ವಿಧಾನಸಭೆ ಅಸ್ತು ಎಂದಿದೆ. ಲೋಕಸಭೆಯ ಮೇಜಿನ ಮೇಲೆ ೧೫ ವರ್ಷಗಳ ಹಿಂದೆಯೇ ಈ ವರದಿಯನ್ನು ಮಂಡಿಸ ಲಾಯಿತಷ್ಟೆ : 'ಇದನ್ನು ಈ ಸಭೆಯೂ ಒಪ್ಪಿದೆ' ಎಂದು ಒಂದು ಸಾಲನ್ನು ಅಂದು ಸೇರಿಸಿ ದ್ದರೆ ಸಾಕಿತ್ತು, ಎಂದೋ ಈ ಸಮಸ್ಯೆಗೆ ತೆರೆ ಬೀಳುತ್ತಿತ್ತು.

ಈ ಸಮಸ್ಯೆಗೆ ಭಾಷಾ ಮುಖವೊಂದೇ ಇಲ್ಲದೆ ಆರ್ಥಿಕ ಸಾಮಾಜಿಕ ಔದ್ಯೋಗಿಕ ಪ್ರತಿಷ್ಠೆಯ ಮುಖಗಳೂ ಇವೆ. ಅದರಿಂದ ಗಡಿಯಲ್ಲಿ ಸಾಂಸ್ಕೃತಿಕ ಚಟುವಟಿಕೆ ಜೀವಂತವಾಗಿರಬೇಕು. ಇದುವರೆಗೆ ಆದ ಆಯೋಗ ಮತ್ತು ವರದಿಗಳು ಎಷ್ಟೊಂದು ! ದೂರಾಲೋಚನೆಯ ದೊಡ್ಡ ನಾಯಕರೆಲ್ಲ ಬೆಳಗಾವಿ–ಕಾಸರಗೋಡು ಕರ್ನಾಟಕದೆಂದು ಸಾರಿದ್ದಾರೆ. ಗಾಂಧಿ, ನೆಹರು, ರಾಜೇಂದ್ರ ಪ್ರಸಾದ್, ಮೊರಾರ್ಜಿ, ಲೋಕಮಾನ್ಯ ತಿಲಕರೇ ಆದಿಯಾಗಿ

ಹಲವರು ಇದನ್ನು ಸ್ಪಷ್ಟಪಡಿಸಿದ್ದಾರೆ. ದುರಾಲೋಚನೆಯ ದಪ್ಪ ನಾಯಕರು ಮಾತ್ರ ಪದೇ ಪದೇ ಇದನ್ನು ಕೆದಕಿ ಕೆದಕಿ ಕಾಲು ಕೆರೆದು ಮೇಲೆ ಬೀಳುತ್ತಿದ್ದಾರೆ. ಕರ್ನಾಟಕ ಮೊದಲಿಂದಲೂ ಔದಾರ್ಯದ ಉರುಳಲ್ಲಿ ನರಳುತ್ತಾ ಬಂದಿದೆ. ನಾವು ನಮ್ಮ ಹಕ್ಕು ಸ್ಥಾಪಿಸಿಕೊಂಡು ಹೊರಗಿನ ಜನರನ್ನು ಹತ್ತಿಕ್ಕಬೇಕು. ಸರಕಾರಿ ಅಧಿಕಾರಿಗಳನ್ನು ಕಳಿಸುವುದರಿಂದ ಆಯೋಗ ರಚಿಸುವುದರಿಂದ, ಶಾಸಕರ ನಿಯೋಗಗಳು ಹೋಗಿ ಬರುವುದರಿಂದ ಯಾವ ಪ್ರಯೋಜನವೂ ಸಿಗದು. ಕನ್ನಡ ಜನತೆ ಮತ್ತು ಕರ್ನಾಟಕ ಸರಕಾರ ಬಿಗಿ ನಿಲುವು ತಳೆಯಬೇಕು. ಇದನ್ನು ಮತ್ತೆ ಚರ್ಚೆಗೆ ತೆರೆಯಕೂಡದೆಂದು ಕೇಂದ್ರದ ಮೇಲೆ ಒತ್ತಡ ತರಬೇಕು. ಬೆಳಗಾವಿ ಕನ್ನಡಿಗರ, ಕನ್ನಡ ಶಾಲೆ–ಆಸ್ತಿಗಳ ಮೇಲೆ ನಡೆಯುವ ದಾಳಿಗಳನ್ನು ನಾವು ಉಗ್ರವಾಗಿ ಸಂಘಟಿತರಾಗಿ ಎದುರಿಸಿ ಖಂಡಿಸಬೇಕು. ಸಮಕಾಲೀನವಾದ ಈ ಸಮಸ್ಯೆ ಸಾಹಿತ್ಯಕ್ಕೂ ಸೇರಿದ್ದೆಂಬ ಎಚ್ಚರ ಇರಬೇಕು.

ದಲಿತ ಸಾಹಿತ್ಯದ ಧ್ವನಿ ತರಂಗಗಳು ಇಂದು ಪೃಥ್ವಿಯನ್ನು ಸುತ್ತಿಕೊಂಡಿವೆ. ಭೂಗೋಳದಲ್ಲಿ ಎಲ್ಲೆಲ್ಲಿ ದಲಿತರನ್ನು ದಮನಿಸಲು ದಬ್ಬಾಳಿಕೆಯಾಗುತ್ತಿದೆಯೊ ಅಲ್ಲೆಲ್ಲಾ ಪ್ರತಿಭಟನೆಯ ಕೂಗು ಕೇಳಿ ಬರುತ್ತಿದೆ. ದಕ್ಷಿಣ ಆಫ್ರಿಕಾದಿಂದ ಹಿಡಿದು ದಕ್ಷಿಣ ಭಾರತದವರೆಗೆ ದಲಿತರ ಮೇಲೆ ದಾಳಿ ನಿಂತಿಲ್ಲ. ಶತಮಾನಗಳಿಂದ ನಿರಂತರವಾಗಿ ಶೂದ್ರ ದಲಿತರ ಮೇಲೆ ನಡೆಯುತ್ತಿರುವ ಶೋಷಣೆಗೆ ಪೂರ್ಣವಿರಾಮ ಹೇಳಲೇಬೇಕಾದ ಅಗತ್ಯವನ್ನು ಸಮಕಾಲೀನ ಸಾಹಿತ್ಯ ಮನಗಾಣಿಸಬೇಕಾಗಿದೆ.

ಹಿಡಿಯಷ್ಟು ಇರುವ ಬಿಳಿಯ ಜನ ದಕ್ಷಿಣ ಆಫ್ರಿಕಾದಲ್ಲಿ ನಿರ್ದಯಿಗಳಾಗಿ ಪಾಲಿಸುತ್ತಿರುವ, ಶ್ವೇತವರ್ಣೀಯರ ಪರವಾದ, ಜನ ವಿರೋಧಿ ಆಡಳಿತವನ್ನು ಜನಪರವಾದ ಚಿಂತೆಗಳನ್ನು ಮಾಡುವ ಸಾಹಿತಿಗಳು ಕಟುತರವಾಗಿ ಅಲ್ಲಗಳೆಯಬೇಕು. ಅಲ್ಲಿನ ಬಹುಸಂಖ್ಯಾತ ಮಣ್ಣಿನ ಮಕ್ಕಳ ಕಣ್ಣಿಗೆ ಆಸಿಡ್ದು ಹಾಕುವ ಕ್ರೂರತಮ ವರ್ಣಭೇದ ನೀತಿಯನ್ನು ತಕ್ಷಣವೇ ನಿಲ್ಲಿಸಲು ಪ್ರಯತ್ನಶೀಲರಾದ ನಾಯಕರನ್ನು ಬೇಷರತ್ ಬೆಂಬಲಿಸಬೇಕು. ಕಳೆದ ಎರಡು ತಿಂಗಳಲ್ಲಿ ಏಳುನೂರು ಕಪ್ಪು ಜನರ ಕೆಂಪು ನೆತ್ತರು ಬೀದಿಗಳಲ್ಲಿ ಹರಿದಿದೆ. ಕಳೆದ ವಾರವಷ್ಟೇ ಅಲ್ಲಿನ ತರುಣ ಕಪ್ಪು ಕವಿ ರಾಷ್ಟ್ರೀಯವಾದಿ ಬೆಂಜಮಿನ್ ಮೊಲಾಯಿಸನ್ನು ಗಲ್ಲಿಗೇರಿಸಿ ತಮ್ಮ ನೀಚ ಬರ್ಬರ ಒಣಗಿದೆದೆಗಳನ್ನು ಲೋಕಕ್ಕೆ ತೋರಿಸಿದ್ದಾರೆ. ನೇಣುಗಂಬವೇರುವ ಮಗನನ್ನು ಕಡೆಯಬಾರಿಗೊಮ್ಮೆ ಕಾಣಲು ಹಡೆದ ತಾಯಿಯನ್ನೂ ಬಿಡಲಿಲ್ಲ. ಕೊನೆಗೆ ಮಗನ ಕಳೇಬರವನ್ನೂ ತೋರಿಸಲಿಲ್ಲ. ಹೀಗಿದೆ ಪಾಶವೀಕೃತ್ಯ. ಇಂಥ ತಾಯಂದಿರ ನೋವಿನ ಕೊರಳಾಗಬೇಕು ಸಮಕಾಲೀನ ಸಾಹಿತ್ಯ.

ದಕ್ಷಿಣ ಆಫ್ರಿಕದಿಂದ ನಮ್ಮ ನಾಡಿಗೆ ಮರಳಿದರೆ ಇಲ್ಲಿರುವ ಸ್ಥಿತಿಗತಿಗಳು ಇನ್ನೂ ದುರ್ಭರವಾಗಿವೆ. ರಾಜಧಾನಿ ಬೆಂಗಳೂರಿನ ಸಮೀಪದಲ್ಲೇ ಅಸಹನೀಯ ಘಟನೆಗಳು ನಡೆಯುತ್ತಿವೆ. ದೀಪದ ಕೆಳಗೇ ಕತ್ತಲೆ. ನೆಲಮಂಗಲದ ಹತ್ತಿರವಿರುವ ದಾಸನಪುರದಲ್ಲಿ ಹೋದವಾರ ನಡೆದ ದೈತ್ಯ ಕಾರ್ಯವನ್ನು ಯಾವ ಆಧುನಿಕ ಶಾಸನವೂ ತಡೆಯಲಿಲ್ಲ. ಹರಿಜನ ಶಿಲ್ಪಿ ಮರಿಸ್ವಾಮಿ ಗಣಪತಿ ವಿಗ್ರಹವನ್ನು ತಯಾರಿಸಿದ್ದೇ ಘೋರ ಅಪರಾಧ. ಇನ್ನು ಮೇಲಾದರೂ ಹರಿಜನರು ದೇವರನ್ನು ನಂಬಬೇಡಿ, ಪೂಜೆ ಮಾಡಬೇಡಿ ಎಂಬ ಸಂದೇಶ ಸಾರಲು ಈ ಘಟನೆ ನಡೆಯಿತೆ !

ದೇವರನ್ನೂ ಗುತ್ತಿಗೆಗೆ ತೆಗೆದುಕೊಂಡು ರಾಷ್ಟ್ರೀಕರಣ ಮಾಡಿಕೊಂಡಿರುವ ಮೇಲು ವರ್ಗದವರು ಮರಿಸ್ವಾಮಿಯವರ ಕಲಾತ್ಮಕತೆಯನ್ನು ಮೆಚ್ಚಿ ಬೆನ್ನು ತಟ್ಟಲಿಲ್ಲ. ಅದರ ಬದಲು ಪರಂಪರಾಗತ ಘೋರ ದಬ್ಬಾಳಿಕೆ, ಅಮಾನುಷ ಹಲ್ಲೆ ನಡೆಸಿದ್ದಾರೆ. ದೇವತಾ ಮೂರ್ತಿ ಮಾಡಿದ್ದಕ್ಕೆ ದೊರೆತ ಪ್ರತಿಫಲ ಆತ ಹುಟ್ಟಿ ಬೆಳೆದ ಹಳ್ಳಿ ಬಿಟ್ಟು ಅನಾಥನಾಗಿ ಅಲೆಯಬೇಕು. ಇಲ್ಲವಾದರೆ ಮರಿಸ್ವಾಮಿ ಮೇಲೆ ದಾಳಿ ಮಾತ್ರವಲ್ಲದೆ, ಆತನ ಹದಿಹರೆಯದ ಮಗಳ ಮೇಲೆ ಸಾಮೂಹಿಕ ಅತ್ಯಾಚಾರದ ಬೆದರಿಕೆ. ಎಲ್ಲಿದೆ ಸ್ವಾಮಿ ಪ್ರಜಾಪ್ರಭುತ್ವ, ಕಾನೂನು, ನ್ಯಾಯ? ವಿಧಾನಸೌಧ ಏನು ಮಾಡುತ್ತಿದೆ ? ಗೃಹ ಸಚಿವರು ಏನು ಮಾಡುತ್ತಿದ್ದಾರೆ? ದಲಿತ ಕ್ರಿಯಾ ಸಮಿತಿಗಳವರು ಕಾನೂನನ್ನು ತಮ್ಮ ಕೈಗೆತ್ತಿಕೊಂಡು ಬಂಡಾಯವೆಸಗದೆ ಇನ್ನೇನು ಮಾಡುತ್ತಾರೆ? ರಕ್ತ ಕುದಿಯದೆ ಇರುತ್ತದೆಯೆ? ಹೀಗೆ ಹರಿಜನ ಕಲಾವಿದನಿಗೆ ನಿಷ್ಕಾರಣವಾಗಿ ಕೊಲೆಯ ಬೆದರಿಕೆಯನ್ನು ಹಾಕಿದರೆ ಸಮಕಾಲೀನ ಸಾಹಿತಿಗಳು ಹೇಗೆ ಸಹಿಸುವುದು? ಇಂತಹ ನಿರಾಶಾಜನಕ ಚಿಂತಾಜನಕ ಪರಿಸ್ಥಿತಿಯ ಕೊಚ್ಚೆ ರಾಡಿಗಳಲ್ಲಿ ತೊಳಲಾಡುವ ಅಸಹಾಯಕರಿಗೆ ವಿಚಾರ ಶಕ್ತಿಯನ್ನು ಬೆಳೆಸಿಕೊಳ್ಳಲು ಬೇಕಾದ ತ್ರಾಣವನ್ನು ನಮ್ಮ ಸಮಕಾಲೀನ ಸಾಹಿತ್ಯ ತಂದುಕೊಡಬೇಕಾಗುತ್ತದೆ.

ಅತ್ತ ಕುದುರೆಮೋತಿಯಲ್ಲಿ ಅಮಾಯಕ ಸೋದರಿಯರಿಗೆ ಬೆತ್ತಲೆ ಸೇವೆ ಅಪಮಾನ. ಇಂಥ ಕರಾಳ ಹೇಯ ಅಸುರೀಕೃತ್ಯಕ್ಕೆ ಕಾರಣರಾದ ಮಠದ ಸ್ವಾಮಿಗೂ ಬೆಂಬಲ; ಇತ್ತ ಕಲಾವಿದ ಮರಿಸ್ವಾಮಿಯ ಮೈ ಮನಗಳನ್ನು ಸುಲಿಯುವ ಊರಿನ ಪುಂಡರಿಗೂ ರಕ್ಷೆ. ಇನ್ನು ದಲಿತರು ಶೂದ್ರರು ಎತ್ತಹೋಗಿ ಮರ್ಯಾದೆಯಿಂದ ಬಾಳಬೇಕು. ನೆಲ ಇಲ್ಲ, ನೆರಳೂ ಇಲ್ಲ. ಅವರ ಲೇಖಣಿಗಳು ಖಡ್ಗವಾಗದೆ, ಮಸಿ ಸಿಡಿಮದ್ದಾಗದೆ ಇನ್ನೇನು ಮಾಡೀತು ? ಹಳೆಯದನ್ನೆಲ್ಲ ಗುಡಿಸಿ ಸಾರಿಸಿ ತೊಳೆದು ಹೊಸ ಇತಿಹಾಸ ಬರೆಯಬೇಕೆಂದು ಉತ್ಸಾಹದಿಂದ ಹೊರಟ ಯುವಶಕ್ತಿಯಮೇಲೆ ಸಮಕಾಲೀನ ಸಮಾಜ ಹೀಗೆ ಬರೆ ಎಳೆಯುತ್ತಿದೆ, ತಣ್ಣೀರು ಎರಚುತ್ತಿದೆ, ಪ್ರಾಮಾಣಿಕ ಸಂವೇದನೆಗಳನ್ನು ಸುಡುತ್ತಿದೆ. ಇನ್ನಾದರೂ ಶೂದ್ರರನ್ನು ಮರ್ಯಾದೆಯಿಂದ ಮಾನವರಾಗಿ ಬಾಳಲು ಬೆಳಕಿನತ್ತ ಹೋಗಲು ಬಿಡಿ. ಇಲ್ಲವಾದರೆ ಪೆಟ್ರೋಲು ಬಂದೂಕ ಬೆಂಕಿ ಮಾತಾಡೀತು.

ತಿನ್ನಲು ಅನ್ನ, ಹೊದೆಯಲು ಬಟ್ಟೆ, ನಿಲ್ಲಲು ನೆಲ, ಆಸರಕ್ಕೆ ಮನೆ–ಇಂಥ ಮೂಲಭೂತ ಅವಶ್ಯಕತೆಗಳೊಂದೂ ಇಲ್ಲದೆ ಕ್ರಿಮಿಕೀಟಗಳಿಗಿಂತ ಕೀಳಾಗಿ ಬಾಳಿ ಹೇಳಹೆಸರಿಲ್ಲದಂತೆ, ಹೇಳಲೂ ಉಸಿರಿಲ್ಲದಂತೆ ನಿತ್ಯ ಸಾವಿನೆಡೆಗೆ ಧಾವಿಸುತ್ತಿರುವ ದೌರ್ಭಾಗ್ಯಕೋಟಿಯತ್ತ ನನ್ನೆಲ್ಲ ಬುದ್ಧಿ ಭಾವ ಕೇಂದ್ರೀಕೃತಗೊಳ್ಳುತ್ತಿರುತ್ತದೆ. ಅಧಿಕಾರದಂಡ ಪ್ರಯೋಗಿಸಿ ಪೋಲೀಸು ಲಾರಿ ಕೋವಿ ಉಪಯೋಗಿಸಿ ನಗರಸಭೆ ಸಿಬ್ಬಂದಿಗಳವರು ರಾತ್ರೋರಾತ್ರಿ ದಾಳಿ ನಡೆಸಿ ಬದುಕುವ ಗುಡಿಸಲು ನಾಶಪಡಿಸಿ ಕೊಳಗೇರಿಗಳನ್ನು ನಾಶಪಡಿಸುವುದು ಅಮಾನವೀಯ ದುಷ್ಕೃತ್ಯ, ಅವರಿಗೆ ನಿಲ್ಲಲು ಪರ್ಯಾಯ ನೆಲೆ ಕೊಡದ ಹೀಗೆ ನಿಂತ ನೆಲವನ್ನು ರಣ ಹದ್ದುಗಳಂತೆ ಮೇಲೆರಗಿ ಕಿತ್ತುಕೊಳ್ಳುವ ಕಾನೂನು ಕ್ರಮಗಳನ್ನು ಸಮಕಾಲೀನ ಸಾಹಿತಿಯಾಗಿ ನಾನು ಅತ್ಯಂತ ಉಗ್ರವಾಗಿ ಖಂಡಿಸುತ್ತೇನೆ.

ಆ ದೀನ ದಲಿತ ಅವಕಾಶ ವಿಹೀನರ ಆರ್ತರೋಧನಕ್ಕೆ ನನ್ನೆದೆ ಉರಿದು ಬರಿದಾಗುತ್ತದೆ. ಅವರನ್ನು ಹೀಗೆ ಕಡೆಗಣಿಸುತ್ತಾ ಹೊರಟರೆ ಕಡೆಗೆ ನೆನಪಿರಲಿ, ಈ ಲೋಕ ಮೃತ್ಯು ದೇವತೆಯ ನರಕ ಮಂದಿರವಾಗುವುದರಲ್ಲಿ ಸಂಶಯವಿಲ್ಲ. ವಿಜ್ಞಾನ ಮಾನವನಿಗೆ ದಯ

ಪಾಲಿಸಿದ ಎಲ್ಲ ಐಷಾರಾಮುಗಳನ್ನು ನಿರ್ಗತಿಕ ಬಹು ಸಮಾಜಕ್ಕೂ ಹಂಚದಿದ್ದರೆ, ಕಡೆಯ ಮನುಷ್ಯನಿಗೂ ವಿಸ್ತರಿಸದಿದ್ದರೆ ಪಾತಾಳ ಬಿಲಗಳತ್ತ ಧಾವಿಸಬೇಕಾದೀತೆಂಬ ಎಚ್ಚರ ಮತ್ತು ವಿವೇಕ ಇರಬೇಕು. ಸಮಕಾಲೀನ ಸಾಹಿತ್ಯ ಪರಿವರ್ತನೆಯ ಪ್ರವರ್ತಕವೂ ಆಗಬೇಕು, ಪ್ರವಾದಿಯೂ ಆಗಬೇಕು. ಜನತೆಯ ಸಾಮೂಹಿಕ ವಿಕಾಸ ಕಾರ್ಯಕ್ರಮಗಳು ಹೇಗೆ ದುರ್ಬಲಗೊಂಡು ಪೊಳ್ಳಾಗಿ ಅರ್ಥಹೀನವಾಗುತ್ತಿವೆ ಎಂಬುದನ್ನು ಬಯಲಿಗೆಳೆಯಬಲ್ಲ ನೈತಿಕ ಧೈರ್ಯವನ್ನು ನಾವು ಹೆಚ್ಚಿಸಿಕೊಳ್ಳಬೇಕು.

ಮದ್ಯ ಮಾಂಸ ವಿನಿಯೋಗಗಳಿಂದ ಪ್ರಚಾರ ಪ್ರಶಂಸೆಗಳನ್ನು ಗಿಟ್ಟಿಸಿಕೊಳ್ಳುತ್ತಾ ಮಠ ಸ್ಥಾಪಿಸಿಕೊಂಡು ತಮ್ಮ ಬಾಲಬಡುಕರಿಂದ ಬಹುಪರಾಕು ಹೇಳಿಸಿಕೊಳ್ಳುತ್ತಾ ಮೆರವಣಿಗೆ ಹೊರಟಿರುವ ಜನ ಇನ್ನೂ ಅದೇ ನಾಟಕಾಭಿನಯಗಳಿಂದ ಇಂದಿನ ಎಚ್ಚೆತ್ತ ಹಿಂದುಳಿದ ವರ್ಗಗಳ ಪ್ರತಿಭಾವಂತ ಲೇಖಕರನ್ನು ಮೋಸಗೊಳಿಸುವುದು ಸಾಧ್ಯವಾಗದು. ಸ್ವಮತದ ಸಾಹಿತಿಗಳನ್ನು ಸಂಸ್ಥಾಪಿಸಿ ಉಳಿದವರೆಲ್ಲ ಆ ಮೂರ್ತಿಗಳನ್ನು ಪೂಜಿಸಿ ಪ್ರಸಾದ ಪಡೆದು ಪುನೀತರಾಗಬೇಕೆಂದು ಪುಸಲಾಯಿಸುವುದು, ಅದೇ ಕಾಲಕ್ಕೆ ಪರೋಕ್ಷವಾಗಿ ಶೂದ್ರ ದಲಿತರ ಸಾಹಿತ್ಯವನ್ನು ಇತಿಶ್ರೀ ಮಾಡಿ ಮುಗಿಸುವುದು—ಇದು ಇನ್ನು ಆಗದ ಕೆಲಸ. ಮೌಢ್ಯ ನಿವಾರಣೆಯಾಗಿ ಪಲ್ಲಕ್ಕಿ ಹೊರುವುದು ನಿಲ್ಲಬೇಕಾಗಿದೆ.

ಮನುಷ್ಯ ವಿರೋಧಿ ಧೋರಣೆಯ ಬರವಣಿಗೆ ಬರೆದವರು ಕೂಡ ವಿಚಾರವಂತರಲ್ಲದ ಮುಗ್ಧರಿಂದ ಆರಾಧಿಸಿಕೊಳ್ಳುತ್ತಿರುವುದನ್ನು ಧಿಕ್ಕರಿಸಬೇಕು. ನಮ್ಮ ಅಪಾರ ಸಹಿಷ್ಣುತೆಯೇ ನಮಗೆ ಶಾಪ, ಅವರಿಗೆ ವರ. ತಮ್ಮ ಸ್ವಾರ್ಥಕ್ಕಾಗಿ ಜನ ವಿರೋಧಿ ತಂತ್ರಗಳನ್ನು ಪಾಲಿಸುತ್ತಾ ದಲಿತರ ಪ್ರತಿಭೆಗಳನ್ನು ಬೆಳೆಯಗೊಡದೆ ಒಳಗೊಳಗೆ ತಿನ್ನುತ್ತಾ ಬಂದಿರುವ ಕುಟ್ಟೆ ಹುಳುಗಳನ್ನು ವೈಚಾರಿಕತೆಯಿಂದ ಉಚ್ಚಾಟಿಸಬೇಕು. ಜಡ್ಡುಗಟ್ಟಿದ, ಅರ್ಥ ಕಳೆದುಕೊಂಡ ಹಳೆಯ ಹಳಸಲು ವಿಚಾರಗಳನ್ನು ಕೊಡವಿಬಿಡೋಣ. ಅರ್ಥವತ್ತಾಗಿವೆ ಯೆನಿಸಿದ ಹೊಸ ಆಲೋಚನೆಗಳನ್ನು ಅಳವಡಿಸಿಕೊಳ್ಳೋಣ.

ಸಮಕಾಲೀನ ಸಾಹಿತಿ ಕಣ್ಣು ಬಿಟ್ಟು ಕಡೆ ಕಾಣುವುದು ಸಮಾಜದ ಎಲ್ಲ ಸ್ತರಗಳ ಶೋಷಣೆ. ಹಳ್ಳಿಗಳಿಂದ ದಿಳ್ಳಿಯವರೆಗೆ ಕೆಳವರ್ಗದವರನ್ನು ಕುರಿತು ಕ್ವಿಂಟಾಲ್‌ಗಟ್ಟಲೆ ಉದ್ಧಾರದ ಮಾತುಗಳು ಧಾರಾಳವಾಗಿ ಕೇಳಿಬರುತ್ತಿವೆ. ಅವೆಲ್ಲ ತುದಿ ನಾಲಗೆಯಿಂದೀಚೆಗೆ ಉದುರುವ ಕಪಟ ನಾಟಕದ ಸಂಭಾಷಣೆ. ಗ್ರಾಮೀಣ ಕಲೆಗಳ ವ್ಯವಸ್ಥಿತ ವಿನಾಶ ನಡೆದೇ ಇದೆ. ಬುಟ್ಟಿ ಹೆಣೆಗೆ, ಚಾಪೆ ಹಾಕುವುದು, ಬೊಂಬೆ ಮಾಡುವುದು ಮೊದಲಾದ ಕೈ ಕಸುಬುಗಳನ್ನು ಕೊಂದಿದ್ದಾರೆ. ಕಹಳೆ ಕೊಂಬು ತಮಟೆ ನಾಗಸ್ವರ ಮೊದಲಾದ ಹಳ್ಳಿಯ ವಾದ್ಯಗಳೂ ಕಣ್ಮರೆಯಾಗುತ್ತಿವೆ. ವೀಣೆ ಪಿಟೀಲು ಮೃದಂಗಗಳ ತಜ್ಞರಿಗೆ ರಾಷ್ಟ್ರಪ್ರಶಸ್ತಿ ಕೊಡುತ್ತಾರೆ. ಸಂತೋಷ. ಅದೇ ಗುಣಮಟ್ಟದ ಕಹಳೆ ಹರೆ ತಮಟೆ ನಾಗಸ್ವರಗಳ ನಿಪುಣರಿಗೇಕೆ ಪದ್ಮಶ್ರೀ ಕೊಡುವುದಿಲ್ಲ? ಅಲ್ಲಿದೆ ಸ್ವಾಮಿ ರಹಸ್ಯ ; ಈ ವಾದ್ಯಗಳನ್ನು ನುಡಿಸುವವರು ಹರಿಜನರು, ಗಿರಿಜನರು.

ಹರಿಜನ ಗಿರಿಜನರು ಹಲ್ಲು ಕಿರಿಯಬೇಕೇ ಹೊರತು ಸಂಗೀತ ಕಚೇರಿಗಳನ್ನು ನಡೆಸಬಾರದು. ಇಂದಿಗೂ ಇವರಿಗೆ ಮೇಲುವರ್ಗದವರ ಮನೆಯೊಳಗೆ ಪ್ರವೇಶವಿಲ್ಲ. ವಿಶ್ವವಿದ್ಯಾನಿಲಯ ಗಳಲ್ಲಿ ಜಾನಪದ ಅಧ್ಯಯನಕ್ಕೆ ಸವಲತ್ತುಗಳಿವೆ. ಹರಿಜನ ಗಿರಿಜನರ ಕಲೆ, ವಾದನ,

ಹೊಂದಾವರೆ

ಸಂಗೀತ, ಕಥೆ, ಹಾಡು ಕುರಿತು ದೊಡ್ಡ ಥೀಸಿಸ್ ಬರೆದು ಪಿಎಚ್. ಡಿ. ಪಡೆಯುತ್ತಾರೆ. ಆದರೆ ಕಲಾವಿದರಿಗೆ ಪಂಗನಾಮ. ಇವರಿಗೆ ಸಂಭಾವನೆಯೂ ಇಲ್ಲ.

ಬಡಗಿ, ಚಮ್ಮಾರ, ಕಮ್ಮಾರ, ನಾಯಿಂದ, ತೋಟಿ, ತಳವಾರ, ಅಗಸ, ಕುಂಬಾರ–ಹೀಗೆ ಇವರಿಗೆ ಮಾಸಾಶನವೂ ಇಲ್ಲ. ಪುರೋಹಿತರಿಗೆ ಶ್ಯಾನುಭೋಗರಿಗೆ ಪಟೇಲರಿಗೆ ಸಾಹಿತಿಗಳಿಗೆ ಸಂಗೀತ ನಿಪುಣರಿಗೆ ಎಲ್ಲರಿಗೂ ಮಾಸಾಶನವಿದೆ. ಹಳ್ಳಿಯ ಬದುಕನ್ನು ತಮ್ಮ ಬಾಳಿನುದ್ದಕ್ಕೂ ಬೆಳಗುವ, ಸಾಂಸ್ಕೃತಿಕ ಪರಂಪರೆಗೆ ತಮ್ಮ ಜೀವಧಾರೆ ಎರೆದು ಕಾಪಾಡುತ್ತಿರುವ ನಮ್ಮ ಸಂಸ್ಕೃತಿಯ ನಿಜ ವಾರಸುದಾರರಿಗೆ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ. ಸಮಕಾಲೀನ ಸಾಹಿತ್ಯ ರೋಪುಗೊಳ್ಳಬೇಕಾದದ್ದು ಸೃಜನಶೀಲ ಪ್ರೇರಣೆ ಪಡೆಯಬೇಕಾದದ್ದು ಈ ಶೋಷಣೆ ಕುರಿತು. ಅಂಥ ಸಾಹಿತ್ಯ ಹೆಚ್ಚು ತೇಜಸ್ಸು ಮೈಗೂಡಿಸಿಕೊಳ್ಳಬಲ್ಲುದು.

ಇಂಥ ಹಗಲು ದರೋಡೆ ಎಲ್ಲೆಲ್ಲೂ ರಾಜಾರೋಷವಾಗಿ ನಡೆಯುತ್ತಿದೆ. ಹರಿಜನ ಗಿರಿಜನ ಶೂದ್ರರಿಗೆ ಮೀಸಲಾತಿ ನೀತಿ ಜಾರಿಯಲ್ಲಿರುವುದಾಗಿ ಸರಕಾರ ತಿಳಿಸುತ್ತಿದೆ. ಉದ್ಯೋಗ ನೇಮಕಾತಿಗಳಲ್ಲಿ ಸರಕಾರ ಇವರಿಗಾಗಿ ಶೇಕಡಾ ೨೦ ರಿಂದ ೨೫ರ ವರೆಗೆ ಸ್ಥಾನಗಳನ್ನು ಕಾದಿರಿಸಿದೆಯಂತೆ. ಈ ಅಂತೆಕಂತೆಗಳನ್ನು ಕೇಳಿ ಕಿವಿ ಕಿವುಡಾಗುತ್ತಿದೆಯೇ ಹೊರತು ಕಣ್ಣಾರೆ ನೋಡುವ ಸೌಭಾಗ್ಯ ಇನ್ನೂ ಬರಿಲಿಲ್ಲ.

ಒಂದೆರಡು ಉದಾಹರಣೆಗಳಿಂದ ಇದರಲ್ಲಿ ಅಡಗಿರುವ ಮೋಸವನ್ನು ಬಯಲುಗೊಳಿಸುತ್ತೇನೆ. ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಇವರಿಗೆ ಅಲ್ಪ ಸಂಖ್ಯಾತರಿಗೆ ಯಾವ ವಿಶೇಷ ಸವಲತ್ತುಗಳೂ ಸಿಗುತ್ತಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ ಶಿಕ್ಷಕರಾಗಿ ಅನೇಕ ವರ್ಷಗಳ ಅನುಭವವಿದ್ದರೂ ಇಂದಿಗೂ ಬಡ್ತಿಯೂ ದೊರೆತಿಲ್ಲ. ಕುಲಾಧಿಪತಿಗಳಿಗೆ ಅರಿಕೆ ಮಾಡಿಕೊಂಡರೂ ಪ್ರಯೋಜನವಾಗಿಲ್ಲ. ಇಂಥ ನೂರಾರು ಸಾವಿರಾರು ಸಾಕ್ಷ್ಯಾಧಾರಗಳು ಕರ್ನಾಟಕದ ಉದ್ದಗಲಕ್ಕೂ ಅನೇಕ ವೃತ್ತಿಗಳಲ್ಲಿ ಸಿಗುತ್ತವೆ. ವಸ್ತುಸ್ಥಿತಿ ಹೀಗಿದ್ದರೂ ಸುಮ್ಮನೆ ಸರಕಾರ ಕಾಗದದ ಮೇಲೆ ಮೀಸಲಾತಿ ಜಾರಿಯಲ್ಲಿದೆ ಎಂದು ತೋರಿಸುವ ನಾಟಕ ನಡೆಸಿದೆ. ಎಂದೋ ಮೀಸಲಾತಿ ಸತ್ತಿದೆ. ಅದರ ಹೆಣ ತೋರಿಸುತ್ತಿದ್ದಾರೆ. ಅಷ್ಟೆ. ನೊಂದ ಜನ ಬಂಡೇಳದೆ ಇನ್ನೇನು ಮಾಡುತ್ತಾರೆ. ಹರಿಜನ–ಗಿರಿಜನ ವರ್ಗಕ್ಕೆ ಸೇರಿದ ಮೂವರನ್ನು ಮಂತ್ರಿಗಳನ್ನಾಗಿ ಮಾಡಿದಾಕ್ಷಣ ಇಡೀ ವರ್ಗ ಚೇತರಿಸಿಕೊಳ್ಳುವುದಿಲ್ಲ. ಈ ದೃಷ್ಟಿ ಪ್ರತಿಮೆಗಳನ್ನು ಮುಂದೆ ನಿಲ್ಲಿಸಿ, ಬೆದರುಬೊಂಬೆ ತೋರಿಸುವಂತೆ ಪ್ರದರ್ಶನ ಪ್ರಚಾರ ಮಾಡುವುದರಲ್ಲಿ ಅರ್ಥವಿಲ್ಲ. ಈ ಇಡೀ ಸಮುದಾಯವನ್ನು ಮೇಲಕ್ಕೆತ್ತಬೇಕು. ಸಮಕಾಲೀನ ಸಾಹಿತ್ಯ ಇಂಥ ವಾತಾವರಣವಾಗಲು ಇಂಬುಗೊಡಬೇಕು.

ದುರ್ಬಲ ಹಾಗೂ ಹೆಚ್ಚು ಹಿಂದುಳಿದ ವರ್ಗಗಳಿಗೆ ವಿದ್ಯೆ ಉದ್ಯೋಗಗಳಲ್ಲಿ ವಿಶೇಷ ಸಲವತ್ತುಗಳನ್ನು ಇನ್ನೂ ಕೆಲವು ದಶಕಗಳವರೆಗೆ ಕೊಡಲೇಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಇಂಥ ಅನುಕೂಲಗಳನ್ನು ಈ ಜನಾಂಗಕ್ಕೆ ಕೊಡುವುದು ಅನಿವಾರ್ಯವೆಂಬ ತಿಳಿವಳಿಕೆಯನ್ನೂ ತಾಳ್ಮೆಯನ್ನೂ ಔದಾರ್ಯವನ್ನೂ ಮುಂದುವರಿದ ಶಕ್ತವರ್ಗಗಳವರು ತೋರಬೇಕು. ಅತ್ಯಂತ ಕೆಳಸ್ತರದಿಂದ ಬಂದ ಲೇಖಕರು ಇದುವರೆಗೆ ಹೆಪ್ಪುಗಟ್ಟಿದ್ದ ಸಾಹಿತ್ಯಕ್ಕೆ ಇಂದು ಬಿಸಿ ಕೊಡುತ್ತಿದ್ದಾರೆ. ಕೆಳವರ್ಗದ ಜನಶಕ್ತಿಯ ಸ್ಫೋಟದಿಂದ ಪ್ರತಿಷ್ಠಿತ ಪಟ್ಟಭದ್ರರು ಆಸನ ಕಂಪನಕ್ಕೊಳಗಾಗಿ ಕಂಗಾಲಾಗಿದ್ದಾರೆ. ಬೇರೆ ಯಾರೂ

ಬಲಿಪಶುಗಳು ಸಿಗದಿದ್ದರೆ ತಮ್ಮನ್ನೇ ಪರಚಿಕೊಂಡು ಅರಚಿಕೊಳ್ಳುತ್ತಿದ್ದಾರೆ. ಅವಾಸ್ತವಿಕಗಳನ್ನು ಪ್ರತಿಬಿಂಬಿಸುತ್ತಾ ಶೂದ್ರ-ದಲಿತರ ಹೆಗಲು ತಲೆಗಳ ಮೇಲೆ ಸವಾರಿ ಮಾಡುತ್ತಿದ್ದ ಕ್ರೌರ್ಯ ವ್ಯವಸ್ಥೆಯನ್ನು ಛಿದ್ರಗೊಳಿಸಲು ಇದೀಗ ಈಗೀಗ ಸಾಧ್ಯವಾಗುತ್ತಿದೆ ಎಂಬುದಕ್ಕೆ ಇವೆಲ್ಲ ಉದಾಹರಣೆಗಳಾಗುತ್ತಿವೆ. ಹೊಸ ಚಿಂತನೆಗಳನ್ನು, ಸುಪ್ತ ಆಕಾಂಕ್ಷೆಗಳನ್ನು ಇಷ್ಟು ನಿರ್ಭಿಡೆಯಿಂದ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಿಂದೆಂದೂ ನಮ್ಮ ಲೇಖಕರು ಬರೆಯಲು ಸಾಧ್ಯವಾಗಲಿಲ್ಲ. ಸಾಹಿತ್ಯದ ಮೂಲಕ ಬಾಳಿನ ನೆಲೆಗಳನ್ನು ಹುಡುಕುತ್ತ ಹೊರಟ ಹೊಸ ಧ್ವನಿಗಳು ಗಟ್ಟಿಯಾಗಿ ಸ್ಪಷ್ಟವಾಗಿ ಕೇಳಿ ಬರುತ್ತಲಿವೆ.

ಸ್ಥಗಿತಗೊಂಡಿದ್ದ ಕನ್ನಡ ಸಾಹಿತ್ಯದಲ್ಲಿ ಈ ಬದಲಾವಣೆ ಬಂದಿರುವುದನ್ನು ಸ್ವಾಗತಿಸಬೇಕು. ಸೌಮ್ಯರೂಪದಲ್ಲಿ ಅಂಕುರಿಸಿರುವ ಈ ಎಚ್ಚರ ನಾಳೆ ದೊಡ್ಡ ಕ್ರಾಂತಿಗೆ ನಾಂದಿ ಹಾಡಿದೆ, ಅನ್ಯಾಯಗಳನ್ನು ಪ್ರಶ್ನಿಸುವ ಎದೆಗಾರಿಕೆ ಸಮಕಾಲೀನ ಸಾಹಿತ್ಯಕ್ಕೆ ಇಂದು ಬಂದಿದೆ. ಅನ್ಯಾಯವನ್ನು ಪ್ರತಿಭಟಿಸಲು ಲೇಖಣಿ ಬಳಸುವ ಆತ್ಮವಿಶ್ವಾಸದ ಲೇಖಕರು ಹುಟ್ಟಿದ್ದಾರೆ. ಈ ಬಂಡಾಯ ಮನೋಧರ್ಮಕ್ಕೆ ಸೋಲಾಗದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಅದನ್ನು ಪ್ರೀತಿಸುವವರೆಲ್ಲರಿಗೆ ಸೇರಿದ್ದು.

ಏಕೆಂದರೆ ಇಷ್ಟುಕಾಲ ಶೂದ್ರ ದಲಿತರ ಕಂಠಗಳನ್ನು ಕಿತ್ತುಕೊಂಡಿದ್ದ ಮೇಲು ವರ್ಗದ ಬುದ್ಧಿವಂತ ಗುತ್ತಿಗೆದಾರರು ಈಗ ನಮ್ಮ ಬಾಯಿಗಳನ್ನು ಮುಚ್ಚಲು ಸಾಧ್ಯವಾಗದುದರಿಂದ, ನಮಗಿರುವ ವೇದಿಕೆಗಳನ್ನು ಬಳಸಿಕೊಂಡು, ನಮ್ಮನ್ನು ಪುಸಲಾಯಿಸಿ ಪರೋಕ್ಷವಾಗಿ ವಂಚಿಸುತ್ತಿದ್ದಾರೆ. ನಮಗಿಂತ ಮುಂದಾಗಿ ಜೋರಾಗಿ ನಮ್ಮ ಬಂಡಾಯ ಸಂಘಟನೆ ಕುರಿತು ಮಾತನಾಡುವ ಈ ಜನರ ಮೇಲೆ ಭಾರಿ ಗುಮಾನಿಯಿಟ್ಟಿರಿ. ನಮ್ಮ ಅವಕಾಶಗಳನ್ನು ಉಪಯೋಗಿಸಿಕೊಂಡು ಇಲ್ಲಿಯೂ ಮಾಮೂಲೀ ಗೋಸುಂಬೆಗಳೇ ವಿಜೃಂಭಿಸಲು ಬಿಡಬೇಡಿ, ಕೆಲವು ಶೂದ್ರ ದಲಿತರು ತಮ್ಮ ಸ್ವಾರ್ಥಕ್ಕಾಗಿ ಬಲಿಪಶುಗಳಾಗುತ್ತಿದ್ದಾರೆ. ವೃತ್ತಿ-ಬಡ್ತಿ ಆಮಿಷಗಳಿಗೆ ಒಳಗಾಗಿ ಶೂದ್ರ-ದಲಿತರ ವೇದಿಕೆಗಳನ್ನು, ಮೇಲು ವರ್ಗದ, ಮಾರುವೇಶದ ಖೋಟಾನಾಣ್ಯಗಳಿಗೆ ಮಾರುತ್ತಿರುವ ಮುಂದಾಳುಗಳಿಗೆ ಛೀಮಾರಿ ಮಾಡಲು ಹಿಂಜರಿಯಬೇಡಿ.

ಸಮಕಾಲೀನ ಸಾಹಿತ್ಯದಲ್ಲಿ ಸೃಜನಶೀಲ ಪ್ರತಿಭೆ ತೀವ್ರತರವಾಗಿ ಕ್ರಿಯಾಶೀಲವಾಗಿರುವ ದಲಿತ ಸಾಹಿತ್ಯಕ್ಕೆ ಕನ್ನಡದ ಇದುವರೆಗಿನ ಸಾಹಿತ್ಯ ಪರಂಪರೆ ಪ್ರೇರಣಾಮೂಲವಾಗಿಲ್ಲ. ಈ ಹೊಸ ಲೇಖಕರು ಸ್ವತಂತ್ರ ವಿನೂತನ ಮಾರ್ಗ ಹಿಡಿದು ಸ್ವಂತಿಕೆಯನ್ನು ಸ್ಥಾಪಿಸಿದ್ದಾರೆ. ಪ್ರತಿಭಟನೆಯೇ ಪ್ರೇರಣೆಯೂ ಮುಖ್ಯ ಧೋರಣೆಯೂ ಆದ ದಲಿತ-ಬಂಡಾಯ ಸಾಹಿತ್ಯ ಸ್ವತಂತ್ರ ನಿಲುವಿನಲ್ಲಿ ವ್ಯವಹೃತವಾಗುತ್ತಿರುವ ಬರವಣಿಗೆ. ೧೨ನೆಯ ಶತಮಾನವನ್ನು ಬಿಟ್ಟರೆ ಮತ್ತೆ ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ನಾವು ವಿಭಿನ್ನ ಸಾಮಾಜಿಕ ವರ್ಗದ ಧ್ವನಿಗಳನ್ನು ಸ್ಪಷ್ಟವಾಗಿ ಕೇಳುತ್ತಿದ್ದೇವೆ. ಹೊಸ ಸೊಗಡು, ಸೊಗಸು, ಆಯಾಮ ಈಗ ಸಮಕಾಲೀನ ಕನ್ನಡ ಸಾಹಿತ್ಯ ಪಡೆದುಕೊಳ್ಳುತ್ತಿದೆ. ಇಪ್ಪತ್ತನೆಯ ಶತಮಾನದಲ್ಲಿ ಹುಟ್ಟಿದ ಹೊಸ ಪ್ರವೃತ್ತಿಯನ್ನು ಅರಳಲು, ಮಾಗಲು, ಹಬ್ಬಲು, ಸ್ಥಿರವಾಗಲು, ಸಮುದಾಯದ ಅಭಿವ್ಯಕ್ತಿಯಾಗಲು ಅಂದಿನ ಮತ್ತು ಅನಂತರದ ಬುದ್ಧಿವಂತ ವರ್ಗ ಈಗ ಮತ್ತೆ ಕಾರ್ಯಪ್ರವೃತ್ತವಾಗಿದೆ. ಎಲ್ಲಿ ಈ ದಲಿತರ ಶೂದ್ರರ ಕೃತಿಗಳು ಪಠ್ಯಗಳಾಗಿ ಹೊಸ ವಿಚಾರ ಪ್ರಚಾರ ಪಡೆದುಕೊಳ್ಳುವುದೊ ಎಂಬ ಭಯ ಒಂದು ಕಡೆ, ತಮ್ಮ ಪುಸ್ತಕಗಳು

ಪತ್ಯವಾಗುವುದು ತಪ್ಪಿ ಅನಾಯಾಸವಾಗಿ ಬರುತ್ತಿದ್ದ ಆದಾಯಕ್ಕೆ ಕೊಡಲಿಪೆಟ್ಟು ಬೀಳುತ್ತದೆಂಬ ಭೀತಿ ಇನ್ನೊಂದು ಕಡೆ.

ಆದರಿಂದ ಪಟ್ಟಭದ್ರರು ದಲಿತ ಶೂದ್ರರಲ್ಲಿ ಒಡಕು ಮೂಡಿಸುತ್ತಿದ್ದಾರೆ. ಅಪಸ್ವರ ಆಗಲೇ ಕೇಳಿಬರುತ್ತಿದೆ. "ಶೂದ್ರ–ದಲಿತ ಎಂಬ ಠಸ್ಸೆ ಹಾಕಿಕೊಂಡು ಬರೆಯುವುದು ಅಪಾಯಕಾರಿ. ಸಾಹಿತ್ಯದ ದೃಷ್ಟಿಯಿಂದ ಇದೆಲ್ಲಾ ಜೊಳ್ಳು, ಗೌಣ, ಅಪಕ್ವ"––ಎಂದೆಲ್ಲಾ ಹೇಳುತ್ತಾ ಸಾರಾಸಗಟು ಬಂಡಾಯ ಮೂಲದಿಂದ ಬಂದ ಸಾಹಿತ್ಯವನ್ನು ಗುಡಿಸಿ ಹಾಕುವ ಜಾಡಮಾಲಿಗಳಂತೆ ಬರುತ್ತಿದ್ದಾರೆ. ಅವರಿಗೆ ಸೊಪ್ಪು ಹಾಕಬಾರದು. ವೃತ್ತಿವಿಶಿಷ್ಟವಾದ, ಒಮ್ಮೊಮ್ಮೆ ವೃತ್ತಿ ವಿಶಿಷ್ಟವಾದ ಜಾತಿ ವಿಶಿಷ್ಟವಾದ ಅನುಭವಗಳನ್ನು ತಮಗೆ ಸಹಜವಾದ ಭಾಷೆಯಲ್ಲಿ ಬರವಣಿಗೆಗೆ ಇಳಿಸಲು ನಾಚಬೇಕಾಗಿಲ್ಲ, ಸಂಕೋಚ ಪಡಬೇಕಾಗಿಲ್ಲ. ಏನೆಂದರೆ ನಮ್ಮ ಸಂಕೀರ್ಣ ಅನುಭವಗಳನ್ನು ಆವಿಷ್ಕಾರಗೊಳಿಸುವಾಗ ಅದು ಹಸಿಯಾಗಿ ಕಾರಿದ ಆಕ್ರೋಶದ ಅಭಿವ್ಯಕ್ತಿಯಷ್ಟೇ ಆಗದೆ ಹೆಚ್ಚು ಕಲಾತ್ಮಕವೂ ಕಾವ್ಯಾತ್ಮಕವೂ ಆಗಿರಬೇಕು. ಗಟ್ಟಿ ಲೇಖಕ ಬೇಕೆಂಬ ಎಚ್ಚರವನ್ನು ಲೇಖಕರು ಕಳೆದುಕೊಳ್ಳಬಾರದು. ಸತ್ವಶಾಲಿ ಬರವಣಿಗೆಗೆ ಸಾವಿಲ್ಲ. ಹೇಗೋ ಉಳಿದುಕೊಳ್ಳುತ್ತಾನೆ.

ನಮ್ಮ ಸಮಕಾಲೀನ ಸಾಹಿತ್ಯವಾದ ಶೂದ್ರ–ದಲಿತ ಸಾಹಿತ್ಯ ವಿವೇಚನೆಗೆ ನಾಗರೀಕ ಲೇಖಕರು ಕಲ್ಪಿಸಿದ ಮಾನದಂಡಗಳು ಬೇಡ. ಸೋಗಲಾಡಿ ನಯವಂಚಕ ಪಟ್ಟಭದ್ರರನ್ನು ಯಾವ ಲೆಕ್ಕಕ್ಕೂ ಜಮಾಖರ್ಚಿಗೂ ಇಡಬೇಡಿ. ಅವರೊಡನೆ ಸೇರಿದರೆ ನೀವು ಕರಗಿ ಹೋಗುತ್ತೀರಿ, ಜೋಕೆ. ನಿಮ್ಮ ವೈಯಕ್ತಿಕತೆಯನ್ನು ಅಳಿಸಿ ಒರೆಸಿ ಹಾಕುವುದೇ ಅವರ ಹುಟ್ಟುಗುಣ. ಈ ಪಟ್ಟಭದ್ರರು ತಮ್ಮ ಪ್ರಶಸ್ತಿ ಪತ್ರಗಳನ್ನು ಅವರ ಹಣೆಗೇ ಅಂಟಿಸಿಕೊಳ್ಳಲಿ, ನಮಗೆ ಬೇಡ. ಸ್ವಾಭಿಮಾನ ಶೂನ್ಯರಾಗಿ ಬಾಳಲು ನಮಗೆ ದುರ್ಬೋಧನೆ ಮಾಡಿ ಚಪ್ಪಡಿ ಎಳೆಯಲು ಇವರು ಹಿತಶತ್ರುಗಳಾಗಿ ಹತ್ತಿರ ಬಂದರೂ ಸೇರಿಸಬಾರದು. ತೀರ್ಥ ಪ್ರಸಾದವೆಂದು, ಅವರ ಮುನ್ನುಡಿ ಬೆನ್ನುಡಿಗಳಿಗಾಗಿ ಬಾಗಿಲು ಕಾಯುವುದನ್ನು ನಿಲ್ಲಿಸಿ. ದಲಿತರ ಇಂಥ ಸಾಂಸ್ಕೃತಿಕ ಚಳುವಳಿಗಳನ್ನು ದುರ್ಬಲಗೊಳಿಸುವ ಪುರೋಹಿತಶಾಹಿ ಜನ ಸದಾ ಸೋಗಿನಲ್ಲಿ ಹೇಗೋ ಬಂದು ಸೇರಿಬಿಡುತ್ತಾರೆ. ಇದೊಂದು ಕೊಳಕು ರಾಜಕೀಯ. ನಾವು ಸಮಕಾಲೀನ ಸಾಹಿತ್ಯದ ನಿಜ ವಾರಸುದಾರರು. ಈ ಪ್ರಗತಿ ಅವರಿಗೆ ಅಸಹನೀಯವೆನಿಸಿದೆ.

ಅವರ ಉಪದೇಶಗಳನ್ನು ಇಷ್ಟು ಸಾವಿರ ವರ್ಷ ಕೇಳಿದ್ದಾಗಿದೆ. ಇನ್ನು ಕೆಲವು ಸಾವಿರ ವರ್ಷಗಳವರೆಗೆ ಅವರು ಬಾಯಿ ಮುಚ್ಚಿ ಕಿವಿ ತೆರೆಯಲಿ. ನಾವು ಬಾಯಿ ಬಿಡೋಣ. ನಮ್ಮ ಸಾಚಾ ಸಂವೇದನೆಗಳನ್ನು ಸಾರೋಣ. ಇದರಿಂದಾದರೂ ಸಮಕಾಲೀನ ಸಾಹಿತ್ಯ ಸಂಪನ್ನವಾಗಲಿ, ಸತ್ವಶಾಲಿಯಾಗಲಿ. ನಾವು ಹೋದರೂ ನಮ್ಮ ಆರೋಗ್ಯಕರ ವಿಚಾರಗಳು ಯುವ ಜನಾಂಗದಲ್ಲಿ ಪ್ರಚಾರವಾಗಲಿ. ಪ್ರಾಮಾಣಿಕವಾದ ಸೃಜನಶೀಲ ಸಂವೇದನೆಗಳನ್ನು ಕಲಾತ್ಮಕವಾದ ಬರವಣಿಗೆಯಲ್ಲಿ ಹರಿಯಬಿಡೋಣ. ಬದುಕಿನ ವಾಸ್ತವಾಂಶಗಳನ್ನು, ಅಂತರಂಗ ತಟ್ಟುತ್ತಿರುವ ಸಮಕಾಲೀನ ಪ್ರಜ್ಞೆಯನ್ನು ಸಾಹಿತ್ಯ ಪ್ರಯೋಗಕ್ಕೆ ಗುರಿಪಡಿಸೋಣ. ದಿನ ನಿತ್ಯ ನೋಡುವ ವ್ಯಕ್ತಿ ಪ್ರಸಂಗಗಳನ್ನು, ಅದರ ಸಂಬಂಧದಲ್ಲೇ ತೋರುವ ಸಂಘರ್ಷಗಳನ್ನೂ ದ್ವಂದ್ವಗಳನ್ನೂ ಬಯಲಿಗೆಳೆಯೋಣ.

'ಸಮಕಾಲೀನ ಸಾಹಿತ್ಯ'ವನ್ನು ಆಧರಿಸಿ ಒಂದು ದಿನದ ಸಾಹಿತ್ಯ ಸಮ್ಮೇಳನವನ್ನು ಯುವ ಲೇಖಕರು ಏರ್ಪಡಿಸಿರುವುದು ತುಂಬ ಪ್ರಸ್ತುತವಾಗಿದೆ. ಇಡೀ ದಿನ ನಡೆಯುವ ಗೋಷ್ಠಿಗಳಲ್ಲೂ ಕವಿಗೋಷ್ಠಿಯಲ್ಲೂ ಅನೇಕ ಜನ ಹೊಸ ಲೇಖಕರು ಭಾಗವಹಿಸುತ್ತಿದ್ದಾರೆ. ಸಮಾನವಾದ ಸಾಹಿತ್ಯಾದರ್ಶದಿಂದ ಪ್ರೇರಿತರಾದ ಜನ ಒಂದೆಡೆ ಸೇರಿರುವುದು ಅರ್ಥಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಡಲಿ. ಇಂಥದೊಂದು ಮಹತ್ವದ ಹಾಗೂ ಮುಂದೊಮ್ಮೆ ಒಂದು ಐತಿಹಾಸಿಕ ಸಮಾವೇಶವೆಂದು ದಾಖಲಾಗಬಹುದಾದ ಈ ಸಮ್ಮೇಳನಕ್ಕೆ ಅಧ್ಯಕ್ಷಳನ್ನಾಗಿ ಆರಿಸಿ ನೀವು ತೋರಿಸಿರುವ ಗೌರವಕ್ಕೆ ಉಪಕೃತಳಾಗಿರುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ನಾನು ಸ್ಪರ್ಧಿಸುತ್ತಿದ್ದೇನೆಂಬ ಸುಳ್ಳು ಸುದ್ದಿಯನ್ನು ಹಬ್ಬಿಸುವ ಕಾರ್ಯದಲ್ಲಿ ನಿರತರಾದವರಿಗೆ ನನ್ನ ಸಹಾನುಭೂತಿ ತಿಳಿಸುತ್ತೇನೆ.

ಭಾವ ಭಾಷೆಗಳ ಅಪೂರ್ವ ಸಿದ್ಧಿ*

ಕೆ. ಎಸ್. ನರಸಿಂಹಸ್ವಾಮಿ

ಕಮಲಾ–ಹಂಪನಾ ದಂಪತಿಗಳು ಹೀಗೆ ಒಟ್ಟಿಗೆ ಇಲ್ಲಿ ಕುಳಿತಿರುವುದು ಹಸೆಮಣೆಗೆ ಕುಳಿತಂತೆ ಕಾಣುತ್ತದೆ. ಅವರ ಆರತಕ್ಷತೆಗೆ ಇಲ್ಲಿ ನಾವೆಲ್ಲಾ ಸೇರಿದಂತೆ ನನ್ನ ಕಣ್ಣಿಗೆ ಕಾಣುತ್ತಿದೆ. ಹಂಪನಾ ದಂಪತಿಗಳು ನನಗೆ ಬೇಕಾದವರು. ಬಹುಕಾಲದಿಂದ ಅವರು ನನಗೆ ಹತ್ತಿರದ ವರಾಗಿದ್ದಾರೆ. ಅಧ್ಯಾಪಕಿಯಾಗಿ, ವಾಗ್ಮಿಯಾಗಿ, ಲೇಖಕಿಯಾಗಿ ಶ್ರೀಮತಿ ಕಮಲಾ ಹಂಪನಾರವರು ಮಾಡಿರುವ ಕೆಲಸ ಅಸಾಮಾನ್ಯವಾದುದು. ನಿಜ ಜೀವನದಲ್ಲಿ ಸಂಭವಿಸುವ ಪರಮ ಸತ್ಯವನ್ನು ಚರ್ಚಿಸಲು ಅವರ ಲೇಖಣಿ ಪ್ರಯತ್ನಪಟ್ಟಿದೆ. ಸಾಮಾನ್ಯವಾಗಿ ಸ್ತ್ರೀಯರ ಬರವಣಿಗೆ ಪರಿಮಿತಿಯಾದುದು. ನಮ್ಮಲ್ಲಿ ಬರೆಯುವವರೆಲ್ಲ ಮಧ್ಯಮ ವರ್ಗ ದವರು. ಅವರು ಒಂದು ಮಿತಿಗೆ ಒಳಪಟ್ಟು ವೈಭವಿಸಿ ಬರೆಯುತ್ತಾರೆ. ಕಮಲಾರವರು ಇಂಥ ಸೀಮಿತಗಳನ್ನು ಮೀರುವ ಧೀಮಂತಿಕೆ ತೋರಿದ್ದಾರೆ. ಇವರಿಗೆ ಹೋಲಿಸುವ ಇನ್ನೊಬ್ಬ ಮಹಿಳೆ ಕನ್ನಡದಲ್ಲಿ ಇಲ್ಲ ಎಂದು ನನಗೆ ಖಚಿತವಾಗಿ ಗೊತ್ತಿದೆ. ದಿನದಿಂದ ದಿನಕ್ಕೆ ಅವರು ಬೆಳಗುತ್ತಿದ್ದಾರೆ. ಸೊಗಸಾದ ಭಾಷಣದಿಂದ ಜನಮನವನ್ನು ಅವರು ಹೇಗೆ ಸೆಳೆಯುತ್ತಾರೆ ಎಂಬುದನ್ನು ಅನುಭವಿಸಿದವರೇ ಬಲ್ಲರು. ಯಾವುದು ಅಂತಃಸಾಕ್ಷಿಗೆ ಸಮ್ಮತವೋ ಅದು ಧರ್ಮ. ಯಾವುದು ಇಲ್ಲದಿದ್ದರೆ ಜೀವನ ನಿರರ್ಥಕವೋ ಅದು ಧರ್ಮ.

ನಮ್ಮ ಅಳವಿಗೆ ಮೀರಿದ್ದು ಯಾವುದೋ ಇದೆ ಮತ್ತು ಪೂರ್ಣ ಸತ್ಯ ದೂರವೇ ಇರುತ್ತದೆ. ಕಮಲಾ ಹಂಪನಾ ಅವರು ಈ ಸೂಕ್ಷ್ಮಗಳನ್ನು ಅರಿತಿದ್ದಾರೆ. ಅವರ ಬರವಣಿಗೆ ಯಲ್ಲಿ ತೇಜಃಪುಂಜವಾದ, ಸಾತ್ವಿಕವಾದ ಮನೋಧರ್ಮ ಕಾಣುತ್ತದೆ. ಸ್ತ್ರೀ ಹೇಗೆ ಲೋಕ ನೋಡುತ್ತಾಳೆಂದು ಅವರ ಕಥೆಗಳಲ್ಲಿ ಕಾಣಬಹುದು. ಸ್ತ್ರೀ ಮತ್ತು ಪುರುಷ ಸೇರಿ ಈ ಬದುಕು ಅರ್ಥಪೂರ್ಣವಾಗುತ್ತಗೆ. ಕಥೆಗಳಲ್ಲಿ, ವಚನಗಳಲ್ಲಿ ಅವರು ತುಂಬ ಸುಂದರವಾದ ಭಾವನೆಗಳನ್ನು ಬೆಳಗಿಸಿದ್ದಾರೆ. ಸುಖ ಜೀವನ ನಡೆಸುತ್ತಿರುವ ಈ ಸಾತ್ವಿಕಶಿರೋಮಣಿ ತಮ್ಮ ಸರಳತೆ ಮತ್ತು ಪ್ರಾಮಾಣಿಕತೆಯಿಂದ ನಮ್ಮ ಸಾಹಿತ್ಯದ ವಲಯದಲ್ಲಿ ಎಲ್ಲರಿಗೂ ಪ್ರಿಯರಾಗಿದ್ದಾರೆ. Until someone is honest we get nothing clear. ಭಾವ ಭಾಷೆಗಳ ಅಪೂರ್ವ ಸಿದ್ಧಿಯನ್ನು ಅವರ ಲೇಖನಗಳಲ್ಲಿ ಕಾಣಬಹುದು. ಎಂಥ ಪ್ರಬುದ್ಧ ವಾದ ಮನೋಧರ್ಮ ಅವರದು ಎಂಬುದಕ್ಕೆ ಅವರ ಬರವಣಿಗೆಯಿಂದ ಒಂದು ಉದಾ ಹರಣೆಯನ್ನು ಕೊಡುತ್ತೇನೆ :

(ಧಾರವಾಡ ಜಿಲ್ಲೆಯ ಗದಗಿನಲ್ಲಿ ಶ್ರೀ ತೋಂಟದಾರ್ಯ ಜಗದ್ಗುರುಗಳ ಮಠದಲ್ಲಿ ಕಮಲಾ ಹಂಪನಾ ಅವರನ್ನು ಸನ್ಮಾನಿಸಿದಾಗ ಮಾಡಿದ ಭಾಷಣ)

"ದಲಿತ ಬಂಡಾಯ ಕಾವ್ಯ ಎಂದು ಹೇಳುವಾಗ ಕೆಲವರಿಗೆ ಜಾತಿನೆಲೆಯ ಮಾತುಗಳೆನಿಸ ಬಹುದು. ವಾಸ್ತವವಾಗಿ ಅದು ಸರಿಯಲ್ಲ. ದಲಿತರ ಕಾವ್ಯವೆಂದು ಹೇಳಿದಾಗ ದಲಿತ ವರ್ಗವೇ ದೃಷ್ಟಿಯಲ್ಲಿರುವುದೆಂಬುದು ನಿಜ. ಆದರೆ ಅದರಲ್ಲಿ ಕೇವಲ ಜಾತಿಯಷ್ಟೇ ಮುಖ್ಯ ಹಾಗೂ ಅಂತಿಮ ಆಗಿರುವುದಿಲ್ಲ. ಅದರ ಸುತ್ತ ಹತ್ತು ಸಂಗತಿಗಳು ಹೆಣೆದು ಕೊಂಡಿರುತ್ತವೆ. 'ನಾವು ಸೃಷ್ಟಿಸಿಕೊಂಡಿದ್ದು ಬ್ರಾಹ್ಮಣ ಸಂದರ್ಭ, ನಮ್ಮ ಸಂಸ್ಕೃತಿ ಯಲ್ಲಿರುವ ಎಲ್ಲ ಬ್ರಾಹ್ಮಣ ಅಂಶಗಳನ್ನು ನಿರ್ಮೂಲನ ಮಾಡಬೇಕು'...ಎಂದು ಪೂರ್ಣ ಚಂದ್ರ ತೇಜಸ್ವಿ ಗುಡುಗಿ ಬರೆಹಗಾರರ (೧೯೭೨ರಲ್ಲಿ) ಒಕ್ಕೂಟ ಹುಟ್ಟಿಕೊಂಡಿತು. ಪೂರ್ವ ಗ್ರಹ ಕೆಂಡಗಳನ್ನು ಸೆರಗಿಗೆ ಕಟ್ಟಿಕೊಂಡೇ ಹೆಜ್ಜೆಯಿಟ್ಟ ಒಕ್ಕೂಟ ಭಸ್ಮವಾಯಿತು. ಬ್ರಾಹ್ಮಣ ಬರೆದ ಕಾವ್ಯ ಚೆನ್ನಾಗಿದ್ದರೆ ಚೆನ್ನಾಗಿದೆ ಎನ್ನುತ್ತೇವೆ, ಇಲ್ಲವಾದರೆ ಇಲ್ಲ ಎನ್ನುತ್ತೇವೆ. ಅಷ್ಟೇ ಹೊರತು ಅದನ್ನು ಬ್ರಾಹ್ಮಣ ಕಾವ್ಯ ಎಂದು ಹೇಳುವುದಿಲ್ಲ. ಪಂಪನ ಕಾವ್ಯವನ್ನು ಅದು ಉತ್ಕೃಷ್ಟವೂ ಆಗಿರುವುದರಿಂದ, ಶ್ರೇಷ್ಠ ಕಾವ್ಯವೆನ್ನುತ್ತೇವೆಯೇ ಹೊರತು ಜೈನ ಎಂಬ ಕಾರಣಕ್ಕಾಗಿ ಅಲ್ಲ. ದಲಿತ ಬರೆದ ಕಾವ್ಯ ಚೆನ್ನಾಗಿದ್ದರೆ ಕಲಾತ್ಮಕ ವಾಗಿ ಯಶಸ್ವಿಯಾಗಿದ್ದರೆ ಹಾಗೆ ಹೇಳಬೇಕು. ಅದರ ಹೊರತು ಕೇವಲ ದಲಿತ ಎಂಬ ಕಾರಣಕ್ಕಾಗಿ ಅಲ್ಲ. ನವ್ಯ ಸಾಹಿತ್ಯ ಸಾಯಲು ಕಾರಣ ಅದು ಶ್ರೇಷ್ಠ ಕಾವ್ಯವಾಗಿರಲಿಲ್ಲ ಎಂದೇ ಹೊರತು ಕೇವಲ ನವ್ಯವಾಗಿತ್ತೆಂದಲ್ಲ. ನವ್ಯೋತ್ತರದ ದಲಿತ ಕವಿಗಳೂ ಬಂಡಾಯ ಕವಿಗಳೂ ಇದರಿಂದ ಪಾಠ ಕಲಿಯಬೇಕು."

ತಮ್ಮ ಸ್ವಂತ ಅನುಭವಗಳಿಂದ, ತಮ್ಮ ಜೀವನದ ನೆನಪುಗಳಿಂದ ಕೂಡಿದ ಅವರ ಬರವಣಿಗೆ ಶ್ಲಾಘನೀಯವಾದುದು. ದೈವ ಅವರಿಗೆ ಎಲ್ಲ ಸೌಭಾಗ್ಯವನ್ನೂ ಯಥೇಚ್ಛವಾಗಿ ಕರುಣಿಸ ಲೆಂದು ಹಾರೈಸುತ್ತೇನೆ.

ಖ್ಯಾತ ಕನ್ನಡತಿ*

ತೋಂಟದಾರ್ಯ ಜಗದ್ಗುರು

ಹನ್ನೊಂದು ವರುಷಗಳ ಹಿಂದೆ, ನಮ್ಮ ಪಟ್ಟಾಭಿಷೇಕದ ಸಂದರ್ಭದಲ್ಲಿ ಕಮಲಾ ಹಂಪನಾ ಅವರು ಬಂದು ಒಂದು ಗೋಷ್ಠಿಯಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿದ್ದರು. ಅಂದು ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರಿದ್ದ ಅಸಂಖ್ಯಾತ ಜನ ಕಮಲಾ ಹಂಪನಾ ಅವರ ವಾಗ್ವೈಖರಿಯನ್ನು, ವಿಷಯ ನಿರೂಪಣೆಯನ್ನು ಕೇಳಿ ಕೊಂಡಾಡಿದ್ದು ನನಗೆ ಚೆನ್ನಾಗಿ ನೆನಪಿದೆ. ಶ್ರೀಮತಿ ಕಮಲಾ ಹಂಪನಾ ಅವರು ಖ್ಯಾತ ಕನ್ನಡತಿ. ವಿದ್ಯಾರ್ಥಿಗಳೆಲ್ಲರ ಅಚ್ಚುಮೆಚ್ಚಿನ ಮೇಡಂ. ಕನ್ನಡಿಗರು ವಿಶೇಷವಾಗಿ ಗುರುತಿಸಬೇಕಾದ ವ್ಯಕ್ತಿತ್ವ ಉಳ್ಳವರು, ಚೆನ್ನಾಗಿ ಬದುಕಿದ ಹೆಣ್ಣು. ಜೀವನದಲ್ಲಿ ವ್ಯಕ್ತಿಗಳಿಗೆ ಗೌರವ ಕೊಡಲು ಸಿದ್ಧರಿರುತ್ತಾರೆ. ಆದರೆ ಗೌರವ ತೊಗೊಳ್ಳೊ ಯೋಗ್ಯತೆ ಇರುವವರು ಎಲ್ಲಿದ್ದಾರೆ, ಎಷ್ಟು ಜನರಿದ್ದಾರೆ? ಅಂಥವರು ಯಾವಾಗಲೂ ಕಡಿಮೆ ಇರುತ್ತಾರೆ. ಶ್ರೀಮತಿ ಕಮಲಾ ಹಂಪನಾ ಅವರು ಅಂಥ ವಿರಳರಲ್ಲಿ ಒಬ್ಬರು ; ಗಣ್ಯರು. ಹೊರಗೆ ಮಾತ್ರ ಒಳ್ಳೆಯ ವೇಷ ಭೂಷಣಗಳನ್ನು ಹಾಕಿಕೊಂಡು, ಮನಸ್ಸನ್ನು ಕೊಳಚೆ ಮಾಡಿಕೊಂಡ ಜನರನ್ನು ನಿತ್ಯ ಜೀವನದಲ್ಲಿ ನೋಡುತ್ತೇವೆ. ಶ್ರೀಮತಿ ಕಮಲಾರವರು ತಮ್ಮ ಕಥೆಗಳಲ್ಲಿ, ವಚನಗಳಲ್ಲಿ ಇಂಥ ನಾನಾ ಬಗೆಯ ಚಿತ್ರ ವಿಚಿತ್ರ ಜನರನ್ನು ಬಿಡಿಸಿ ತೋರಿಸಿದ್ದಾರೆ. 'ಬಿಂದಲಿ' ಎಂಬ ಹೆಸರಿನ ಅವರ ವಚನ ಸಂಕಲನವನ್ನು ಎಲ್ಲರೂ ತಪ್ಪದೆ ಅವಶ್ಯ ಓದಿ ಮೆಚ್ಚಬೇಕಾದುದು. ಅವರ ಸೇವೆ ಬರವಣಿಗೆ ದೀರ್ಘಕಾಲ ಕನ್ನಡಕ್ಕೆ ಸಿಗುವಂತಾಗಲೆಂದು ಹಾರೈಸುತ್ತೇನೆ.

(ಧಾರವಾಡ ಜಿಲ್ಲೆಯ ಗದುಗಿನ ತೋಂಟದಾರ್ಯ ಜಗದ್ಗುರುಗಳ ಮಠದಲ್ಲಿ ಪ್ರೊ|| ಕಮಲಾ ಹಂಪನಾ ಅವರನ್ನು ಸನ್ಮಾನಿಸಿದಾಗ ಮಾಡಿದ ಭಾಷಣ)

ಕಮಲಾಕ್ಷನನ್ನು ಕಂಡಾಗ

ವಿ. ನಾರಾಯಣಸ್ವಾಮಿ

ಜಲದಲ್ಲಿ ಹುಟ್ಟಿದ ಪುಷ್ಪಕ್ಕೆ ಜಲಜ ಎನ್ನುತ್ತಾರೆ. ಅದನ್ನೇ ನೀರಿನಲ್ಲಿ ಹುಟ್ಟಿದರೆ ನೀರಜ ಎನ್ನುತ್ತಾರೆ. ಜಲಜ ಎನ್ನಲಿ, ನೀರಜ ಎನ್ನಲಿ ಅದು ತಾವರೆಗೆ ಅನ್ವಯವಾಗುತ್ತದೆ. ತಾವರೆ ಕೆಂಪು ಬಣ್ಣದ್ದಾಗಿದ್ದು ಅದಕ್ಕೆ ಕೆಂದಾವರೆ ಎನ್ನುತ್ತಾರೆ. ಇದು ಕೆಸರಿನಲ್ಲಿ ಹುಟ್ಟುತ್ತದೆ. ಕೆಸರಿನಂಥ ಸ್ಥಳದಲ್ಲೂ ಉದಯಿಸುವ ಈ ಪುಷ್ಪಕ್ಕೆ ಕಮಲ ಎಂಬ ಹೆಸರಿದೆ. ಪುರಾಣ ಕತೆಗಳಲ್ಲಿ ದೇವಲೋಕದ ಪುಷ್ಪ ಎಂಬ ಹೆಸರೂ ಬರುತ್ತದೆ. ಅದಕ್ಕೆ ಪಾರಿಜಾತ ಎನ್ನುತ್ತಾರೆ. ಅದು ದೇವೇಂದ್ರನ ಅಮರಾವತಿಯಲ್ಲಿರುವ ಪುಷ್ಪ. ಶ್ರೀ ಕೃಷ್ಣನ ಪಾರಿಜಾತ ಕತೆ ಇದರ ಮೇಲೆ ರೂಪಿಸಲ್ಪಟ್ಟಿದ್ದು ಅದು ಪ್ರತಿಯೊಬ್ಬರಿಗೂ ತಿಳಿದಿರುವ ಪುರಾಣ ಕತೆಯಾಗಿದೆ.

ಪುಷ್ಪಗಳಿಗೆ ವಿಶೇಷ ಗೌರವ ಮತ್ತು ವಿಶೇಷ ಸ್ಥಾನವನ್ನು ಕೊಟ್ಟಿದ್ದೇವೆ. ಈ ಪ್ರಕೃತಿಯನ್ನು ಸೃಷ್ಟಿಸಿದ, ಪ್ರಕೃತಿಯಲ್ಲಿ ಪ್ರತಿಯೊಂದು ಸೃಷ್ಟಿಯಲ್ಲೂ ಪರಮಾತ್ಮನನ್ನು ಪೂಜಿಸಲು ನಾವು ಪುಷ್ಪಗಳನ್ನು ಉಪಯೋಗಿಸುತ್ತೇವೆ. ಆದ್ದರಿಂದ ಪುಷ್ಪಗಳಿಗೆ ವಿಶೇಷ ಮಹತ್ವ. 'ಹೂವಿನೊಡನೆ ನಾರು ಸ್ವರ್ಗಕ್ಕೆ ಸೇರಿತು' ಎಂಬ ಗಾದೆ ಈ ಪ್ರಾಮುಖ್ಯತೆಯಿಂದಾಗಿಯೇ ಪ್ರಚಲಿತವಾಗಿರಬಹುದು.

ಜೀವಿಗಳ ಸೃಷ್ಟಿಯಾಗುವ ಮೊದಲು ಕ್ಷೀರ ಸಮುದ್ರದಲ್ಲಿ ಆಲದ ಎಲೆಯ ಮೇಲೆ ಶಿಶುವೊಂದು ಮಲಗಿದ್ದು ತನ್ನ ಎಡಗಾಲ ಹೆಬ್ಬೆಟ್ಟನ್ನು ಚೀಪುತ್ತಾ ಕ್ಷೀರ ಸಾಗರದಲ್ಲಿ ತೇಲುತ್ತಿತ್ತು ಎಂಬುದು ಪುರಾಣ ಕತೆ. ಸೃಷ್ಟಿಕಾರ್ಯ ಪ್ರಾರಂಭವಾಗುವ ಮುನ್ನ ಕ್ಷೀರ ಸಾಗರದಲ್ಲಿ ಆದಿಶೇಷನ ಮೇಲೆ ಪವಡಿಸಿದ ನಾರಾಯಣನು ಬ್ರಹ್ಮನನ್ನು ಸೃಷ್ಟಿಸಿದ. ಬ್ರಹ್ಮನು ಬ್ರಹ್ಮಾಂಡವನ್ನೆಲ್ಲಾ ನೋಡುವ ಆಸೆಯನ್ನು ವ್ಯಕ್ತಪಡಿಸಿದ. ನಾರಾಯಣನು ಆತನನ್ನು ತನ್ನ ಬಾಯಿಂದ ನುಂಗಿದಾಗ ನಾರಾಯಣನ ಉದರದಲ್ಲಿ ಪ್ರವೇಶಿಸಿದ ಬ್ರಹ್ಮನು ಅಲ್ಲಿ ಅಖಿಲಾಂಡಕೋಟಿ ಬ್ರಹ್ಮಾಂಡಗಳನ್ನೆಲ್ಲಾ ಕಂಡು ವಿಸ್ಮಿತನಾದ. ಹೊರಗೆ ಬರಲು ದಾರಿ ಕಾಣದಿದ್ದಾಗ ನಾರಾಯಣನನ್ನು ಪ್ರಾರ್ಥಿಸಿದ. ಆಗ ನಾರಾಯಣನ ನಾಭಿಯಲ್ಲಿ ಕಮಲವೊಂದು ಸೃಷ್ಟಿಯಾಯಿತು. ಕಮಲನಾಡದ ನಾಭಿ ತೋರದಿಂದ ಹೊರಬಂದ ಬ್ರಹ್ಮನು ಕಮಲಾಸನದಲ್ಲಿ ಕುಳಿತ. ಎಲ್ಲ ಲೋಕಗಳನ್ನು ಎಲ್ಲ ಜೀವಿಗಳನ್ನು ತನ್ನ ಉದರದಲ್ಲಿಯೇ ರಕ್ಷಿಸಿಕೊಂಡಿರುವ ನಾರಾಯಣನಿಗೆ ನಮಿಸಿ ತನ್ನ ಕರ್ತವ್ಯದ ಬಗ್ಗೆ ಅಪ್ಪಣೆ ಕೇಳಿದಾಗ ನಾರಾಯಣನು ಅವನಿಗೆ ಜೀವಿಗಳ ಸೃಷ್ಟಿ ಕಾರ್ಯವನ್ನು ನೇಮಿಸುತ್ತಾನೆ. ಸೃಷ್ಟಿಕರ್ತನ

ಮೊದಲ ಶಿಶು ಬ್ರಹ್ಮನಾದರೆ ಅವನ ಸೃಷ್ಟಿಯ ಪುಷ್ಪ ಕಮಲ. ಅಂದರೆ ಬ್ರಹ್ಮನ ಸೃಷ್ಟಿ ಕಾರ್ಯ ಪ್ರಾರಂಭ. ಬ್ರಹ್ಮನ ಬಾಯಿಂದ ಒಬ್ಬ ಸುಂದರ ಕನ್ಯೆ ಜನಿಸುತ್ತಾಳೆ. ಆಕೆಯ ರೂಪ ಲಾವಣ್ಯಗಳಿಗೆ ಮನಸೋತ ಬ್ರಹ್ಮನು ಅವಳನ್ನೇ ವರಿಸುತ್ತಾನೆ. ಅವಳೇ ವಾಗ್ದೇವಿ. ಶಾರದೆ, ಸರಸ್ವತಿ ಎಂಬ ಹೆಸರುಗಳೂ ಈ ದೇವತೆಗುಂಟು. ಸಕಲ ಜೀವರಾಶಿಗಳ ವಾಕ್ ಶಕ್ತಿಯ ಸ್ವರೂಪವೇ ವಾಣಿ, ವಾಗ್ದೇವಿ. ಈಕೆಯ ವಾಹನ ಹಂಸ. ಈಕೆ ಕೂಡುವ ಪೀಠ ಕಮಲ. ನಾರಾಯಣನ ಪತ್ನಿ ರಮೆ ಅಥವಾ ಲಕ್ಷ್ಮಿ. ಆದ್ದರಿಂದಲೇ ಆತನು ರಮಾ ರಮಣ. ಆಕೆಯ ವಾಸಸ್ಥಾನ ನಾರಾಯಣನ ಹೃದಯ. ಆದರೆ ಆಕೆ ನಿಲ್ಲುವ ಅಥವಾ ಕೂಡುವ ಪೀಠ ಕಮಲ, ಈ ಪುರಾಣ ಕತೆಗಳಲ್ಲಿ ಯಾವುದು ನಿಜ ಯಾವುದು ಸುಳ್ಳು ಎಂಬ ವಿಷಯವನ್ನು ಚರ್ಚಿಸುವುದು ಇಲ್ಲಿ ಅನವಶ್ಯಕ. ಆದರೆ ಕಥೆಯಂತೂ ಇದೆ. ಕತೆಯಲ್ಲಿರುವ ಹಾಗೆ ನಿತ್ಯದಲ್ಲಿದೆಯೋ ಇಲ್ಲವೋ ಅದು ಬೇರೆ ವಿಷಯ. ಕತೆಯಲ್ಲಿರುವುದಂತೂ ನಿಜ.

ಕಲಾವಿದ ತನ್ನ ಕಲೆಯ ಕುಂಚದಲ್ಲಿ ದೇವರನ್ನು ಸೃಷ್ಟಿಸುತ್ತಾನೆ. ಪಾಪಿಗಳಾದ ಜನರು, ಜೀವಿಗಳು ಸದಾ ನೆಲೆಸಿರುವ ಈ ಭೂಮಿಯ ಮೇಲೆ ಭಗವಂತನನ್ನು ನಿರ್ಮಿಸಲು ಅವನಿಗೆ ಇಷ್ಟವಿಲ್ಲ. ಮತ್ತೆ ಸಮುದ್ರದಲ್ಲಿ ಅಥವಾ ನೀರಿನ ಮಧ್ಯದಲ್ಲಿ ದೇವರನ್ನು ನಿಲ್ಲಿಸಿದರೆ ಆ ದೇವರೆಲ್ಲಿ ಮುಳುಗಿಬಿಡುವನೋ ಎಂಬ ಭಯದಿಂದಲೋ ಆ ದೇವರನ್ನು ನಿಲ್ಲಿಸುವುದಕ್ಕೆ ತನ್ನ ಕುಂಚದಿಂದ ಕಮಲವನ್ನು ಸೃಷ್ಟಿಸಿ ಅದರ ಮೇಲೆ ದೇವರನ್ನು ಕೂರಿಸುತ್ತಾನೆ. ಸಾಮಾನ್ಯವಾಗಿ ಎಲ್ಲ ದೇವಸ್ಥಾನಗಳಲ್ಲಿ, ಪುಣ್ಯಕ್ಷೇತ್ರಗಳಲ್ಲಿ ದೇವರ ವಿಗ್ರಹದ ಪೀಠದ ಸುತ್ತ ಕಮಲದ ದಳಗಳನ್ನು ಬಿಡಿಸಿರುವುದನ್ನು ಯಾರೂ ಕಾಣಬಹುದಾದಂಥ ಒಂದು ಸಾಮಾನ್ಯ ದೃಶ್ಯ. ಆದ್ದರಿಂದಲೇ ಏನೋ ಕಮಲಕ್ಕೆ 'ಪುಷ್ಪರಾಜ' ಎನ್ನುತ್ತಾರೆ. ಮೇಲಿನವು ಪುರಾಣದಲ್ಲಿ, ಕತೆಗಳಲ್ಲಿ, ನಿಜ ಜೀವದದಲ್ಲಿನ ದೇಗುಲಗಳಲ್ಲಿ ಕಮಲ ಪುಷ್ಪದ ಬಗ್ಗೆ ಕಂಡುಬರುವ ವಿಷಯಗಳು.

ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಪಂಡಿತ ಜವಹರಲಾಲ್ ನೆಹರು ಅವರು ನಾಡಿನ ಸ್ವಾತಂತ್ರ್ಯಕ್ಕಾಗಿ ಮಹಾತ್ಮಾಜಿಯವರ ಜೊತೆಯಲ್ಲಿ ಸ್ವಾತಂತ್ರ್ಯ ಸಮರಕ್ಕೆ ಇಳಿದು ದೇಶಕ್ಕಾಗಿ ಅವರು ಮಾಡಿದ ತ್ಯಾಗ ಬಲಿದಾನಗಳು ಪ್ರತಿಯೊಬ್ಬ ಭಾರತೀಯನ ನೆನಪಿನಲ್ಲೂ ಅಚ್ಚಳಿಯದೆ ಉಳಿದಿದೆ. ಅದರಂತೇ ಪ್ರತಿಯೊಬ್ಬನ ಬಾಯಲ್ಲಿಯೂ ಗೌರವಪೂರ್ವಕವಾಗಿಯೇ ಬರುತ್ತಿದ್ದ ಇನ್ನೊಂದು ಹೆಸರು ಕಮಲ ನೆಹರು. ಅಂದರೆ ಪಂಡಿತ ಜವಹರಲಾಲ ನೆಹರು ಅವರ ಧರ್ಮಪತ್ನಿ. ಇಂದಿರಾ ಗಾಂಧಿಯವರ ತಾಯಿ. ಜವಹರಲಾಲ್‌ರು ಜೈಲಿನಲ್ಲಿದ್ದಾಗ ಸ್ತ್ರೀ ಶಕ್ತಿಯನ್ನು ಸಂಘಟಿಸಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರು ಕಡಿಮೆಯಿಲ್ಲ ಎಂದು ತೋರಿಸಲು ಕಮಲ ನೆಹರು ಸಹ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದರು. ಪತಿ ಸೆರೆವಾಸದಲ್ಲಿದ್ದಾಗ ಅವರು ದೈವಾಧೀನರಾದರು. ವೀರ ಪತ್ನಿಯಾಗಿ, ವೀರ ನಾಯಕಿಯಾಗಿ, ವೀರ ಮಾತೆಯಾಗಿ ಮುಂದಿನ ಪ್ರಜೆಗಳಿಗೆ ದಾರಿದೀಪವಾಗಿ, ಭಾರತ ಮಾತೆಯ ಪ್ರಿಯ ಪುತ್ರಿಯಾಗಿ ಕಮಲಾ ನೆಹರು ತಮ್ಮ ಇಹಜೀವನವನ್ನು ಮುಗಿಸಿದರು. ಇದರ ಫಲವಾಗಿಯೇ ಇಂದು ಕಮಲಾ ನೆಹರು ಹೆಸರಿನಲ್ಲಿ ಅನೇಕ ವಿದ್ಯಾಸಂಸ್ಥೆಗಳ, ಸಂಘ ಸಂಸ್ಥೆಗಳ ಹೆಸರುಗಳನ್ನು ನಾವು ನೋಡುತ್ತಿದ್ದೇವೆ.

ಕಮಲಾ ಎಂಬ ಹೆಸರಿಗೂ ನಮ್ಮ ಕುಟುಂಬದವರಿಗೂ (ಲೇಖಿಕರ) ಅತಿ ಹತ್ತಿರದ ರಕ್ತ ಸಂಬಂಧ. ಕಮಲ ನಮ್ಮೆಲ್ಲರ ನೆಚ್ಚಿನ, ಮುದ್ದಿನ ತಂಗಿಯಾಗಿದ್ದವಳು. ಮನೆಯಲ್ಲಿ ಎಲ್ಲರ ಪ್ರೀತಿ ವಿಶ್ವಾಸಗಳ ದ್ಯೋತಕವಾಗಿ ಬೆಳೆದು ತನ್ನೆಲ್ಲ ಅಣ್ಣಂದಿರ ಅಕ್ಕಂದಿರ ಪ್ರೀತಿಯ ತಂಗಿಯಾಗಿದ್ದವಳು. ಎಷ್ಟೇ ಕೋಪದ ಅಥವಾ ಬೇಸರದ ಸನ್ನಿವೇಶದಲ್ಲಿದ್ದರೂ ತನ್ನ ಚೂಟಿಯ ಮಾತುಗಳಿಂದ ಎಲ್ಲರನ್ನೂ ಪೀಡಿಸಿ, ನಗಿಸಿ ಕಾಡಿ ಇದ್ದ ಕೋಪ ತಾಪಗಳನ್ನೆಲ್ಲಾ ಕ್ಷಣಾರ್ಧದಲ್ಲಿ ಮರೆಯುವಂತೆ ಮಾಡುತ್ತಿದ್ದಳು. ಈ ರೀತಿ ಪ್ರೇಮ ಪುತ್ಥಳಿಯಾಗಿ ಬೆಳೆದ ತಂಗಿ ಕಮಲ ಈಗಿಲ್ಲ. ಅವಳ ನೆನಪು ಮಾತ್ರ ಇಂಗಿಲ್ಲ ; ಇಂಗುವುದೂ ಇಲ್ಲ. ಯಾವುದೊ ಜನ್ಮಜನ್ಮಾಂತರದ ಬಂಧ ಅನುಬಂಧಗಳು ಕಮಲಳ ಹೆಸರಿನಲ್ಲಿ ನಮಗೆ ಒಂದಲ್ಲ ಒಂದು ರೀತಿಯಲ್ಲಿ ಪ್ರೇರಣೆಯನ್ನು ಕೊಡುತ್ತಲೇ ಇರುತ್ತವೆ. ಕಮಲ ನಮ್ಮ ಕುಟುಂಬದಲ್ಲಿ ಇಲ್ಲಿಯವರೆಗೆ ಒಂದು ಪ್ರೇರಕ ವ್ಯಕ್ತಿ, ಶಕ್ತಿ. ಇದು ವೈಯಕ್ತಿಕವಾದ ಭಾವನೆಗಳು. ವೈಯಕ್ತಿಕ ಭಾವನೆಗೂ ಇತರೆ ಭಾವನೆಗಳಿಗೂ ಅರ್ಥಾತ್ ಸಂಬಂಧ ಇರಲಾರದು. ಆದರೂ ಕಮಲ ಎಂಬ ಮೂರಕ್ಷರದ ಹೆಸರು ಕಿವಿಗೆ ಬಿದ್ದೊಡನೆ ನೆನಪಾಗುವುದು ನನ್ನ ತಂಗಿ ಕಮಲಳ ರೂಪವೇ ಎದುರು ನಿಂತಂತೆ ಭಾಸವಾಗುತ್ತದೆ.

ಡಾ॥ ಹಂಪನಾ ಅವರು ನನಗೆ ಇತ್ತೀಚೆಗೆ ಪರಿಚಯವಾದ ಹಿರಿಯ ಸ್ನೇಹಿತರು. ಅವರ ಪತ್ನಿ ಶ್ರೀಮತಿ ಕಮಲಾ ಹಂಪನಾ ಅವರ ಹೆಸರು ಕೇಳಿದ್ದೇನಷ್ಟೆ ಆದರೂ ಅವರನ್ನು ಭೇಟಿ ಮಾಡುವ ಅವಕಾಶ ಇತ್ತೀಚಿನವರೆಗೆ ಒದಗಿರಲಿಲ್ಲ. ಅವರನ್ನು ಮೊದಲು ನೋಡಿದ್ದು ಅವರ ಅಭಿಮಾನಿಗಳು ಸಂಯೋಜಿಸಿದ್ದ 'ಅಭಿನಂದನ' ಸಮಾರಂಭದಲ್ಲಿ. ಆ ದಿನ ವೇದಿಕೆಯ ಮೇಲೆ ಎಲ್ಲರ ನೋಟದ ಕೇಂದ್ರ ಬಿಂದುವಾಗಿ ತುಂಬಾ ಸರಳತೆಯಿಂದ ಕೂಡಿದ ವ್ಯಕ್ತಿಯಾಗಿ ಕಂಗೊಳಿಸುತ್ತಿದ್ದರು. ಆಗ ನನ್ನ ಮನಸ್ಸಿನಲ್ಲಿ ಮೂಡಿದ ಭಾವನೆ ಕಮಲ ಎಂಬ ತಂಗಿ ಹೋದರೂ ಕಮಲ ಎಂಬ ಅಕ್ಕನ ಪರಿಚಯವಾಯಿತಲ್ಲ ಎಂಬ ಸಂತೋಷ.

ಅಂದಿನಿಂದ ಕಮಲಕ್ಕನನ್ನು ಕಂಡಾಗಲೆಲ್ಲ ಏನೋ ಒಂದು ಬಗೆಯ ಅಭಿಮಾನ, ಗೌರವ ಮನಸ್ಸಿನಲ್ಲಿ ತಾನೇತಾನಾಗಿ ಮೂಡಿಬರುತ್ತದೆ. ವಿಚಾರಿಸಿದಾಗ ತಿಳಿದ ವಿಷಯ ಅವರು ನಿಮ್ಮ ವರ್ಗಕ್ಕೆ ಸೇರಿದ ಅಂದರೆ, ಹಿಂದುಳಿದ ಪಂಗಡಕ್ಕೆ ಸೇರಿದ ಕುಟುಂಬದಿಂದ ಬಂದಿರುವ ಕೆಲವೇ ವಿದ್ಯಾವಂತ ಮಹಿಳೆಯರಲ್ಲಿ ಅಗ್ರಹಣ್ಯರೆಂಬುದು. ಕಾಡು ಮೇಡಿನ ಜನಗಳ ಮಧ್ಯದಲ್ಲಿ ಬೆಳೆದ ಈ ಕಮಲ ಪುಷ್ಪ ತನ್ನ ಸೌರಭವನ್ನು ನಾಡಿನಾದ್ಯಂತ ಬೀರುವಷ್ಟು ಪ್ರತಿಭೆಯನ್ನು ಹೊಂದಿರುವುದು ಆಚ್ಚರಿಯ ಮಾತಾದರೂ ಅದನ್ನು ಪ್ರತಿಯೊಬ್ಬರೂ ಬಾಳಿಸಿ, ಪೋಷಿಸಿ, ಬೆಳೆಸಿ ಮತ್ತಷ್ಟು ಪ್ರವರ್ಧಮಾನಕ್ಕೆ ಬರುವಂತೆ ಪ್ರೋತ್ಸಾಹಿಸುವುದು ಪ್ರತಿಯೊಬ್ಬ ಲೇಖಕರ ಆದ್ಯ ಕರ್ತವ್ಯವಾಗಿದೆ.

ಕನ್ನಡ ಲೇಖಕಿಯರಲ್ಲಿ ಕಾದಂಬರಿ, ಕತೆ, ಕವನಗಳನ್ನು ಬರೆಯುವವರೇ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಈ ಎಲ್ಲ ಲೇಖಕಿಯರು ತಮ್ಮದೇ ಆದ ಅಭಿಮಾನಿಗಳನ್ನು ಓದುಗರನ್ನು ಗಳಿಸಿಕೊಂಡಿರುತ್ತಾರೆ. ಅದು ಅವರ ಕೃಷಿಯ ಫಲ. ಅವರ ಬರಹದ ತಪಸ್ಸಿನ ಪ್ರತಿಫಲ. ಅಂತೆಯೇ ಕಮಲಕ್ಕನವರೂ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿಮರ್ಶಾತ್ಮಕವಾಗಿ, ವಿಚಾರ ಪ್ರಚೋದಿತವಾದ ಮತ್ತು ಹರಿತವಾದ ಅದರಲ್ಲಿಯೂ ಸೂಕ್ಷ್ಮಾರ್ಥಗರ್ಭಿತ ಚಾಟಿ ಏಟಿನಂತೆ ಬರೆಯುವ ಲೇಖನಿಯನ್ನು ಪಡೆದಿದ್ದಾರೆ. ಈ ಬಗೆಯ

ಖ್ಯಾತ ಕನ್ನಡತಿ*

ತೋಂಟದಾರ್ಯ ಜಗದ್ಗುರು

ಹನ್ನೊಂದು ವರುಷಗಳ ಹಿಂದೆ, ನಮ್ಮ ಪಟ್ಟಾಭಿಷೇಕದ ಸಂದರ್ಭದಲ್ಲಿ ಕಮಲಾ ಹಂಪನಾ ಅವರು ಬಂದು ಒಂದು ಗೋಷ್ಠಿಯಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡಿದ್ದರು. ಅಂದು ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರಿದ್ದ ಅಸಂಖ್ಯಾತ ಜನ ಕಮಲಾ ಹಂಪನಾ ಅವರ ವಾಗ್ವೈಖರಿಯನ್ನು, ವಿಷಯ ನಿರೂಪಣೆಯನ್ನು ಕೇಳಿ ಕೊಂಡಾಡಿದ್ದು ನನಗೆ ಚೆನ್ನಾಗಿ ನೆನಪಿದೆ. ಶ್ರೀಮತಿ ಕಮಲಾ ಹಂಪನಾ ಅವರು ಖ್ಯಾತ ಕನ್ನಡತಿ. ವಿದ್ಯಾರ್ಥಿಗಳೆಲ್ಲರ ಅಚ್ಚುಮೆಚ್ಚಿನ ಮೋಡಂ. ಕನ್ನಡಿಗರು ವಿಶೇಷವಾಗಿ ಗುರುತಿಸಬೇಕಾದ ವ್ಯಕ್ತಿತ್ವ ಉಳ್ಳವರು, ಚೆನ್ನಾಗಿ ಬದುಕಿದ ಹೆಣ್ಣು. ಜೀವನದಲ್ಲಿ ವ್ಯಕ್ತಿಗಳಿಗೆ ಗೌರವ ಕೊಡಲು ಸಿದ್ಧರಿರುತ್ತಾರೆ. ಆದರೆ ಗೌರವ ತೊಗೊಳ್ಳೊ ಯೋಗ್ಯತೆ ಇರುವವರು ಎಲ್ಲಿದ್ದಾರೆ, ಎಷ್ಟು ಜನರಿದ್ದಾರೆ? ಅಂಥವರು ಯಾವಾಗಲೂ ಕಡಿಮೆ ಇರುತ್ತಾರೆ. ಶ್ರೀಮತಿ ಕಮಲಾ ಹಂಪನಾ ಅವರು ಅಂಥ ವಿರಳರಲ್ಲಿ ಒಬ್ಬರು; ಗಣ್ಯರು. ಹೊರಗೆ ಮಾತ್ರ ಒಳ್ಳೆಯ ವೇಷ ಭೂಷಣಗಳನ್ನು ಹಾಕಿಕೊಂಡು, ಮನಸ್ಸನ್ನು ಕೊಳಚೆ ಮಾಡಿಕೊಂಡ ಜನರನ್ನು ನಿತ್ಯ ಜೀವನದಲ್ಲಿ ನೋಡುತ್ತೇವೆ.. ಶ್ರೀಮತಿ ಕಮಲಾರವರು ತಮ್ಮ ಕಥೆಗಳಲ್ಲಿ, ವಚನಗಳಲ್ಲಿ ಇಂಥ ನಾನಾ ಬಗೆಯ ಚಿತ್ರ ವಿಚಿತ್ರ ಜನರನ್ನು ಬಿಡಿಸಿ ತೋರಿಸಿದ್ದಾರೆ. 'ಬಿಂದಲಿ' ಎಂಬ ಹೆಸರಿನ ಅವರ ವಚನ ಸಂಕಲನವನ್ನು ಎಲ್ಲರೂ ತಪ್ಪದೆ ಅವಶ್ಯ ಓದಿ ಮೆಚ್ಚಬೇಕಾದುದು. ಅವರ ಸೇವೆ ಬರವಣಿಗೆ ದೀರ್ಘಕಾಲ ಕನ್ನಡಕ್ಕೆ ಸಿಗುವಂತಾಗಲೆಂದು ಹಾರೈಸುತ್ತೇನೆ.

(ಧಾರವಾಡ ಜಿಲ್ಲೆಯ ಗದುಗಿನ ತೋಂಟದಾರ್ಯ ಜಗದ್ಗುರುಗಳ ಮಠದಲ್ಲಿ ಪ್ರೊ|| ಕಮಲಾ ಹಂಪನಾ ಅವರನ್ನು ಸನ್ಮಾನಿಸಿದಾಗ ಮಾಡಿದ ಭಾಷಣ)

ಕಮಲಕ್ಕನನ್ನು ಕಂಡಾಗ

ವಿ. ನಾರಾಯಣಸ್ವಾಮಿ

ಜಲದಲ್ಲಿ ಹುಟ್ಟಿದ ಪುಷ್ಪಕ್ಕೆ ಜಲಜ ಎನ್ನುತ್ತಾರೆ. ಅದನ್ನೇ ನೀರಿನಲ್ಲಿ ಹುಟ್ಟಿದರೆ ನೀರಜ ಎನ್ನುತ್ತಾರೆ. ಜಲಜ ಎನ್ನಲಿ, ನೀರಜ ಎನ್ನಲಿ ಅದು ತಾವರೆಗೆ ಅನ್ವಯವಾಗುತ್ತದೆ. ತಾವರೆ ಕೆಂಪು ಬಣ್ಣದ್ದಾಗಿದ್ದು ಅದಕ್ಕೆ ಕೆಂದಾವರೆ ಎನ್ನುತ್ತಾರೆ. ಇದು ಕೆಸರಿನಲ್ಲಿ ಹುಟ್ಟುತ್ತದೆ. ಕೆಸರಿನಂಥ ಸ್ಥಳದಲ್ಲೂ ಉದಯಿಸುವ ಈ ಪುಷ್ಪಕ್ಕೆ ಕಮಲ ಎಂಬ ಹೆಸರಿದೆ. ಪುರಾಣ ಕತೆಗಳಲ್ಲಿ ದೇವಲೋಕದ ಪುಷ್ಪ ಎಂಬ ಹೆಸರೂ ಬರುತ್ತದೆ. ಅದಕ್ಕೆ ಪಾರಿಜಾತ ಎನ್ನುತ್ತಾರೆ. ಅದು ದೇವೇಂದ್ರನ ಅಮರಾವತಿಯಲ್ಲಿರುವ ಪುಷ್ಪ. ಶ್ರೀ ಕೃಷ್ಣನ ಪಾರಿಜಾತ ಕತೆ ಇದರ ಮೇಲೆ ರೂಪಿಸಲ್ಪಟ್ಟಿದ್ದು ಅದು ಪ್ರತಿಯೊಬ್ಬರಿಗೂ ತಿಳಿದಿರುವ ಪುರಾಣ ಕತೆಯಾಗಿದೆ.

ಪುಷ್ಪಗಳಿಗೆ ವಿಶೇಷ ಗೌರವ ಮತ್ತು ವಿಶೇಷ ಸ್ಥಾನವನ್ನು ಕೊಟ್ಟಿದ್ದೇವೆ. ಈ ಪ್ರಕೃತಿಯನ್ನು ಸೃಷ್ಟಿಸಿದ, ಪ್ರಕೃತಿಯಲ್ಲಿ ಪ್ರತಿಯೊಂದು ಸೃಷ್ಟಿಯಲ್ಲೂ ಪರಮಾತ್ಮನನ್ನು ಪೂಜಿಸಲು ನಾವು ಪುಷ್ಪಗಳನ್ನು ಉಪಯೋಗಿಸುತ್ತೇವೆ. ಆದ್ದರಿಂದ ಪುಷ್ಪಗಳಿಗೆ ವಿಶೇಷ ಮಹತ್ವ. 'ಹೂವಿನೊಡನೆ ನಾರು ಸ್ವರ್ಗಕ್ಕೆ ಸೇರಿತು' ಎಂಬ ಗಾದೆ ಈ ಪ್ರಾಮುಖ್ಯತೆಯಿಂದಾಗಿಯೇ ಪ್ರಚಲಿತವಾಗಿರಬಹುದು.

ಜೀವಿಗಳ ಸೃಷ್ಟಿಯಾಗುವ ಮೊದಲು ಕ್ಷೀರ ಸಮುದ್ರದಲ್ಲಿ ಆಲದ ಎಲೆಯ ಮೇಲೆ ಶಿಶುವೊಂದು ಮಲಗಿದ್ದು ತನ್ನ ಎಡಗಾಲ ಹೆಬ್ಬೆಟ್ಟನ್ನು ಚೀಪುತ್ತಾ ಕ್ಷೀರ ಸಾಗರದಲ್ಲಿ ತೇಲುತ್ತಿತ್ತು ಎಂಬುದು ಪುರಾಣ ಕತೆ. ಸೃಷ್ಟಿಕಾರ್ಯ ಪ್ರಾರಂಭವಾಗುವ ಮುನ್ನ ಕ್ಷೀರ ಸಾಗರದಲ್ಲಿ ಆದಿಶೇಷನ ಮೇಲೆ ಪವಡಿಸಿದ ನಾರಾಯಣನು ಬ್ರಹ್ಮನನ್ನು ಸೃಷ್ಟಿಸಿದ. ಬ್ರಹ್ಮನು ಬ್ರಹ್ಮಾಂಡವನ್ನೆಲ್ಲಾ ನೋಡುವ ಆಸೆಯನ್ನು ವ್ಯಕ್ತಪಡಿಸಿದ. ನಾರಾಯಣನು ಆತನನ್ನು ತನ್ನ ಬಾಯಿಂದ ನುಂಗಿದಾಗ ನಾರಾಯಣನ ಉದರದಲ್ಲಿ ಪ್ರವೇಶಿಸಿದ ಬ್ರಹ್ಮನು ಅಲ್ಲಿ ಅಖಿಲಾಂಡಕೋಟಿ ಬ್ರಹ್ಮಾಂಡಗಳನ್ನೆಲ್ಲಾ ಕಂಡು ವಿಸ್ಮಿತನಾದ. ಹೊರಗೆ ಬರಲು ದಾರಿ ಕಾಣದಿದ್ದಾಗ ನಾರಾಯಣನನ್ನು ಪ್ರಾರ್ಥಿಸಿದ. ಆಗ ನಾರಾಯಣನ ನಾಭಿಯಲ್ಲಿ ಕಮಲವೊಂದು ಸೃಷ್ಟಿಯಾಯಿತು. ಕಮಲನಾಳದ ನಾಭಿ ತೋರದಿಂದ ಹೊರಬಂದ ಬ್ರಹ್ಮನು ಕಮಲಾಸನದಲ್ಲಿ ಕುಳಿತ. ಎಲ್ಲ ಲೋಕಗಳನ್ನು ಎಲ್ಲ ಜೀವಿಗಳನ್ನು ತನ್ನ ಉದರದಲ್ಲಿಯೇ ರಕ್ಷಿಸಿಕೊಂಡಿರುವ ನಾರಾಯಣನಿಗೆ ನಮಿಸಿ ತನ್ನ ಕರ್ತವ್ಯದ ಬಗ್ಗೆ ಅಪ್ಪಣೆ ಕೇಳಿದಾಗ ನಾರಾಯಣನು ಅವನಿಗೆ ಜೀವಿಗಳ ಸೃಷ್ಟಿ ಕಾರ್ಯವನ್ನು ನೇಮಿಸುತ್ತಾನೆ. ಸೃಷ್ಟಿಕರ್ತನ

ಮೊದಲ ಶಿಶು ಬ್ರಹ್ಮನಾದರೆ ಅವನ ಸೃಷ್ಟಿಯ ಪುಷ್ಪ ಕಮಲ. ಅಂದರೆ ಬ್ರಹ್ಮನ ಸೃಷ್ಟಿ ಕಾರ್ಯ ಪ್ರಾರಂಭ. ಬ್ರಹ್ಮನ ಬಾಯಿಂದ ಒಬ್ಬ ಸುಂದರ ಕನ್ಯೆ ಜನಿಸುತ್ತಾಳೆ. ಆಕೆಯ ರೂಪ ಲಾವಣ್ಯಗಳಿಗೆ ಮನಸೋತ ಬ್ರಹ್ಮನು ಅವಳನ್ನೇ ವರಿಸುತ್ತಾನೆ. ಅವಳೇ ವಾಗ್ದೇವಿ. ಶಾರದೆ, ಸರಸ್ವತಿ ಎಂಬ ಹೆಸರುಗಳೂ ಈ ದೇವತೆಗುಂಟು. ಸಕಲ ಜೀವರಾಶಿಗಳ ವಾಕ್ ಶಕ್ತಿಯ ಸ್ವರೂಪವೇ ವಾಣಿ, ವಾಗ್ದೇವಿ. ಈಕೆಯ ವಾಹನ ಹಂಸ. ಈಕೆ ಕೂಡುವ ಪೀಠ ಕಮಲ. ನಾರಾಯಣನ ಪತ್ನಿ ರಮೆ ಅಥವಾ ಲಕ್ಷ್ಮಿ. ಆದ್ದರಿಂದಲೇ ಆತನು ರಮಾ ರಮಣ. ಆಕೆಯ ವಾಸಸ್ಥಾನ ನಾರಾಯಣನ ಹೃದಯ. ಆದರೆ ಆಕೆ ನಿಲ್ಲುವ ಅಥವಾ ಕೂಡುವ ಪೀಠ ಕಮಲ. ಈ ಪುರಾಣ ಕತೆಗಳಲ್ಲಿ ಯಾವುದು ನಿಜ ಯಾವುದು ಸುಳ್ಳು ಎಂಬ ವಿಷಯವನ್ನು ಚರ್ಚಿಸುವುದು ಇಲ್ಲಿ ಅನವಶ್ಯಕ. ಆದರೆ ಕಥೆಯಂತೂ ಇದೆ. ಕತೆಯಲ್ಲಿರುವ ಹಾಗೆ ನಿತ್ಯದಲ್ಲಿದೆಯೋ ಇಲ್ಲವೋ ಅದು ಬೇರೆ ವಿಷಯ. ಕತೆಯಲ್ಲಿರುವುದಂತೂ ನಿಜ.

ಕಲಾವಿದ ತನ್ನ ಕಲೆಯ ಕುಂಚದಲ್ಲಿ ದೇವರನ್ನು ಸೃಷ್ಟಿಸುತ್ತಾನೆ. ಪಾಪಿಗಳಾದ ಜನರು, ಜೀವಿಗಳು ಸದಾ ನೆಲೆಸಿರುವ ಈ ಭೂಮಿಯ ಮೇಲೆ ಭಗವಂತನನ್ನು ನಿರ್ಮಿಸಲು ಅವನಿಗೆ ಇಷ್ಟವಿಲ್ಲ. ಮತ್ತೆ ಸಮುದ್ರದಲ್ಲಿ ಅಥವಾ ನೀರಿನ ಮಧ್ಯದಲ್ಲಿ ದೇವರನ್ನು ನಿಲ್ಲಿಸಿದರೆ ಆ ದೇವರೆಲ್ಲಿ ಮುಳುಗಿಬಿಡುವನೋ ಎಂಬ ಭಯದಿಂದಲೋ ಆ ದೇವರನ್ನು ನಿಲ್ಲಿಸುವುದಕ್ಕೆ ತನ್ನ ಕುಂಚದಿಂದ ಕಮಲವನ್ನು ಸೃಷ್ಟಿಸಿ ಅದರ ಮೇಲೆ ದೇವರನ್ನು ಕೂರಿಸುತ್ತಾನೆ. ಸಾಮಾನ್ಯವಾಗಿ ಎಲ್ಲ ದೇವಸ್ಥಾನಗಳಲ್ಲಿ, ಪುಣ್ಯಕ್ಷೇತ್ರಗಳಲ್ಲಿ ದೇವರ ವಿಗ್ರಹದ ಪೀಠದ ಸುತ್ತ ಕಮಲದ ದಳಗಳನ್ನು ಬಿಡಿಸಿರುವುದನ್ನು ಯಾರೂ ಕಾಣಬಹುದಾದಂಥ ಒಂದು ಸಾಮಾನ್ಯ ದೃಶ್ಯ. ಆದ್ದರಿಂದಲೇ ಏನೋ ಕಮಲಕ್ಕೆ 'ಪುಷ್ಪರಾಜ' ಎನ್ನುತ್ತಾರೆ. ಮೇಲಿನವು ಪುರಾಣದಲ್ಲಿ, ಕತೆಗಳಲ್ಲಿ, ನಿಜ ಜೀವದಲ್ಲಿನ ದೇಗುಲಗಳಲ್ಲಿ ಕಮಲ ಪುಷ್ಪದ ಬಗ್ಗೆ ಕಂಡುಬರುವ ವಿಷಯಗಳು.

ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಪಂಡಿತ ಜವಹರಲಾಲ್ ನೆಹರು ಅವರು ನಾಡಿನ ಸ್ವಾತಂತ್ರ್ಯಕ್ಕಾಗಿ ಮಹಾತ್ಮಾಜಿಯವರ ಜೊತೆಯಲ್ಲಿ ಸ್ವಾತಂತ್ರ್ಯ ಸಮರಕ್ಕೆ ಇಳಿದು ದೇಶಕ್ಕಾಗಿ ಅವರು ಮಾಡಿದ ತ್ಯಾಗ ಬಲಿದಾನಗಳು ಪ್ರತಿಯೊಬ್ಬ ಭಾರತೀಯನ ನೆನಪಿನಲ್ಲೂ ಅಚ್ಚಳಿಯದೆ ಉಳಿದಿದೆ. ಅದರಂತೇ ಪ್ರತಿಯೊಬ್ಬನ ಬಾಯಲ್ಲಿಯೂ ಗೌರವಪೂರ್ವಕವಾಗಿಯೇ ಬರುತ್ತಿದ್ದ ಇನ್ನೊಂದು ಹೆಸರು ಕಮಲ ನೆಹರು. ಅಂದರೆ ಪಂಡಿತ ಜವಹರಲಾಲ ನೆಹರು ಅವರ ಧರ್ಮಪತ್ನಿ. ಇಂದಿರಾ ಗಾಂಧಿಯವರ ತಾಯಿ. ಜವಹರಲಾಲ್‌ರು ಜೈಲಿನಲ್ಲಿದ್ದಾಗ ಸ್ತ್ರೀ ಶಕ್ತಿಯನ್ನು ಸಂಘಟಿಸಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರು ಕಡಿಮೆಯಿಲ್ಲ ಎಂದು ತೋರಿಸಲು ಕಮಲ ನೆಹರು ಸಹ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದರು. ಪತಿ ಸೆರೆವಾಸದಲ್ಲಿದ್ದಾಗ ಅವರು ದೈವಾಧೀನರಾದರು. ವೀರ ಪತ್ನಿಯಾಗಿ, ವೀರ ನಾಯಕಿಯಾಗಿ, ವೀರ ಮಾತೆಯಾಗಿ ಮುಂದಿನ ಪ್ರಜೆಗಳಿಗೆ ದಾರಿದೀಪವಾಗಿ, ಭಾರತ ಮಾತೆಯ ಪ್ರಿಯ ಪುತ್ರಿಯಾಗಿ ಕಮಲಾ ನೆಹರು ತಮ್ಮ ಇಹಜೀವನವನ್ನು ಮುಗಿಸಿದರು. ಇದರ ಫಲವಾಗಿಯೇ ಇಂದು ಕಮಲಾ ನೆಹರು ಹೆಸರಿನಲ್ಲಿ ಅನೇಕ ವಿದ್ಯಾಸಂಸ್ಥೆಗಳ, ಸಂಘ ಸಂಸ್ಥೆಗಳ ಹೆಸರುಗಳನ್ನು ನಾವು ನೋಡುತ್ತಿದ್ದೇವೆ.

ಕಮಲಾ ಎಂಬ ಹೆಸರಿಗೂ ನಮ್ಮ ಕುಟುಂಬದವರಿಗೂ (ಲೇಖಕರ) ಅತಿ ಹತ್ತಿರದ ರಕ್ತ ಸಂಬಂಧ. ಕಮಲ ನಮ್ಮೆಲ್ಲರ ನೆಚ್ಚಿನ, ಮುದ್ದಿನ ತಂಗಿಯಾಗಿದ್ದವಳು. ಮನೆಯಲ್ಲಿ ಎಲ್ಲರ ಪ್ರೀತಿ ವಿಶ್ವಾಸಗಳ ದ್ಯೋತಕವಾಗಿ ಬೆಳೆದು ತನ್ನೆಲ್ಲ ಅಣ್ಣಂದಿರ ಅಕ್ಕಂದಿರ ಪ್ರೀತಿಯ ತಂಗಿಯಾಗಿದ್ದವಳು. ಎಷ್ಟೇ ಕೋಪದ ಅಥವಾ ಬೇಸರದ ಸನ್ನಿವೇಶದಲ್ಲಿದ್ದರೂ ತನ್ನ ಚೂಟಿಯ ಮಾತುಗಳಿಂದ ಎಲ್ಲರನ್ನೂ ಪೀಡಿಸಿ, ನಗಿಸಿ ಕಾಡಿ ಇದ್ದ ಕೋಪ ತಾಪಗಳನ್ನೆಲ್ಲಾ ಕ್ಷಣಾರ್ಧದಲ್ಲಿ ಮರೆಯುವಂತೆ ಮಾಡುತ್ತಿದ್ದಳು. ಈ ರೀತಿ ಪ್ರೇಮ ಪುತ್ಥಳಿಯಾಗಿ ಬೆಳೆದ ತಂಗಿ ಕಮಲ ಈಗಿಲ್ಲ. ಅವಳ ನೆನಪು ಮಾತ್ರ ಇಂಗಿಲ್ಲ ; ಇಂಗುವುದೂ ಇಲ್ಲ. ಯಾವುದೊ ಜನ್ಮಜನ್ಮಾಂತರದ ಬಂಧ ಅನುಬಂಧಗಳು ಕಮಲಳ ಹೆಸರಿನಲ್ಲಿ ನಮಗೆ ಒಂದಲ್ಲ ಒಂದು ರೀತಿಯಲ್ಲಿ ಪ್ರೇರಣೆಯನ್ನು ಕೊಡುತ್ತಲೇ ಇರುತ್ತವೆ. ಕಮಲ ನಮ್ಮ ಕುಟುಂಬದಲ್ಲಿ ಇಲ್ಲಿಯವರೆಗೆ ಒಂದು ಪ್ರೇರಕ ವ್ಯಕ್ತಿ, ಶಕ್ತಿ. ಇದು ವೈಯಕ್ತಿಕವಾದ ಭಾವನೆಗಳು. ವೈಯಕ್ತಿಕ ಭಾವನೆಗೂ ಇತರೆ ಭಾವನೆಗಳಿಗೂ ಅರ್ಥಾತ್ ಸಂಬಂಧ ಇರಲಾರದು. ಆದರೂ ಕಮಲ ಎಂಬ ಮೂರಕ್ಷರದ ಹೆಸರು ಕಿವಿಗೆ ಬಿದ್ದೊಡನೆ ನೆನಪಾಗುವುದು ನನ್ನ ತಂಗಿ ಕಮಲಳ ರೂಪವೇ ಎದುರು ನಿಂತಂತೆ ಭಾಸವಾಗುತ್ತದೆ.

ಡಾ॥ ಹಂಪನಾ ಅವರು ನನಗೆ ಇತ್ತೀಚೆಗೆ ಪರಿಚಯವಾದ ಹಿರಿಯ ಸ್ನೇಹಿತರು. ಅವರ ಪತಿ ಶ್ರೀಮತಿ ಕಮಲಾ ಹಂಪನಾ ಅವರ ಹೆಸರು ಕೇಳಿದ್ದೇನಷ್ಟೆ. ಆದರೂ ಅವರನ್ನು ಭೇಟಿ ಮಾಡುವ ಅವಕಾಶ ಇತ್ತೀಚಿನವರೆಗೆ ಒದಗಿರಲಿಲ್ಲ. ಅವರನ್ನು ಮೊದಲು ನೋಡಿದ್ದು ಅವರ ಅಭಿಮಾನಿಗಳು ಸಂಯೋಜಿಸಿದ್ದ 'ಅಭಿನಂದನ' ಸಮಾರಂಭದಲ್ಲಿ. ಆ ದಿನ ವೇದಿಕೆಯ ಮೇಲೆ ಎಲ್ಲರ ನೋಟದ ಕೇಂದ್ರ ಬಿಂದುವಾಗಿ ತುಂಬಾ ಸರಳತೆಯಿಂದ ಕೂಡಿದ ವ್ಯಕ್ತಿಯಾಗಿ ಕಂಗೊಳಿಸುತ್ತಿದ್ದರು. ಆಗ ನನ್ನ ಮನಸ್ಸಿನಲ್ಲಿ ಮೂಡಿದ ಭಾವನೆ ಕಮಲ ಎಂಬ ತಂಗಿ ಹೋದರೂ ಕಮಲ ಎಂಬ ಅಕ್ಕನ ಪರಿಚಯವಾಯಿತಲ್ಲ ಎಂಬ ಸಂತೋಷ.

ಅಂದಿನಿಂದ ಕಮಲಕ್ಕನನ್ನು ಕಂಡಾಗಲೆಲ್ಲ ಏನೋ ಒಂದು ಬಗೆಯ ಅಭಿಮಾನ, ಗೌರವ ಮನಸ್ಸಿನಲ್ಲಿ ತಾನೇತಾನಾಗಿ ಮೂಡಿಬರುತ್ತದೆ. ವಿಚಾರಿಸಿದಾಗ ತಿಳಿದ ವಿಷಯ ಅವರು ನಿಮ್ನ ವರ್ಗಕ್ಕೆ ಸೇರಿದ ಅಂದರೆ, ಹಿಂದುಳಿದ ಪಂಗಡಕ್ಕೆ ಸೇರಿದ ಕುಟುಂಬದಿಂದ ಬಂದಿರುವ ಕೆಲವೇ ವಿದ್ಯಾವಂತ ಮಹಿಳೆಯರಲ್ಲಿ ಅಗ್ರಹಣ್ಯರೆಂಬುದು. ಕಾಡು ಮೇಡಿನ ಜನಗಳ ಮಧ್ಯದಲ್ಲಿ ಬೆಳೆದ ಈ ಕಮಲ ಪುಷ್ಪ ತನ್ನ ಸೌರಭವನ್ನು ನಾಡಿನಾದ್ಯಂತ ಬೀರುವಷ್ಟು ಪ್ರತಿಭೆಯನ್ನು ಹೊಂದಿರುವುದು ಅಚ್ಚರಿಯ ಮಾತಾದರೂ ಅದನ್ನು ಪ್ರತಿಯೊಬ್ಬರೂ ಬಾಳಿಸಿ, ಪೋಷಿಸಿ, ಬೆಳೆಸಿ ಮತ್ತಷ್ಟು ಪ್ರವರ್ಧಮಾನಕ್ಕೆ ಬರುವಂತೆ ಪ್ರೋತ್ಸಾಹಿಸುವುದು ಪ್ರತಿಯೊಬ್ಬ ಲೇಖಕರ ಆದ್ಯ ಕರ್ತವ್ಯವಾಗಿದೆ.

ಕನ್ನಡ ಲೇಖಕಿಯರಲ್ಲಿ ಕಾದಂಬರಿ, ಕತೆ, ಕವನಗಳನ್ನು ಬರೆಯುವವರೇ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಈ ಎಲ್ಲ ಲೇಖಕಿಯರು ತಮ್ಮದೇ ಆದ ಅಭಿಮಾನಿಗಳನ್ನು ಓದುಗರನ್ನು ಗಳಿಸಿಕೊಂಡಿರುತ್ತಾರೆ. ಅದು ಅವರ ಕೃಷಿಯ ಫಲ. ಅವರ ಬರಹದ ತಪಸ್ಸಿನ ಪ್ರತಿಫಲ. ಅಂತೆಯೇ ಕಮಲಕ್ಕನವರೂ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿಮರ್ಶಾತ್ಮಕವಾಗಿ, ವಿಚಾರ ಪ್ರಚೋದಿತವಾದ ಮತ್ತು ಹರಿತವಾದ ಅದರಲ್ಲಿಯೂ ಸೂಕ್ಷ್ಮಾರ್ಥಗರ್ಭಿತ ಚಾಟಿ ಏಟಿನಂತೆ ಬರೆಯುವ ಲೇಖನಿಯನ್ನು ಪಡೆದಿದ್ದಾರೆ. ಈ ಬಗೆಯ

ವಿನೂತನ ಲೇಖನಿಗೆ ಅವರದೇ ಆದ ಅಭಿಮಾನಿಗಳೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರು ಪ್ರಾಧ್ಯಾಪಕರಾಗಿರುವಂತೆ ತಮ್ಮ ಲೇಖನದ ಕೃಷಿಯನ್ನು ಸಾರ್ಥಕ ಮಾಡಿಕೊಳ್ಳಲು, ಒಂದು ಉತ್ತಮ ಅವಕಾಶವನ್ನೂ ಪಡೆದಿದ್ದಾರೆ.

ಇಂಥ ಕಮಲಕ್ಕನನ್ನು ಕಂಡಾಗ ನನಗನ್ನಿಸುವುದು ಜೀವನದಲ್ಲಿ ನನ್ನ ಜೊತೆಗಿರುವ ಅಕ್ಕನ ಜೊತೆಗೆ ಕಾಲವಶಳಾದ ತಂಗಿಯ ಹೆಸರಿನ ಕಮಲಕ್ಕ ಸಿಕ್ಕಿದರಲ್ಲ ಎಂಬ ಸಂತೋಷ ಸಮಾಧಾನ.

ಕೆಂದಾವರೆಯನ್ನು ಕಮಲ ಎನ್ನಿ, ಜಲಜ ಎನ್ನಿ– ಯಾವುದೇ ಹೆಸರಿನಿಂದ ನೀವು ಕರೆದರೂ ಅದು ತನ್ನ ಪರಿಮಳವನ್ನು ಮತ್ತಷ್ಟು ಬೀರುವುದರ ಜೊತೆಗೆ ಕೆಸರಿನಂಥ ಮಲೀನವಾದ ಪರಿಸರವನ್ನೂ ಪವಿತ್ರವನ್ನಾಗಿಸುವ ಗುಣ ಅದಕ್ಕಿದೆ. ಅದರಂತೆ ಕಮಲಕ್ಕ ಇರುವ ಕಡೆ ಲೇಖಕರ ಬಳಗದಲ್ಲಿರುವ ಅಥವಾ ಇರಬಹುದಾದ ವೃತ್ತಿ ಮಾತ್ಸರ್ಯ, ವೈರ, ಅಸೂಯೆ ಇತ್ಯಾದಿಗಳೆಲ್ಲಾ ದೂರವಾಗುತ್ತವೆ. ಅಲ್ಲಿ ಸ್ನೇಹ, ಮೈತ್ರಿ, ಸಹಬಾಳ್ವೆ, ಸಹನೆ ಮತ್ತೊಬ್ಬರ ಏಳಿಗೆ ಕಂಡು ಸಂತೋಷಪಡುವ ಸೌಹಾರ್ದ ಮನೋಭಾವನೆಗಳು ಮೂಡು ತ್ತವೆ ಮತ್ತು ಇವರೆಲ್ಲರ ಮನಸ್ಸಿನ ತಾವರೆಗಳು ಹೊಂದಾಣಿಕೆಯ ಹೊಂದಾವರೆಗಳಾಗಿ ಬೆಳಗಲಿ ಎಂದು ಆಶಿಸುತ್ತೇನೆ.

ಅಕ್ಕ ಕಮಲಾ ಹಂಪನಾ

ಡಾ॥. ಎಸ್. ಪಿ. ಪಾಟೀಲ

ಶ್ರೀಮತಿ ಕಮಲಾ ಹಂಪನಾ ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಕುರಿತು ಅನೇಕ ಹಿರಿಯರು, ಸ್ನೇಹಿತರು, ವಿದ್ಯಾರ್ಥಿಗಳು ಈಗಾಗಲೇ ಮೆಚ್ಚುಗೆಯ, ಅಭಿಮಾನದ ಮಾತುಗಳನ್ನು ಬರೆದಿದ್ದಾರೆ. ಸಾಹಿತಿಯಾಗಿ, ಅಧ್ಯಾಪಕಿಯಾಗಿ, ಭಾಷಣಕಾರಳಾಗಿ, ಗೃಹಿಣಿಯಾಗಿ, ಸಾಹಿತ್ಯ–ಕಲೆ–ಸಂಸ್ಕೃತಿ–ಸಂಬಂಧಿ ಕಾರ್ಯಕ್ರಮಗಳ ನಿಯೋಜಕರಾಗಿ, ಸ್ಮರಣ ಸಂಚಿಕೆಗಳ ಸಂಪಾದಕರಾಗಿ, ಅನುವಾದಕರಾಗಿ–ಹೀಗೆ ಅವರ ಪ್ರತಿಭೆ ಬಹುಮುಖವಾಗಿ ಹೊರಹೊಮ್ಮಿದುದು ಯಾರಿಗಾದರೂ ಹೆಮ್ಮೆಯನ್ನುಂಟುಮಾಡುವಂಥದು. ಕಳೆದ ೧೮-೨೦ ವರ್ಷಗಳಿಂದ ಅವರನ್ನು ತೀರ ಸಮೀಪದಿಂದ ಕಂಡಿದ್ದೇನೆ. ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಅದರ ಫಲವಾಗಿ ಅವರಿಂದ ಅಕ್ಕ-ಅತ್ತಿಗೆಯ ಪ್ರೀತಿ-ವಾತ್ಸಲ್ಯಗಳನ್ನು ಅನುಭವಿಸಿದ್ದೇನೆ.

ಶ್ರೀ ಹಂಪನಾ ಅವರನ್ನು 'ಜೀವನ' ಮಾಸಪತ್ರಿಕೆಯ ಸಂಪಾದಕರಾಗುವ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗುವ ಪೂರ್ವದಿಂದಲೂ ಬರವಣಿಗೆಯ ಮೂಲಕ ಬಲ್ಲವನಾಗಿದ್ದೆ. ಅನವಶ್ಯಕ ವಿಳಂಬವಿಲ್ಲದ, ಸೂಕ್ತ, ಸಂಕ್ಷೇಪ, ಮುದ್ದಾದ ಅಕ್ಷರಗಳಿಂದ ಕೂಡಿದ ಅವರ ಕಾಗದಗಳನ್ನು ಓದುವುದೇ ಒಂದು ಸಂತೋಷ. ೧೯೬೮-೬೯ರಲ್ಲಿ ಶ್ರೀ ಹಂಪನಾ, ಶ್ರೀಮತಿ ಕಮಲಾ ಹಂಪನಾ ಅವರು ೨–೩ ವರ್ಷದ ಹಿರಿಯ ಪುತ್ರ ಹರ್ಷನೊಂದಿಗೆ ಕರ್ನಾಟಕ ವಿಶ್ವವಿದ್ಯಾಲಯದ ಡಾ॥ ಬಿ. ಎಸ್. ಕುಲಕರ್ಣಿ ಅವರಲ್ಲಿ ಬಂದಿದ್ದಾಗ ಮೊದಲ ಬಾರಿ ನೋಡುವ ಅವಕಾಶವಾಯಿತು. ಬರವಣಿಗೆಯಂತೆಯೇ ಮಾತುಕತೆಯಲ್ಲಿ ಸರಸ-ಸಜ್ಜನಿಕೆಯ ಸುಸಂಸ್ಕೃತ ನಿಲುವು ಸ್ಪಷ್ಟವಾಯಿತು. ಅಂದಿನಿಂದ ಮುಂದೆ ನಾನು ಧಾರವಾಡಕ್ಕೆ ಬಂದಮೇಲೆ ಅವರ ಸಂಪರ್ಕ ಹೆಚ್ಚಿತು. ಸಂಬಂಧ ಬಲಗೊಂಡಿತು. ಬೆಂಗಳೂರಿಗೆ ನಾನು ಹೋದಾಗಲೆಲ್ಲ ಅವರಲ್ಲಿಗೆ ಇಳಿಯುವುದು, ಹಂಪನಾ ಧಾರವಾಡಕ್ಕೆ ಬಂದರೆ ನನ್ನಲ್ಲಿ ಬಂದು, ಅವರ ವಾಸ್ತವ್ಯದುದ್ದಕ್ಕೂ ಅವರ ಜೊತೆಗಿರುವುದು ಸಾಮಾನ್ಯವಾಯಿತು. ಇಂಥ ಸಂದರ್ಭದಲ್ಲಿ ನಾನು ಅವರ ಮನೆಯಲ್ಲಿ ಉಳಿದಾಗಲೆಲ್ಲ ಅದು ಬೇರಿನ್ನಾರದೋ ಮನೆಯೆಂಬ ಭಾವನೆ ನನಗೆ ಎಂದೂ ಬರದಂತೆ ನೋಡಿಕೊಂಡವರು ಅತ್ತಿಗೆ ಕಮಲಾ ಹಂಪನಾ ಅವರು. ನನ್ನ ತೀರ ಪರಿಚಿತ ಆತ್ಮೀಯ ಸಂಬಂಧಿಕರು ನನ್ನನ್ನು ನೋಡಿಕೊಳ್ಳುವ ರೀತಿಯಲ್ಲಿ ಎಳ್ಳಷ್ಟೂ ಕೊರತೆಯಾಗದಂತೆ ವಿಚಾರಿಸಿಕೊಳ್ಳುತ್ತಿದ್ದುದರಿಂದ ನಿರಾಕರಿಸಲು ಮನಸ್ಸು ಒಪ್ಪುತ್ತಿರಲಿಲ್ಲ. ಬೆಂಗಳೂರಿಗೆ ಹೋದಾಗ. ಅವರು ಧಾರವಾಡಕ್ಕೆ ಬಂದಾಗಲೆಲ್ಲ 'ಮನೆಯವರು ಹೇಗಿದ್ದಾರೆ ? ಮಕ್ಕಳು ಹೇಗಿದ್ದಾರೇ ? ಎಂಬ ಪ್ರಶ್ನೆಗಳ ಮೂಲಕ ಅವರು ಕೇವಲ ಆತ್ಮೀಯರು ಎಂಬುದಕ್ಕಿಂತ ಹತ್ತಿರದ ರಕ್ತಸಂಬಂಧಿ

ಗಳು, ತಮ್ಮ ಕುಟುಂಬವರ್ಗದವರ ಯೋಗಕ್ಷೇಮವನ್ನು ವಿಚಾರಿಸುವ ಹಿರಿಯಕ್ಕ, ಅತ್ತಿಗೆ ಯೆಂದೇ ಭಾವಿಸಿದ್ದೇನೆ. ಅವರಂತೆಯೇ ಅವರ ಮಕ್ಕಳಾದ ರಾಜ್ಯಶ್ರೀ, ಆರತಿ ಅವರೂ ಇದೇ ಪ್ರೀತಿ-ವಿಶ್ವಾಸ ಅಭಿಮಾನದಿಂದ ವಿಚಾರಿಸುವುದನ್ನು ಕೇಳಿದಾಗ ಹೃದಯ ಅಭಿಮಾನ ದಿಂದ ಬೀಗುವುದು. ಇದು ನನ್ನೊಬ್ಬನ ಅನುಭವವಾಗಿರಲಿಕ್ಕಿಲ್ಲ. ನನ್ನಂತೆ ಅನೇಕರನ್ನು ಅವರು ಇದೇ ಆತ್ಮೀಯತೆಯಿಂದ ಮಾತನಾಡಿಸುವುದನ್ನು ನಾನು ಕೇಳಿದ್ದೇನೆ. ಕರ್ನಾಟಕ ದುದ್ದಗಲಕ್ಕೂ ಅವರ ಸಂಪರ್ಕದಲ್ಲಿ ಬಂದವರೆಲ್ಲರ ಅಭಿಪ್ರಾಯ ಒಂದೇ ಆಗಿರುವುದರಲ್ಲಿ ಸಂದೇಹವಿಲ್ಲ. ಔಪಚಾರಿಕತೆಯ ಪೊರೆಕಳಚಿ ಎಲ್ಲರೂ ನನ್ನವರೆಂದು ಅಪ್ಪಿಕೊಳ್ಳುವ ತಾಯಿಹೃದಯದ ವೈಶಾಲ್ಯ ಕಮಲಾ ಹಂಪನಾ ಅವರ ವ್ಯಕ್ತಿತ್ವದ ಅಪರೂಪಗುಣ. ಹೀಗಾಗಿ ಅವರ ಸಂಸಾರ ಕೇವಲ ಅವರ ಕುಟುಂಬ ರಕ್ತಸಂಬಂಧಿಗಳಿಗೆ ಸೀಮಿತವಾಗಿರದೆ ತುಂಬ ವ್ಯಾಪಕವಾಗಿ ವ್ಯಾಪಿಸಿದೆ.

ತಮ್ಮ ಸಂಪರ್ಕದಲ್ಲಿ ಬಂದವರನ್ನು ಆತ್ಮೀಯರನ್ನಾಗಿ, ತಮ್ಮ ಪರಿವಾರದವರನ್ನಾಗಿ ನೋಡಿ ಕೊಳ್ಳುವ ಮೂಲಕ ಅವರು ಬೆಳೆಸಿದ ಬಾಂಧವ್ಯದ ಬಳ್ಳಿ ಅವರಿಗೆ ಅವರ ನಿತ್ಯದ ಬದುಕಿ ನಲ್ಲಿ ಅದೆಷ್ಟೋ ತೊಂದರೆಗಳನ್ನು ಒಡ್ಡುತ್ತಿರಬಹುದೆಂಬ ಸಂದೇಹ ನನ್ನಂಥ ಅನೇಕರಿಗೆ ಆಗಾಗ ಬಾಧಿಸಿದ್ದುಂಟು. ಮನೆಗೆ ಬಂದ ಅತಿಥಿಗಳ ಯೋಗಕ್ಷೇಮದಲ್ಲಿ ಹೆಚ್ಚು-ಕಡಿಮೆ ಯಾದಾಗ ಅವರಿಗೆ ಮಾತೆಯಾಗುವುದನ್ನು ಕಣ್ಣಾರೆ ಕಂಡಿದ್ದೇನೆ. ಒಂದು ಸಲ ಹಂಪನಾ ಅವರೊಂದಿಗೆ ಧಾರವಾಡದಿಂದ ಬೆಳಗ್ಗೆ ಹೊರಟು ಬೆಂಗಳೂರಿನ ಅವರ ಮನೆಯನ್ನು ಮಧ್ಯಾಹ್ನ ೧೨-೩೦ ಗಂಟೆಗೆ ತಲುಪಿದೆವು. ಕಮಲಾ ಹಂಪನಾ, ಮಕ್ಕಳೆಲ್ಲ ಕಾಲೇಜಿಗೆ ಹೋಗಿದ್ದರು. ನಾನು ಬೇರೆಡೆ ಹೋಗಬಯಸಿದರೂ ಬಿಡದೆ ಒತ್ತಾಯ ಮಾಡಿದುದಕ್ಕೆ ಉಳಿದೆ. ಇಬ್ಬರೂ ಅನ್ನ-ಸಾರು ಊಟ ಮಾಡಿದೆವು. ನಾನು ನನ್ನ ಕೆಲಸಕ್ಕೆ ಹೋಗಿ ಸಂಜೆ ಮನೆಗೆ ಮರಳಿ ಧಾರವಾಡಕ್ಕೆ ಹೊರಡಲು ಸಿದ್ಧನಾದೆ. ನನ್ನನ್ನು ನೋಡಿದವರೆ "ಏನು ಇಬ್ಬರಿಗೂ ಬರೇ ಅನ್ನ-ಸಾರು ಊಟವಾಯಿತಲ್ಲ. ಮನೆಯಲ್ಲಿದ್ದಿದ್ದರೆ ಚೆನ್ನಾಗಿತ್ತು" ಎಂದು ತುಂಬ ವ್ಯಥೆಯಿಂದ ನುಡಿವರಲ್ಲದೆ, ಸಾಯಂಕಾಲದ ಫಲಹಾರ ಮಾಡದೇ ಹೋಗ ಕೂಡದೆಂದು ಕಾಲೇಜಿನಿಂದ ಅದೇ ೫ಗಂಟೆ ಬಂದಿದ್ದರಾದರೂ ಅತ್ತಿಗೆ ಅಡಿಗೆ ಮನೆ ಸೇರಿ ಬಿಸಿ ಬಿಸಿ ತಿಂಡಿ ಮಾಡಿ ನೀಡಿದಾಗಲೇ ಅವರ ಮುಖದಲ್ಲಿ ತುಸು ಸಮಾಧಾನ-ತೃಪ್ತಿಯ ಭಾವ ಮರಳಿತು. ಬೆಳಗ್ಗಿನಿಂದ ಸಂಜೆಯವರೆಗೆ ಕಾಲೇಜಿಗೆ ಹೋಗಿ ಬಂದ ಅವರ ದೇಹಕ್ಕೆ ವಿಶ್ರಾಂತಿ-ಅಗತ್ಯವಿದ್ದಿರಬಹುದು. ಆದರೂ ಮಾನಸಿಕ ಸಂತೋಷಕ್ಕಾಗಿ ಅದನ್ನೆಲ್ಲ ಗಮನಿ ಸುವ ವ್ಯಕ್ತಿಯಾಗಿ ಅವರು ಎಂದೂ ಕಂಡುದಿಲ್ಲ. ಸದಾ ನಸುನಗುತ್ತ ತನ್ನ ಕೈಲಾದ ಅಷ್ಟೆ ಏಕೆ ಸಾಧ್ಯವಿದ್ದಷ್ಟು ಶಕ್ತಿ-ಸಮಯವನ್ನು ಅವರು ಇದಕ್ಕಾಗಿ ಮೀಸಲಾಗಿರಿಸಿ ಅದರಲ್ಲಿಯೇ ಸಂತೋಷ ತಾಳುವಲ್ಲಿ ನಿಸ್ವಾರ್ಥ, ಪ್ರಾಂಜಲ ಮನಸ್ಸಿನ ಒಂದು ಅಪರೂಪ ದರ್ಶನ ವಾಗುತ್ತದೆ. ಹಂಪನಾ ಹಾಗೂ ಅವರ ಮಕ್ಕಳು ಹೇಳುವಂತೆ ಅವರೊಬ್ಬ 'ಗಂಧದ ಕೊರಡು' ಎಂಬುದೇ ಸಾರ್ಥಕ ಹೋಲಿಕೆ.

ಹಂಪನಾ ಸದಾ ಚುರುಕಾಗಿ ಓಡಿಯಾಡುತ್ತ ಚೈತನ್ಯದ ಚಿಲುಮೆಯಾದವರು. ಅವರ ಕೈ ಹಿಡಿದು, ಅವರ ಬದುಕಿಗೆ ನಂದಾದೀಪವಾದ ಶ್ರೀಮತಿ ಕಮಲಾ ಹಂಪನಾ ಅವರೂ ಅಷ್ಟೇ. ಒಂದೊಂದು ಸಂದರ್ಭದಲ್ಲಿ ಹಂಪನಾ ಅವರಿಗಿಂತಲೂ ಇವರು ಸದಾ ಎಚ್ಚರವಾಗಿದ್ದು, ಸುತ್ತಲಿನ ಜನಮನವನ್ನು ಗುರುತಿಸಿಕೊಂಡು, ಅರ್ಥೈಸಿಕೊಂಡು ಯಾವ ಮುನಿಸು,

ಅಪನಂಬಿಕೆ, ಶಂಕೆಗಳಿಗೆ ಕಾರಣವಾಗದಂತೇ, ನಡೆದುಕೊಳ್ಳುವಲ್ಲಿ ಅವರು ತೋರುವ ಸಮಯಪ್ರಜ್ಞೆ ವಿಶೇಷವಾದುದು ಅವರಿಗೇ ವಿಶಿಷ್ಟವಾದುದು. ಹಂಪನಾ ಹಾಗೂ ಅವರ ಐದಾರು ಜನ ಸ್ನೇಹಿತರು ಪೆನಗೊಂಡೆಯ ಶ್ರೀಪಚ್ಚೆ ಪಾರ್ಶ್ವನಾಥ ಟ್ರಸ್ಟ ಪರವಾಗಿ ಗೌರೀಬಿದನೂರಿನಲ್ಲಿ ಜೈನ ವಿದ್ಯಾರ್ಥಿನಿಲಯ ಕಟ್ಟಡದ ಯೋಜನೆಯನ್ನಿರಿಸಿಕೊಂಡು ಕರ್ನಾಟಕ ಹಾಗೂ ಗಡಿ ಪ್ರದೇಶದ ಮಹಾರಾಷ್ಟ್ರದ ಕೆಲ ಜೈನ ವಿದ್ಯಾರ್ಥಿನಿಲಯಗಳನ್ನು ಪ್ರತ್ಯಕ್ಷ ಪರಿಶೀಲಿಸಿ ಕಟ್ಟಡ ನಿರ್ಮಾಣ ಕೈಕೊಂಡು ಪೂರ್ಣಗೊಳಿಸಿದರು. ಅದರ ಪ್ರಾರಂಭೋತ್ಸವದ ಅಂಗವಾಗಿ ಗೌರೀಬಿದನೂರಿನಲ್ಲಿ ನವೆಂಬರ್ ೧೨, ೧೩, ೧೯೭೬ ರಂದು ಎರಡು ದಿನಗಳ ಅಖಿಲ ಕರ್ನಾಟಕ ಜೈನ ಸಮ್ಮೇಳನವನ್ನು ಏರ್ಪಡಿಸಿದರು. ಅದರ ಅಂಗವಾಗಿ ಏರ್ಪಟ್ಟ ಸಾಹಿತ್ಯ ಗೋಷ್ಠಿಯಲ್ಲಿ ಕಮಲಾ ಹಂಪನಾ ಅವರೊಂದಿಗೆ ನಾನೂ ಭಾಗವಹಿಸಿದ್ದೆ. ಸಮ್ಮೇಳನದ ತರುವಾಯ ಹೊರಟುನಿಂತ ನನ್ನನ್ನು ಬಿಡದೆ ತಮ್ಮೊಂದಿಗೆ ಬೆಂಗಳೂರಿಗೆ ಬಂದು ಅಲ್ಲಿಂದ ಹೋಗಬಹುದೆಂದು ಕಾರು ಹತ್ತಿಸಿದರು. ರಾತ್ರಿ ಹತ್ತು ಗಂಟೆಯ ಸಮಯ, ತುಂತುರು ಮಳೆ ಆರಂಭವಾಗಿತ್ತು. ಬೇಗ ಮನೆ ತಲುಪಬೇಕೆಂಬ ಕಾತರ ಹಂಪನಾ ಅವರಿಗೆ. ಆದರೆ ಗೌರೀಬಿದನೂರಿನ ಸಮ್ಮೇಳನಕ್ಕೆ ಸುತ್ತಲಿನ ಹಳ್ಳಿಯ, ಹಂಪಸಂದ್ರದ ಅನೇಕ ಜನ ಅಲ್ಲಿ ನೆರೆದಿದ್ದು, ಅವರಲ್ಲಿ ಎಷ್ಟೋ ಜನ ಹಂಪನಾ ಅವರಿಗೆ ಸಂಬಂಧಿಗಳಾದರೆ ಇನ್ನೆಷ್ಟೋ ಜನ ಪರಿಚಿತರು, ಅಭಿಮಾನಿಗಳು, ಧೀಮಂತ ಬದುಕು, ಉದಾತ್ತಕಾರ್ಯ, ರಸವತ್ತಾಗದ ಮಾತುಗಳ ಮೂರ್ತಿಯಾದ ಹಂಪನಾ ಅವರನ್ನು ಮಾತನಾಡಿಸುವ ತವಕ ಅವರೆಲ್ಲರಿಗೆ. ಅನೇಕ ಹೆಂಗಳೆಯರೂ ಕಾರನ್ನು ಮುತ್ತಿದರು. ಕೆಲವರೊಂದಿಗೆ ಒಂದೆರಡು ಚುರುಕು ಮಾತನ್ನಾಡಿ ಹಂಪನಾ ಕಾರನ್ನು ಓಡಿಸಿದರೆ, "ಏನ್ರಿ ಅವರೆಲ್ಲ ಎಷ್ಟು ಪ್ರೀತಿಯಿಂದ ನಮ್ಮ ನಾಗರಾಜ, ನಾಗರಾಜ ಎಂದು ಮಾತನಾಡಿಸಲು ಬಂದರೆ ನೀವು ಕಾರು ಬಿಟ್ಟುಬಿಡುವುದೆ? ಅವರೆಲ್ಲ ಎಷ್ಟು ನೊಂದುಕೊಳ್ಳಬಹುದು?" ಎಂದು ತುಸು ಅಸಮಾಧಾನದಿಂದಲೇ ಕಮಲಾ ಹಂಪನಾ ನುಡಿದರು. ರಾತ್ರಿಯ ಸಮಯ, ಮಳೆ, ದೂರದ ಪ್ರವಾಸ ನಿಮಿತ್ತಗಳನ್ನು ಹಂಪನಾ ಹೇಳಿದರೂ ಅವರಿಗೆ ಸಮಾಧಾನವಾಗಲಿಲ್ಲ. "ಐದು–ಹತ್ತು ನಿಮಿಷ ಅವರನ್ನೆಲ್ಲ ವಿಚಾರಿಸಿಕೊಂಡು ಬಂದಿದ್ದರೆ ಅವರಿಗೆಲ್ಲ ತುಂಬ ಸಂತೋಷವಾಗುತ್ತಿರಲಿಲ್ವೆ?" ಎಂದು ಮತ್ತೆ ನುಡಿದಾಗ ಅವರ ಮನಸ್ಸಿಗೆ ಆದ ವ್ಯಥೆ ಹಂಪನಾ ಅವರಿಗೂ ಅರ್ಥವಾಯಿತೆಂದು ತೋರುತ್ತದೆ. ಅದನ್ನು ನಿವಾರಿಸಲೋ ಎಂಬಂತೆ "ಸಮ್ಮೇಳನದಲ್ಲಿ, ಮಧ್ಯಾಹ್ನ ಯಾರು ಯಾರು ಸಿಕ್ಕಿದರು? ನೀನು ಮಾತನಾಡಿ ಆಗಿರಬೇಕಲ್ಲ?" ಎಂದು ಹಂಪನಾ ಕೇಳಿದರು. ಆಗ ಅಂದು ಭೇಟಿ ಮಾಡಿದ ಅನೇಕ ಹಿರಿಯರ, ಸರಿಕರ, ಹತ್ತಿರದ ಸಂಬಂಧಿಗಳ (ಎಷ್ಟೋ ಹೆಸರು–ಸಂಬಂಧಗಳನ್ನು ಅವರೇ ಹಂಪನಾ ಅವರಿಗೆ ಪರಿಚಯಿಸುತ್ತ) ಅನೇಕ ಹೆಸರುಗಳನ್ನು ಪಟಪಟನೆ ಹೇಳಿದರು. ಆಗ "ನಾನು ಮಾತನಾಡುದಿದ್ದರೇನಾಯಿತು ? ನೀನು ಎಲ್ಲರನ್ನು ಮಾತನಾಡಿಸಿ ಆಗಿದೆಯಲ್ಲ ! ಅವರಿಗೆಲ್ಲ ನಿನ್ನ ಮಾತೇ ಇಷ್ಟ!" ಎಂದು ಮಡದಿಯ ಬಗ್ಗೆ ಅಭಿಮಾನದ ಮಾತು ಆಡಿದಾಗ ಕಮಲಾ ಹಂಪನಾ ಅವರ ಅದುವರೆಗಿನ ಅಸಮಾಧಾನ ಕಳಚಿ "ನಾನೇನೋ ಮಾತನಾಡಿಸಿ ಆಗಿದೆ, ನೀವೂ ಮಾತನಾಡಿಸಿದ್ದರೆ ಅವರ ಸಂತೋಷ ಇನ್ನೂ ಹೆಚ್ಚುತ್ತಿತ್ತು" ಎಂದು ನುಡಿಯುವಲ್ಲಿ ತೃಪ್ತಿ ಕಾಣಿಸಿಕೊಂಡಿತ್ತು. ಹಂಪನಾ ಅವರ ನೆರಳಾಗಿ, ಅವರನ್ನೊಳಗೊಂಡ ಅವರ ಕುಟುಂಬ ವರ್ಗಕ್ಕೆ ಅಪಾರ ಬಳಗಕ್ಕೆ ನೆರಳಾಗಿ, ಅವರೆಲ್ಲರಿಗೆ ಅಭಿಮಾನದ ಕಣ್ಮಣಿಯಾಗಿರುವ ಅಕ್ಕ ಕಮಲ ಹಂಪನಾ ಅವರು ಗೃಹಿಣಿಯ ಆದರ್ಶಕ್ಕೆ ನಿದರ್ಶನರಾಗಿದ್ದಾರೆ.

ಸಮಕಾಲೀನ ಸಾಹಿತ್ಯ
ಒಂದು ದಿನದ ಸಮ್ಮೇಳನ

ಇಂದಿನ ಸಂದರ್ಭದಲ್ಲಿ ಹಗಲಲ್ಲೇ ಕ್ರೌರ್ಯ, ದಬ್ಬಾಳಿಕೆ, ಹಲ್ಲೆಗಳು ನಡೆಯುತ್ತಿವೆ. ತುಳಿತಕ್ಕೊಳಗಾದವರ ರೋಧನ ಎಲ್ಲೆಂದರಲ್ಲಿ ಕೇಳಿಸುತ್ತಲಿರುವ ಸಂದರ್ಭವಿದು. ಶೋಷಿತ ವರ್ಗದ ಧ್ವನಿಗಳನ್ನು ಗುರುತಿಸುವುದು–ಜನ ಜಾಗೃತಿ ಮೂಡಿಸುವುದು ಸಮಕಾಲೀನ ಸಾಹಿತ್ಯ ಸಮ್ಮೇಳನ'ದ ಮುಖ್ಯ ಉದ್ದೇಶವಾಯಿತು. ಆಧುನಿಕ ಸಂದರ್ಭದ ವಸ್ತುಸ್ಥಿತಿಗನುಗುಣವಾದ ಮುವತ್ತಕ್ಕೂ ಹೆಚ್ಚು ಕೃತಿಗಳನ್ನು ಹೊರ ತಂದಿರುದ ಲೇಖಕಿ ಕಮಲಾ ಹಂಪನಾ ಅವರನ್ನು ಪ್ರಸ್ತುತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಲಾಗಿತ್ತು. ಕಮಲಾ ಹಂಪನಾ ಅವರು ಹಿಂದುಳಿದ ವರ್ಗದಿಂದ ಬಂದವರು: ದಿನಾಂಕ ೨೮–೧೦–೯೮೫ಕ್ಕೆ ಇವರಿಗೆ ಐವತ್ತು ವರ್ಷ ತುಂಬಿತು. ಇಂಥ ಸಂದರ್ಭದಲ್ಲಿ ನಾಡಿನ ಅಭಿಮಾನಿಗಳು ಅವರಿಗೆ ಅಭಿನಂದನಾ ಸಮಾರಂಭವನ್ನು ಏರ್ಪಾಟು ಮಾಡಿರುವುದುಂಟು. ಅದರ ಭಾಗವಾಗಿಯೇ ಈ ಸಮ್ಮೇಳನದ ವ್ಯವಸ್ಥೆಯೂ ಕೂಡ. ಇಂಥ ಸಮ್ಮೇಳನದ ಅಧ್ಯಕ್ಷರಾಗಿದ್ದುದು ಔಚಿತ್ಯಪೂರ್ಣವೆನಿಸಿತು.

ಅಕ್ಟೋಬರ್ ೨೭ರಂದು ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ಕಮಲಾ ಹಂಪನಾ ಅಭಿನಂದನ ಸಮಿತಿ ಏರ್ಪಡಿಸಿದ್ದ ಒಂದು ದಿನದ ಸಮ್ಮೇಳನವನ್ನು ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಬಿ. ರಾಚಯ್ಯ ಅವರು ಉದ್ಘಾಟಿಸಿದರು. ಡಾ॥ ಸಿ. ಪಾರ್ವತಮ್ಮ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರೊ॥ ಕಮಲಾ ಹಂಪನಾ ಅವರು ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಸುಧಾಕರ ಅವರ ಅಧ್ಯಕ್ಷತೆಯಲ್ಲಿ ಮೊದಲನೇ ಗೋಷ್ಠಿ ಬೆಳಗ್ಗೆ ೧೦ ಗಂಟೆಗೆ ಆರಂಭವಾಯಿತು. ಗೋಷ್ಠಿಯನ್ನು ಡಾ॥ ಅನುಪಮಾ ನಿರಂಜನ ಅವರು ಉದ್ಘಾಟಿಸಿದರು. ರಮಜಾನ ದರ್ಗಾ ಅವರು 'ದಕ್ಷಿಣ ಆಫ್ರಿಕಾದಲ್ಲಿ ಕಲೆ ಮತ್ತು ಹೋರಾಟ'ದ ಬಗೆಗೂ ಎಂ. ಆರ್. ವಿಶ್ವನಾಥರೆಡ್ಡಿ ಅವರು 'ಶಿಕ್ಷಣ ಮತ್ತು ಶೋಷಣೆ'ಯ ಬಗೆಗೂ ಡಾ॥ ಸಿ. ಪಿ. ಸಿದ್ಧಾಶ್ರಮ ಅವರು 'ಅಂಬೇಡ್ಕರ್ ಮತ್ತು ಸಾಹಿತ್ಯ ಪ್ರಭಾವ'ದ ಬಗೆಗೂ ಎಲ್. ಹನುಮಂತಯ್ಯ ಅವರು 'ದಲಿತ ಸಾಹಿತ್ಯ ಕರ್ನಾಟಕದಲ್ಲಿ' ಬಗೆಗೂ ಮಾತನಾಡಿದರು. ವರದಾ ಶ್ರೀನಿವಾಸ್ ಗೋಷ್ಠಿ ನಿರ್ವಹಿಸಿದರು.

ಡಾ॥ ಪ್ರೋಲಂಕಿ ರಾಮಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಎರಡನೇ ಗೋಷ್ಠಿ ಮಧ್ಯಾಹ್ನ ೨–೩೦ ಗಂಟೆಗೆ ಆರಂಭವಾಯಿತು. ಪ್ರೊ॥ ಎಚ್. ಜೆ. ಲಕ್ಕಪ್ಪಗೌಡ ಅವರು ಉದ್ಘಾಟಿಸಿ

ದರು. ರಂಗಾರೆಡ್ಡಿ ಕೋಡಿರಾಂಪುರ 'ಬಂಡಾಯ ಸಾಹಿತ್ಯ ಕರ್ನಾಟಕದಲ್ಲಿ,' ಮ. ನ. ಜವರಯ್ಯ 'ಸಾಹಿತ್ಯ ಗುಂಪುಗಾರಿಕೆ – ದಲಿತರ ದಮನ,' ವೇಮಣ್ಣ 'ತೆಲುಗು, ತಮಿಳು, ಮರಾಠಿಯಲ್ಲಿ ದಲಿತ ಸಾಹಿತ್ಯ ಸಮೀಕ್ಷೆ' ಎಂಬ ಬಗೆಗೂ ಮಾತನಾಡಿದರು. ಸರಿತಾ ಜ್ಞಾನಾನಂದರು ಗೋಷ್ಠಿಯ ನಿರ್ವಹಣೆ ಮಾಡಿದರು.

ಬಿ. ಟಿ. ಲಲಿತಾ ನಾಯಕರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಸಂಜೆ ೫ ಗಂಟೆಗೆ ಆರಂಭ ವಾಯಿತು. ಪ್ರೊ|| ಜಿ. ಎಸ್. ಸಿದ್ಧಲಿಂಗಯ್ಯನವರು ಉದ್ಘಾಟಿಸಿದರು. ಭಾಗವಹಿಸಿದ ಕವಿಗಳು : ಸರಜೂ ಕಾಟಕರ್, ಜಿ.ಎಸ್. ಸಿದ್ಧರಾಮಯ್ಯ, ತಿಮ್ಮಯ್ಯ, ಸುಕನ್ಯಾ ಮಾರುತಿ. ಅಬ್ದುಲ್ ಮಜೀದ್‌ಖಾನ್, ಕವಿತಾಕೃಷ್ಣ, ಮಾತಂಗಿ, ಎಚ್. ಪಿ. ಫಿಲೋ ಮಿನಾ, ಗವಿಸಿದ್ಧ ಎನ್. ಬಳ್ಳಾರಿ, ಹರ್ತಿಕೋಟೆ ಪರಮೇಶ, ಜಿ. ವಿ. ಡಿ., ಧರಣೇಂದ್ರ ಕುರಕುರಿ (ಕವನ ಕಳುಹಿಸಿದ್ದರು), ದೀಪಾ, ಪಾರ್ಶ್ವನಾಥ ಜಿ. ಕೆಂಪಣ್ಣವರ, ಜಿ. ವಿ. ಶಿವ ಸ್ವಾಮಿ, ಎಸ್,ಕೆ. ಪೂರ್ಣಿಮಾದೇವಿ, ಮಾರ್ಕಂಡಪುರಂ ಶ್ರೀನಿವಾಸ್, ಬೈರಮಂಗಲ ರಾಮೇಗೌಡ, ಸಿ. ಹನುಮಂತರಾಯಪ್ಪ. ತಮ್ಮ ಕವನಗಳನ್ನು ವಾಚಿಸಿದರು. ಕವಿತಾ ಕೃಷ್ಣ ಗೋಷ್ಠಿ ನಿರ್ವಹಿಸಿದರು.

ಡಾ|| ಎಂ. ಅಕಬರ್ ಅಲಿ ಅವರ ಅಧ್ಯಕ್ಷತೆಯಲ್ಲಿ ಸಮರೋಪ ಜರುಗಿತು. ಟಿ. ಕೆ. ಮಹ ಮೂದ್ ಅವರು ಮುಖ್ಯ ಅತಿಥಿಗಳಾಗಿದ್ದರು. ಡಾ|| ನಿಂಗಣ್ಣ ಸಣ್ಣಕ್ಕಿ ಅವರು ಸ್ವಾಗತಿಸಿದರು. ಶಿ. ವೀ. ಮನ್ವಾಚಾರ್ ವಂದಿಸಿದರು. ಹೊನ್ನಪ್ಪ ಭಾಗವತರ್‌ರಿಂದ ಪ್ರಾರ್ಥನೆ ಜರುಗಿತು, ಆಕಾಶವಾಣಿ ಕಲಾವಿದರಾದ ಎಚ್. ಕೆ. ನಾರಾಯಣ ಅವರಿಂದ ಭಾವಗೀತೆ ಕಾರ್ಯಕ್ರಮ ಜರುಗಿತು. ಜಿ. ಆರ್. ತಿಪ್ಪೇಸ್ವಾಮಿ ಕಾರ್ಯಕ್ರಮ ನಿರ್ವಹಿಸಿ ದರು.

(ಕನ್ನಡನುಡಿ, ನವೆಂಬರ್ 16, 1985)

ಪ್ರಚಾರ ಮಾಧ್ಯಮಕ್ಕೆ ಮಡಿವಂತಿಕೆ ಬೇಡ

ಪ್ರಚಾರ ಮಾಧ್ಯಮಗಳು ಮಡಿವಂತಿಕೆಯ ಸಮಾಜಕ್ಕೆ ಹೆಚ್ಚು ಆದ್ಯತೆ ನೀಡುತ್ತವೆ. ತಮ್ಮ ಪತ್ರಿಕಾಧರ್ಮವನ್ನು ಎತ್ತಿ ಹಿಡಿಯುವಲ್ಲಿ ವಿಫಲಗೊಂಡಿವೆ ಎಂದು ಕಮಲಾ ಹಂಪನಾ ಅವರು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಅವರು ಅನುವಾದಿಸಿದ ಅಂಬೇಡ್ಕರ್ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಕಮಲಾ ಮಾತನಾಡುತ್ತಿದ್ದರು. ಅಂಬೇಡ್ಕರ್ ವಿಚಾರವೇದಿಕೆ ಕಾರ್ಯಕ್ರಮ ಏರ್ಪಡಿಸಿತ್ತು.

ಕಳೆದ ತಿಂಗಳು ತಮ್ಮ ಹುಟ್ಟು ಹಬ್ಬದ ಅಭಿನಂದನಾ ಸಮಿತಿಯ ಆಶ್ರಯದಲ್ಲಿ ನಡೆದ ಸಮಕಾಲೀನ ಸಾಹಿತ್ಯ ಕುರಿತ ವಿಚಾರ ಸಂಕಿರಣದಲ್ಲಿ ಹಲವಾರು ಸಾಹಿತಿಗಳು ಹಾಗೂ ಸಹೃದಯರು ಭಾಗವಹಿಸಿದ್ದರೂ ಕೆಲವು ಪತ್ರಿಕೆಗಳು ಜನರೇ ಇರಲಿಲ್ಲವೆಂದು ಆರೋಪಿಸಿದರು. ಅಲ್ಲದೆ ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮಗಳೂ ಸಮಾರಂಭಕ್ಕೆ ಬರಲಿಲ್ಲವೆಂದು ಟೀಕಿಸಿದ ಕಮಲಾ ಹಂಪನಾ ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ಪ್ರಚಾರ ಮಾಧ್ಯಮಗಳು ಇರುವುದರಿಂದ ದಲಿತರು ಬರೆಯಲು ಸಾಧ್ಯವಿಲ್ಲವೆಂದು ಆರೋಪಿಸಿದರು.

ಮಹಿಳಾ ಸಾಹಿತ್ಯವನ್ನು ಅಸಡ್ಡೆಯಿಂದ ಕಾಣುವ ನಮ್ಮ ವಿಮರ್ಶಕರು ದಲಿತ ಮಹಿಳೆ ಬರೆಯುತಹ ಸಾಹಿತ್ಯದ ಕಡೆ ಗಮನ ಕೊಡುವುದಿಲ್ಲ. ವಿದ್ವತ್ ಪ್ರತಿಭೆ ಅಧಿಕಾರ ಇದ್ದರೂ ದಲಿತರನ್ನು ಬೆಳೆಯಲು ಬಹು ಸಂಖ್ಯಾತರು ಅವಕಾಶ ಕೊಡುವುದಿಲ್ಲವೆಂದರು.

ಅಂಬೇಡ್ಕರ್ ಅವರ 'ಅನಿಹಿಲೇಶನ್ ಅಫ್ ಕಾಸ್ಟ್' ಗ್ರಂಥವನ್ನು ಕಮಲಾ ಹಂಪನಾ ಅವರು ಕನ್ನಡಕ್ಕೆ ಅನುವಾದಿಸಿರುವ 'ಜಾತಿಯ ನಿರ್ಮೂಲನೆ' ಗ್ರಂಥವನ್ನು ಬಿಡುಗಡೆ ಮಾಡಿದ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ॥ ವೃಷಭೇಂದ್ರಸ್ವಾಮಿ ಅವರು ಅಂಬೇಡ್ಕರ್ ಅವರ ವಿಚಾರಗಳನ್ನು ಅನುಷ್ಠಾನಕ್ಕೆ ತಂದರೆ ಮಾತ್ರ ಸಮಾಜದ ಉದ್ಧಾರ ಸಾಧ್ಯ ಎಂದರು.

ಮಾಜಿ ಶಾಸಕ ಎಂ. ಎಚ್. ಜಯಪ್ರಕಾಶ್ ನಾರಾಯಣ್ ಅವರು ಸಮಾರಂಭದಲ್ಲಿ ಮಾತನಾಡಿದರು. ಅಂಬೇಡ್ಕರ್ ವಿಚಾರ ವೇದಿಕೆಯ ವ್ಯವಸ್ಥಾಪಕ ಟಿ. ಕೆಂಪಹನುಮಯ್ಯ ಅವರು ಸ್ವಾಗತಿಸಿದರು. ಟಿ. ಕೆ. ಮಹಮೂದ್ ವಂದಿಸಿದರು.

ಮುಂಗಾರು ವರದಿಯಿಂದ

ಕಮಲಾ ಹಂಪನಾ ಅವರಿಗೆ ಅಭಿನಂದನೆ

ಬದುಕಿನಿಂದ ಬರಹದವರೆಗೆ ಪ್ರಗತಿಪರ ಆಲೋಚನೆ ಹಾಗೂ ವೈಚಾರಿಕ ಚಿಂತನೆಯ ಹಾದಿ ತುಳಿದು, ಸಂಘರ್ಷದ ಜೊತೆ ಜೊತೆಗೇ ಸಾಹಿತ್ಯ ಕ್ಷೇತ್ರದ ಬಹುತೇಕ ಎಲ್ಲ ಪ್ರಕಾರಗಳಲ್ಲಿ ಕೃಷಿ ಮಾಡಿ ಗಣನೀಯ ಸ್ಥಾನಕ್ಕೇರಿದ ಓರ್ವ ದಲಿತ ಮಹಿಳೆ ಕಮಲಾ ಹಂಪನಾ ಅವರಿಗೆ ಬೆಂಗಳೂರು ನಗರದಲ್ಲಿ ಭಾನುವಾರ ನಡೆದ ಸುಂದರ ಸಮಾರಂಭವೊಂದಲ್ಲಿ ಅವರ ಅಭಿಮಾನಿ ಬಳಗದವರು ಆತ್ಮೀಯ ಅಭಿನಂದನೆ ಸಲ್ಲಿಸಿದರು.

ಕಮಲಾ ಹಂಪನಾ ಅಭಿನಂದನಾ ಸಮಿತಿಯು ರಾಜ್ಯ ಯುವಕ ಕೇಂದ್ರದ 'ಯವನಿಕಾ'ದಲ್ಲಿ ವ್ಯವಸ್ಥೆಗೊಳಿಸಿದ್ದ ಈ ಸಮಾರಂಭದಲ್ಲಿ ಖ್ಯಾತ ಲೇಖಿಕಿ ಡಾ॥ ಅನುಪಮಾ ನಿರಂಜನ ಅವರು ಕಮಲಾ ಹಂಪನಾ ಅವರನ್ನು ಸನ್ಮಾನಿಸಿದರು.

ಕಮಲಾ ಅವರು ಪ್ರತಿಕೂಲ ಪರಿಸ್ಥಿತಿಯಲ್ಲಿ ಹೋರಾಟ ಮಾಡಿಕೊಂಡು ಬೆಳೆದು ಬಂದಿದ್ದಾರೆ. ಲೇಖಿಕಿಯಾಗಿ, ವಾಗ್ಮಿಯಾಗಿ, ಉತ್ತಮ ಉಪನ್ಯಾಸಕರಾಗಿ ಗೃಹಿಣಿಯಾಗಿ ನಾಡಿನ ಮಹಿಳೆಯರಿಗೆ ಆದರ್ಶಪ್ರಾಯರಾಗಿದ್ದಾರೆ ಎಂದು ಈ ಸಂದರ್ಭದಲ್ಲಿ ಮಾತನಾಡಿದ ನಿರಂಜನ ಅವರು ನುಡಿದರು. ಕನ್ನಡದಲ್ಲಿ ಅತ್ಯಂತ ಹೆಚ್ಚು ವಿಮರ್ಶಾ ಗ್ರಂಥಗಳನ್ನು ರಚಿಸಿರುವ ಲೇಖಿಕಿಯರಲ್ಲಿ ಇವರು ಮೊದಲನೆಯವರಾಗಿದ್ದಾರೆ ಎಂದು ಅವರು ಹೇಳಿದರು.

ವಿವಿಧ ಲೇಖಕರ ೫೧ ಕೃತಿಗಳ ವಿಮರ್ಶೆಯನ್ನೊಳಗೊಂಡ 'ಕಮಲಾಭಿನಂದನ' ಎಂಬ ಅಭಿನಂದನಾ ಗ್ರಂಥವನ್ನು ಈ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ॥ ಆರ್. ಸಿ. ಹಿರೇಮಠ ಅವರು ಬಿಡುಗಡೆ ಮಾಡಿದರು.

ವಿದ್ವಜ್ಜನರೆನಿಸಿಕೊಳ್ಳುವ ನಾವು ಬಹಳ ಆರೋಗ್ಯಪೂರ್ಣ ಮನಸ್ಸನ್ನು ಇಟ್ಟುಕೊಂಡಿಲ್ಲ. ಸ್ನೇಹಿತರು ಸಂತಸಪಡುವುದನ್ನು, ಮೇಲೆ ಬರುವುದನ್ನು ಕಂಡು ಆನಂದ ಪಡುವ ಬದಲು ಕೊಂಕು ನುಡಿಯುವ ವಕ್ರದೃಷ್ಟಿ ಬೆಳೆಸಿಕೊಂಡಿದ್ದೇವೆ ಎಂದು ಅಭಿನಂದನಾ ಭಾಷಣದಲ್ಲಿ ನುಡಿದ ರಾಜ್ಯ ನಾಟಕ ಅಕಾಡಮಿ ಅಧ್ಯಕ್ಷ ಡಾ। ಚಂದ್ರಶೇಖರ ಕಂಬಾರ ಅವರು ಕಮಲಾ ಅವರಿನ್ನೂ ವಿದ್ವಜ್ಜನರು ಇದೇ ರೀತಿಯ ವಕ್ರದೃಷ್ಟಿಯಿಂದ ನೋಡುತ್ತಿದ್ದಾರೆ ಎಂದು ಟೀಕಿಸಿದರು.

ಶೂದ್ರರಾಗಲಿ, ಮಹಿಳೆಯರಾಗಲಿ ಲೇಖನಿ ಹಿಡಿದಿರುವುದೇ ೨೦ ನೇ ಶತಮಾನದ ಒಂದು ದೊಡ್ಡ ಪವಾಡ ಎಂದು ಅಭಿಪ್ರಾಯ ಪಟ್ಟ ಅವರು ಇಂತಹ ಪರಿಸ್ಥಿತಿಯಲ್ಲಿ ಕಮಲಾ ಹಂಪನಾ ಅವರ ಸಾಧನೆ ಅತ್ಯಂತ ಮಹತ್ವದ್ದಾಗಿದೆ ಎಂದು ನುಡಿದರು.

ಕಮಲಾವ್ಯೂಹ

ಇಷ್ಟವಾದ ಬಣ್ಣ	:	ಕೆನೆ ಹಾಲಿನ ಬಣ್ಣ (crcam colour)
ತಿಂಡಿ	:	ಪತ್ರಡೆ [ಕೆಸುವೆ ಎಲೆಯಿಂದ ಮಾಡುವ ತಿಂಡಿ]
ಪಾನೀಯ	:	ಕಾಫಿ
ಮುಂಜಾನೆಯಲ್ಲಿ	:	ವಾಯುವಿಹಾರ
ಸಂಜೆಯಾದಾಗ	:	ಐದು ನಿಮಿಷ ಗಿಡಗಳೊಡನೆ ಮಾತುಕತೆ
ಪತಿಯ ಬಗ್ಗೆ	:	ಅತೀವ ಪ್ರೀತಿ
ಉಡುಪುಗಳಲ್ಲಿ	;	ಸಾಂಪ್ರದಾಯಿಕ ಉಡುಗೆ ಇಷ್ಟ
ಹೂಗುಂಪಿನಲ್ಲಿ	:	ಮಲ್ಲಿಗೆ, ಕೆಂಡಸಂಪಿಗೆ
ಸುಂದರ ಕ್ಷಣಗಳನ್ನು ಕಳೆಯುವ ರೀತಿ	:	ಸಾಹಿತ್ಯಿಕ ಚರ್ಚೆ, ಸಾಹಿತ್ಯಿಕ ಚಿಂತನೆ
ವೃತ್ತಿ ಹೇಗಿದೆ	:	ಸಂತೃಪ್ತಿ ತಂದಿದೆ
ಸಾಹಿತ್ಯ ಕೃಷಿಯ ಬಗ್ಗೆ ವ್ಯಾಮೋಹ	:	ಇದೆ
ಮನಸ್ಸನ್ನು ತಟ್ಟಿದ ನೋಡಬಹುದಾದ ಸ್ಥಳ	:	ಸಮ್ಮೇದ ಶಿಖರಗಳ ಶ್ರೇಣಿ
ಕ್ರೀಡೆಯಲ್ಲಿ ಆಸಕ್ತಿ	:	ಇದೆ
ನೆನಪು ತರುವ ನೋವು	:	ಕೆಲವರು ನಮ್ಮಿಂದ ಉಪಕೃತರಾಗಿ ನಮಗೇ ದ್ರೋಹ ಬಗೆದದ್ದು
ಸದಾ ಇರುವ ನಲಿವು	:	ಶ್ರೀ ಹಂಪನಾ ಪ್ರೀತಿ
ಮಕ್ಕಳ ಬಗ್ಗೆ	:	ಹೆಮ್ಮೆ
ಹವ್ಯಾಸ	:	ಸಂಗೀತ, ತೋಟಗಾರಿಕೆ, ಪ್ರವಾಸ
ಮಹಿಳೆಯರ ಬಗ್ಗೆ	:	ಮಹಿಳೆಯರ ಮೇಲೆ ನಿರಂತರ ನಡೆಯುತ್ತಿರುವ ಶೋಷಣೆ, ಅತ್ಯಾಚಾರದ ಬಗ್ಗೆ ಮರುಕ. ಅವುಗಳನ್ನು ಎದುರಿಸುವಲ್ಲಿ ಆವಳಿಗೆ ಬೇಕಾದ ಶಿಕ್ಷಣ ಕೊಡುವುದು ಎಚ್ಚರಿಗೆ ಮೂಡಿಸುವುದು ತೀರ ಅಗತ್ಯವಾಗಿ ಆಗಬೇಕಾದ ಕೆಲಸ

ಬಯಸುವುದು	:	ಏಕಾಂತ ಅಥವ ಸಮೂಹ. ಕೆಲವೊಮ್ಮೆ ಏಕಾಂತ ಪ್ರಿಯವಾದರೆ ಮತ್ತೆ ಕೆಲವೊಮ್ಮೆ ಸಮೂಹ ಪ್ರಿಯವಾಗುವುದು.
ಪ್ರಸಾರವಾಗುವ ಪತ್ರಿಕೆಗಳ ಬಗ್ಗೆ	:	ಪತ್ರಿಕಾಧರ್ಮವನ್ನು ಕಾಪಾಡುವಲ್ಲಿ 'ಪ್ರಜಾವಾಣಿ' ಹಾಗೂ 'ಸುಧಾ' ನನಗೆ ಮೆಚ್ಚುಗೆಯಾಗಿದೆ.
ಕರ್ನಾಟಕ ಮತ್ತು ಕನ್ನಡ ಜನದ ಬಗೆಗಿರುವ ನಿಲುವು	:	ಅಭಿಮಾನ
ಅಲಂಕಾರ (ಬೇಕೆ, ಬೇಡವೆ)	:	ಮಿತವಾದ, ಹಿತವಾದ ಅಲಂಕಾರ ಬೇಕು
ಆಭರಣಗಳಲ್ಲಿ ಮೆಚ್ಚಿಕೆಯಾದುದು	:	ಉಂಗುರ

ಇವೆಲ್ಲವೂ ಕರ್ಣನಿಗೆ ದುರಂತ ಬಲೆ ನೇಯ್ದಂಥ ಚಕ್ರವ್ಯೂಹಗಳಲ್ಲ. ಇಂದಿನ ಮಂತ್ರಿಗಳಿಗೆ ಬಿಕ್ಕಟ್ಟಿಗೆ ಸಿಕ್ಕಿಸುವ ಪದ್ಮವ್ಯೂಹಗಳೂ ಅಲ್ಲ. ಬದುಕಿನಲ್ಲಿ ಆಸಕ್ತಿ ತಾಳಲು ಸೃಷ್ಟಿಗೊಂಡ ರಸಪಾಕಗಳು. ಇವಿಷ್ಟೇ ಮುಖ್ಯವಲ್ಲ. ಇದರಾಚೆಗೂ ಇನ್ನಷ್ಟು ಚೆಲ್ಲಾಡಿಕೊಂಡಿರುವುದೂ ನಿಜ.

ಪ್ರಕಟಣಾ ಸಮಿತಿಯ ಅಧ್ಯಕ್ಷರಾಗಿ

ಹೊಂದಾವರೆಗೆ

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಹರ್ತಿಕೋಟೆಯ ದಿವಂಗತ ಹೆಚ್. ವಿ. ವೀರನಾಯಕರು ('ಹರತಿ') ಅಲ್ಲಿಯ ನಾಯಕ ಮನೆತನ ಹಾಗೂ ಆ ಜಿಲ್ಲೆಯ ಇತರ ಪಾಳೆಯಪಟ್ಟುಗಳ ಬಗೆಗೆ ವಿಶೇಷ ಅಧ್ಯಯನ ನಡೆಸಿದ ಮಹನೀಯರಲ್ಲೊಬ್ಬರು. ಪ್ರಾದೇಶಿಕ ಇತಿಹಾಸದ ಉಳಿವು – ಬೆಳವಿಗೆ ಅವರು ಪಟ್ಟಿರುವ ಶ್ರಮ, ಮಾಡಿರುವ ಕೃಷಿ ಸ್ಮರಣಾರ್ಹ. ಸ್ಥಳೀಯವಾಗಿ ಲಭ್ಯವಿರುವ ಮೂಲದಾಖಲೆಗಳನ್ನು ಸಂಗ್ರಹಿಸಿ. ಅಧ್ಯಯನ ನಡೆಸಿ, ಈ ಜಿಲ್ಲೆಯ ಇತಿಹಾಸದಲ್ಲಿ ಎದುರಾದ ಹಲವಾರು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಶ್ರದ್ಧೆ ವಹಿಸಿ ದುಡಿದಂತಹವರು. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಶೋಧಕರಿಗೆ ಅಗತ್ಯ ಮಾಹಿತಿ ಒದಗಿಸಿ ಅವರ ಕಾರ್ಯ ಸುಗಮವಾಗಿ ನಡೆಯುವಂತೆ ಮಾಡಿದ ಪ್ರೋತ್ಸಾಹಕರಿವರು. ಚಿತ್ರದುರ್ಗ ಇತಿಹಾಸಕ್ಕೆ ಅವರು ಸಲ್ಲಿಸಿರುವ ಸೇವೆ ಪರಿಗಣಿಸಲರ್ಹವಾದುದು. ಅವರು ಇತಿಹಾಸ ವಸ್ತುವನ್ನು ಪ್ರೀತಿಸಿ, ಅದಕ್ಕಾಗಿಯೇ ದುಡಿಯುತ್ತಾ ಮಡಿದವರು. ಅವರ ಬರಹಗಳು ಬಹುಮಟ್ಟಿಗೆ ಶಾಸ್ತ್ರೀಯ ನೆಲೆಗಟ್ಟಿನ ಮೇಲೆ ರಚಿತಗೊಂಡಿದ್ದು, ಅವರನ್ನು ಸಂಶೋಧಕರ ಸಾಲಿಗೆ ಸೇರಿಸಲು ನೆರವಾಗಿವೆ. ಸ್ಥಳೀಯ ಇತಿಹಾಸದ ಏಳಿಗೆ ಮತ್ತು ಪ್ರಚಾರ ಕಾರ್ಯದಲ್ಲಿ ಅವರು ಹೊಂದಿದ್ದ ಉತ್ಸಾಹ ಅದಮ್ಯ. ಇತಿಹಾಸದ ಬಗೆಗೆ ಅವರಲ್ಲಿದ್ದ ಒಲವು ಅವರನ್ನು ಇತರರು 'ಇತಿಹಾಸಜ್ಞ' ಎಂದು ಗೌರವದಿಂದ ಕರೆಯುವಂತೆ ಪ್ರೇರೇಪಿಸಿತು. ಒಟ್ಟಿನಲ್ಲಿ, ಅವರ ರಚನೆಗಳು ಕರ್ನಾಟಕದ ಪ್ರಾದೇಶಿಕ ಇತಿಹಾಸದಲ್ಲಿ ಇನ್ನೂ ಬೆಸೆಯಲಾಗದ ಕೆಲವು ಕೊಂಡಿಗಳನ್ನು ಸೇರಿಸುವ ಪ್ರಾಮಾಣಿಕ ಪ್ರಯತ್ನದ ದ್ಯೋತಕವೆನಿಸಿವೆ ಎಂದು ನಿರ್ಭಿಡೆಯಿಂದ ಹೇಳಬಹುದು.

೧೯೮೩ ಮಾರ್ಚ್ ೨೬ರಂದು ಹರತಿ ವೀರನಾಯಕರು ಕಣ್ಮರೆಯಾದುದರಿಂದ ಅವರ ಜಿಲ್ಲೆಯ ಇತಿಹಾಸ ಸಂಶೋಧನ ಕ್ಷೇತ್ರಕ್ಕೂ ಸಾರ್ವಜನಿಕ ಕ್ಷೇತ್ರಕ್ಕೂ ಭರಿಸಲಾಗದ ನಷ್ಟವಾಗಿದೆ ಎಂಬುದು ಉತ್ಪ್ರೇಕ್ಷೆಯಲ್ಲ. ಹರ್ತಿಕೋಟೆಯನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಲು ಅವರು ಹಲವಾರು ಯೋಜನೆಗಳನ್ನು ರೂಪಿಸಿದ್ದರು. ಆ ದಿಸೆಯಲ್ಲಿ ಕೆಲವು ಪ್ರಯೋಗಗಳನ್ನೂ ನಡೆಸಿದ್ದರು. "ವಾಲ್ಮೀಕಿ ಸಾಹಿತ್ಯ ಸಂಪದ"ವನ್ನು ಸ್ಥಾಪಿಸಿ ಇತಿಹಾಸ, ಧರ್ಮ ಮತ್ತು ಸಾಹಿತ್ಯ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದ್ದರು. ಈ ಮಾಲೆಯಲ್ಲಿ ಈಗಾಗಲೇ ಐದು–ಆರು ಪುಸ್ತಕಗಳು ಅಚ್ಚಾಗಿವೆ. ಸಾರ್ವಜನಿಕ ರಂಗಮಂದಿರವೊಂದರ ನಿರ್ಮಾಣದಲ್ಲಿ ಅವರು ಆಸಕ್ತಿ ವಹಿಸಿದ್ದು ನಶಿಸುತ್ತಿರುವ ಗ್ರಾಮ ಕಲೆಯ ಅಭಿವೃದ್ಧಿಗೆ ನೆರವಾಗಲು ಬಯಸಿದ್ದರು. ಇತಿಹಾಸ ಶೋಧಕರು ಕೈಗೊಳ್ಳುವ ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹಣೆ, ವಿಚಾರ ವಿನಿಮಯ ಇತ್ಯಾದಿಗಳಲ್ಲಿ ಅವರು ನಿರ್ವಹಿಸುತ್ತಿದ್ದ ಪಾತ್ರ ಅಭಿನಂದನೀಯವಾದುದು. ಬೌದ್ಧಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ಅನುಭವವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸಾರ ಮಾಡುವಂತಹ ಕೈಂಕರ್ಯ ಕೈಗೊಂಡಿದ್ದರು. ಸಂಶೋಧನೆ ಮಾತ್ರವಲ್ಲದೆ ಸೃಜನಶೀಲ ಸಾಹಿತ್ಯ ರಚನೆಯಲ್ಲೂ

ಅವರು ಸಿದ್ಧಹಸ್ತರಾಗಿದ್ದರೆನ್ನುವುದಕ್ಕೆ ಅವರ ಬರಹಗಳೇ ಆಧಾರವಾಗಿವೆ. ಸಾಮಾಜಿಕ ಕರ್ತವ್ಯ ನಿರ್ವಹಣೆಯಲ್ಲಿ ಮುಂದಾಳುಗಳಾಗಿಯೂ ಉತ್ತಮ ಸಂಘಟಕರಾಗಿಯೂ ಮಾರ್ಗದರ್ಶಕರಾಗಿಯೂ ಇದ್ದು, ದೇಶ-ಭಾಷೆ-ಜನಾಂಗ ಇತ್ಯಾದಿಗಳ ಬಗೆಗೆ ಜಾಗೃತಿ ಮೂಡಿಸುವಲ್ಲಿ ಅವರು ಯಾವ ಅತಿರೇಕ ಗಳಿಗೂ ಅವಕಾಶ ನೀಡದಂತೆ ಸೇವಾ ಮನೋಭಾವನೆಯಿಂದ ಸದ್ದಿಲ್ಲದೆ ಕಾರ್ಯೋನ್ಮುಖರಾಗಿದ್ದರು.

ನಾಡವರಿಗೆ ಉಪಯುಕ್ತರಾಗಿಯೂ ಸ್ಫೂರ್ತಿದಾಯಕರಾಗಿಯೂ ಇದ್ದ ಇಂತಹವರ ಸಾಧನೆಗಳು-ಬದುಕು-ಬರಹಗಳು ಅವರ ನಿರ್ಗಮನದೊಂದಿಗೇ ಮರೆಯಾಗಬಾರದೆಂಬ ಏಕೈಕ ಉದ್ದೇಶದಿಂದ, ಬೌದ್ಧಿಕ ಚಟುವಟಿಕೆಗಳಿಗೆ ಪೋಷಕರಾಗಿ ನಿಂತ ಅವರ ಬಗೆಗಿನ ಗೌರವದಿಂದ, ಹರತಿ ವೀರನಾಯಕರಿಗೆ ಉಚಿತ ಸ್ಮಾರಕ ಸ್ಥಾಪಿಸಬೇಕು, ಅವರ ಉದಾತ್ತವಾದ ಆದರ್ಶಗಳು ಇತರರಿಗೆ ಮಾರ್ಗದರ್ಶಕವಾಗಿ ಉಳಿಯಬೇಕು ಎಂಬ ಅವರ ಅಭಿಮಾನಿಗಳ, ಸ್ನೇಹಿತರ, ಬಂಧುಗಳು ಅಭಿಲಾಷೆಯಿಂದ ಅವರ ನೆನಪಿಗೆ **'ಹರತಿ ಸಿರಿ'** ಎಂಬ ಸ್ಮರಣ ಗ್ರಂಥವನ್ನು ಪ್ರಕಟಿಸಲು ನಿರ್ಧರಿಸಲಾಗಿದೆ.

ವಾಲ್ಮೀಕಿ ಸಾಹಿತ್ಯ ಸಂಘದ ವತಿಯಿಂದ ಹೊರತರುತ್ತಿರುವ ಎಚ್. ವಿ. ವೀರನಾಯಕ (ಹರತಿ) ನೆನಪಿನ ಸಂಪುಟ ಪ್ರಕಟಣ ಸಮಿತಿಯ ಅಧ್ಯಕ್ಷರಾಗಿಯೂ ಪ್ರೊ॥ ಕಮಲಾ ಹಂಪನಾ ಅವರು ಆಯ್ಕೆಯಾಗಿದ್ದಾರೆ-ಎಂದು ಸಂಸ್ಮರಣ ಗ್ರಂಥದ ಸಂಪಾದಕರಾದ ಲಕ್ಷ್ಮಣ್ ತೆಲಗಾವಿಯವರು ತಿಳಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾದೆಮಿ

ಬೆಂಗಳೂರು

ಗೌರವ ಪ್ರಶಸ್ತಿ 1985

ಶ್ರೀಮತಿ ಕಮಲಾ ಹಂಪನಾ ಅವರು
ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಅಮೂಲ್ಯ ಸೇವೆಗಾಗಿ
ಕರ್ನಾಟಕ ಸಾಹಿತ್ಯ ಅಕಾದೆಮಿಯು ಅವರಿಗೆ
ನಟರಾಜ ವಿಗ್ರಹ, ಶಾಲು ಮತ್ತು
ಏಳೂವರೆ ಸಾವಿರ ರೂಪಾಯಿಗಳೊಂದಿಗೆ ನೀಡಿದ
ಪ್ರಶಸ್ತಿ ಪತ್ರ

(ಸಿಂ.ರಾ. ಹೊನ್ನಲಿಂಗಯ್ಯ)
ರಿಜಿಸ್ಟ್ರಾರ್

(ಪ್ರೊ|| ಕೆ.ಎಸ್. ನಿಸಾರ್ ಅಹಮದ್)
ಅಧ್ಯಕ್ಷರು

(ಡಾ|| ವಿ.ಕೃ. ಗೋಕಾಕ್)
ಮುಖ್ಯ ಅತಿಥಿ

ಬೆಂಗಳೂರು · 31 ಮಾರ್ಚ್ 1986

ಕಮಲಾ ಹಂಪನಾ ಅವರ ಕೃತಿಗಳು

ಕಥಾ ಸಂಕಲನ

1. ನಕ್ಕಿತು ಹಾಲಿನ ಬಟ್ಟಲು
   ಹರ್ಷವರ್ಧನ ಪ್ರಕಾಶನ, ಬೆಂಗಳೂರು 1971

2. ರಕ್ಕೆ ಮುರಿದಿತ್ತು
   ಸುಂದರ ಪ್ರಕಾಶನ, ಧಾರವಾಡ 1982

3. ಚಂದನಾ
   ವರ್ಧಮಾನ ಪ್ರಕಾಶನ, ಬೆಂಗಳೂರು 1982

ಶಿಶು ಸಾಹಿತ್ಯ

5. ಅಕ್ಕಮಹಾದೇವಿ
   ಐ. ಬಿ. ಎಚ್. ಪ್ರಕಾಶನ, ಬೆಂಗಳೂರು 1971 (ಮಾರ್ಚ್) 1970

4. ಹೆಳವನಕಟ್ಟೆ ಗಿರಿಯಮ್ಮ
   ಐ. ಬಿ. ಎಚ್. ಪ್ರಕಾಶನ, ಬೆಂಗಳೂರು 1970 (ಮೊದಲ ಮುದ್ರಣ), 1971 (ಎರಡನೇ ಮುದ್ರಣ)

6. ವೀರವನಿತೆ ಓಬ್ಬವ್ವೆ
   ಐ. ಬಿ. ಎಚ್. ಪ್ರಕಾಶನ, ಬೆಂಗಳೂರು 1971

7. ಮುಳುಬಾಗಿಲು
   ಐ. ಬಿ. ಎಚ್. ಪ್ರಕಾಶನ, ಬೆಂಗಳೂರು 1973

8. ಜಸ್ನ
   ರಾಷ್ಟ್ರೋತ್ಥಾನ ಪರಿಷತ್ತು, ಬೆಂಗಳೂರು 1974

9. ಚಿಕ್ಕವರಿಗಾಗಿ ಚಿತ್ರದುರ್ಗ
ಪ್ರಭು ಪ್ರಕಾಶನ 1980

10. ಡಾ॥ ಬಿ. ಆರ್. ಅಂಬೇಡ್ಕರ್
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1980

ಅನುವಾದ

11. ಬೀಜಾಕ್ಷರ ಮಾಲೆ
ಶ್ರೀ ಡಿ. ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ

ಸಂಪಾದಿತ

12. ಸುಕುಮಾರ ಚರಿತೆಯ ಸಂಗ್ರಹ
ಹರ್ಷವರ್ಧನ ಪ್ರಕಾಶನ, ಬೆಂಗಳೂರು, ಪ್ರಥಮ ಮುದ್ರಣ 1965. ದ್ವಿತೀಯ ಮುದ್ರಣ 1966

13. ಭರತೇಶ ವೈಭವ
(ಹಂಪನಾ ಹಾಗೂ ಪ್ರೊ : ಜಿ. ಬ್ರಹ್ಮಪ್ಪ ಅವರೊಂದಿಗೆ) ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರು 1967

14. ಕೆ. ಎಸ್. ಧರಣೇಂದ್ರಯ್ಯನವರ ಸ್ಮೃತಿ ಗ್ರಂಥ
ಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರು, ಧರ್ಮಸ್ಥಳ 1971

15. ಶ್ರೀಪಚ್ಚೆ
(ಸ್ಮರಣ ಸಂಚಿಕೆ) : ಪಿ. ಪಿ. ಪಿ. ಪ್ರಕಾಶನ, ಗೌರಿಬಿದನೂರು 1976

16. ಸಹಸ್ರಾಭಿಷೇಕ (ಸ್ಮರಣ ಸಂಚಿಕೆ)
ಸಹಸ್ರಾಭಿಷೇಕ ಪ್ರಕಾಶನ, ಬೆಂಗಳೂರು 1981

17. ಚಾವುಂಡರಾಯ ಪುರಾಣ
(ಕೆ. ಆರ್. ಶೇಷಗಿರಿ ಅವರೊಡನೆ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1982.

18. ಡಾ॥ ಡಿ. ಎಲ್. ನರಸಿಂಹಾಚಾರ್ಯರ ಆಯ್ದ ಲೇಖನಗಳು
ವಿಶ್ವ ಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು 1982

ಜೀವನ ಚರಿತ್ರೆ

19. ಮಹಾವೀರ : (ಹಂಪನಾ ಒಡಗೂಡಿ)
ಭೂಪಾಲಂ ಪ್ರಕಾಶನ, ಬೆಂಗಳೂರು 1974

ಸಂಶೋಧನೆ

20. ಶಾಂತಿನಾಥ
(ಪ್ರಚಾರೋಪನ್ಯಾಸ ಮಾಲೆ) ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.
ಪ್ರಥಮ ಮುದ್ರಣ 1972, ದ್ವಿತೀಯ ಮುದ್ರಣ 1981

21. ಆದರ್ಶ ಜೈನ ಮಹಿಳೆಯರು
ಶ್ರೀ ಮಹಾವೀರ ಮಿಷನ್, ಬೆಂಗಳೂರು 1968

22. ಮಹಾವೀರರ ಜೀವನ ಸಂದೇಶ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು 1975

23. ಜೈನ ಸಾಹಿತ್ಯ ಪರಿಸರ
ವರ್ಧಮಾನ ಪ್ರಕಾಶನ, ಬೆಂಗಳೂರು 1982

24. ಅನೇಕಾಂತವಾದ
ವರ್ಧಮಾನ ಪ್ರಕಾಶನ, ಬೆಂಗಳೂರು 1982

25. ನಾಡು-ನುಡಿ-ನಾವು
ರಾಜ್ಯಶ್ರೀ ಪ್ರಕಾಶನ, ಬೆಂಗಳೂರು 1971

ವ್ಯಕ್ತಿ ಚಿತ್ರಗಳು

26. ಮುಡಿಮಲ್ಲಿಗೆ
ವರ್ಧಮಾನ ಪ್ರಕಾಶನ, ಬೆಂಗಳೂರು 1982

27. ಆಮುಖ
ವರ್ಧಮಾನ ಪ್ರಕಾಶನ, ಬೆಂಗಳೂರು 1985

ವಚನಗಳು

28. ಬಿಂದಲಿ
ಹರ್ಷವರ್ಧನ ಪ್ರಕಾಶನ, ಬೆಂಗಳೂರು 1984

ವೈಚಾರಿಕತೆ

29. ಬಾಸಿಂಗ
ಸುಂದರ ಪ್ರಕಾಶನ, ಮಾಳಮಡ್ಡಿ, ಧಾರವಾಡ 1985

30. ಜಾತಿ ನಿರ್ಮೂಲನೆ
ಅಮರ ಸಾಹಿತ್ಯ, ಬೆಂಗಳೂರು 1985

'ಬಿಂದಲಿ' ಗೆ ಬಂದ ಅಭಿಪ್ರಾಯಗಳು

V. K. Gokak

Dear Smt. Hampana

Thank you for a copy of 'BINDALI', which I very much appreciate the one that I liked very much in this collection is the last one, which brings out two centrasting images relating to the same unfortunate bride. You have worked extensively and experimented with many literary forms in Kannada. I am sure we can exptect equally interesting work from you for many many years.

with kind regards and all good wishes

ರಂ. ಶ್ರೀ. ಮುಗಳಿ

ನೀವು ನನಗೆ ಕಳಿಸಿಕೊಟ್ಟ 'ಬಿಂದಲಿ' ಯನ್ನು ಓದಿ ನೋಡಿದೆ. ನಿಮ್ಮ ವಚನಗಳ ಸಂಕಲನಕ್ಕೆ ಒಳ್ಳೆಯ ಹೆಸರನ್ನು ಇಟ್ಟಿದ್ದೀರಿ. ಈವರೆಗೆ ಅನೇಕರಿಂದ ಬೆಳೆದುಬಂದ ಆಧುನಿಕ ವಚನ ರಚನೆ ನಿಮ್ಮ 'ಮಿನಿ ಮಿನುಗು' ಗಳಿಂದ ಹೊಸ ಕಳೆಯನ್ನು ಪಡೆದಿದೆ. ಇದರಲ್ಲಿ ಆತ್ಮಶೋಧನೆ, ಸಮಾಜ ವಿಡಂಬನೆ, ಆಧುನಿಕ ಜೀವನದ ದಾರುಣತೆ, ಕನ್ನಡ ಸಮಸ್ಯೆ ಮುಂತಾದ ವಿಷಯಗಳಿಗೆ ನೀವು ಸೃಜನಶೀಲವಾಗಿ ಸ್ಪಂದಿಸಿರುವುದು ಎದ್ದು ಕಾಣುತ್ತದೆ. ನನಗೆ ೨೦, ೨೧, ೨೨, ೨೭, ೩೦, ೩೧ ಈ ಮುಂತಾದುವು ಹೆಚ್ಚು ಮೆಚ್ಚಿಕೆಯಾದವು. ಅಲ್ಲಲ್ಲಿ ಸ್ವಾಭಾವಿಕವಾಗಿ ಶರಣರ ವಚನಗಳ ಅನುಕರಣವಿದೆ. ಕೆಲವೆಡೆಗೆ ಮಾತು, ಟೀಕೆ ಹೆಚ್ಚು ವಾಚ್ಯವಾಗಿವೆ. ನೀವು ಬರೆಯುತ್ತ ಹೋದಂತೆ ವ್ಯಂಗ್ಯಸರಣಿಯ ಸಾರ್ಥಕತೆ ನಿಮ್ಮ ವಚನಗಳಲ್ಲಿ ಕಂಡುಬರುವುದು

ಗೀತಾ ಕುಲಕರ್ಣಿ

ಕಮಲಾ ಹಂಪನಾರವರ 'ಬಿಂದಲಿ' ಒಂದು ಉತ್ತಮ ಕೃತಿ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಹುಳಿ ಮಜ್ಜಿಗೆಯಿಂದ ತೆಗೆದ ಬಿಳಿ ಬೆಣ್ಣೆಯಂತೆ ಕಮಲಾ ಅವರು ತಮ್ಮ ಅನುಭವದ ಕಡೆಗೋಲಿನಿಂದ ಸುತ್ತಲಿನ ಸಮಾಜದ ನಿತ್ಯ ಬದುಕಿನ ಆಗು ಹೋಗುಗಳಿಂದ ಅಮೂಲ್ಯವಾದ ವಿಚಾರಗಳನ್ನು ಎತ್ತಿ ತೆಗೆದಿದ್ದಾರೆ. ಅಲ್ಲಿನ ಒಂದೊಂದು ವಚನಕ್ಕೂ ಆದರದೇ ಆದ

ಸೊಬಗಿದೆ. ಆಳವಿದೆ. ಅರ್ಥವಿದೆ. ಕಮಲಾ ಅವರ ಹತ್ತು ಹಲವು ಬಗೆಯ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಇವರ ಸಂಕಲನ 'ಬಿಂದಲಿ'.

ಇಲ್ಲಿ ಇವರನ್ನು ಪತ್ನಿ, ಪ್ರೇಯಸಿಯಾಗಿ, ಸೋದರಿಯಾಗಿ, ಸ್ನೇಹಿತೆಯಾಗಿ, ಗೃಹಿಣಿಯಾಗಿ, ಸಮಾಜದ ಅಂಕುಡೊಂಕುಗಳ ಎತ್ತಿ ತೋರಿಸಿ ಹೀಗಳೆದು, ಪ್ರಶಂಸಿಸಿ ತೋರಿಸಿರುವ ಧೀರೆಯಾಗಿ, ಬುದ್ಧಿಜೀವಿಯಾಗಿ ಆಧ್ಯಾತ್ಮಿಕಳಾಗಿ, ಕನ್ನಡದ ಹೆಮ್ಮೆಯ ಪುತ್ರಿಯಾಗಿ, ಕನ್ನಡದ ದಾಸಳಾಗಿ ಅವರು ತಮ್ಮನ್ನು ವಿವಿಧ ರೂಪಗಳಲ್ಲಿ ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸಿ ಕೊಂಡಿದ್ದಾರೆ.

ಪುಟ ೫೮ರ ವಚನ : "ಮಾನಕೆ ಅಂಜೆ
ಅಭಿಮಾನಕೆ ಅಳುಕೆ
ಹಣ ಅಧಿಕಾರಕೆ ಸೋಲೆ
ನಿಂದಿಸಲು ಕೆರಳೆ ನಾ
ವಂದಿಸಲು ಉಬ್ಬೆ ನಾ
ಕೆಣಕೆ ಕನ್ನಡತನವ
ಆಗ ನಾ ಕಾಳಿ ಮಹಾಕಾಳಿ
ನೋಡು ಕಮಲಾಪ್ರಿಯ"

ಎನ್ನುವಲ್ಲಿ ಕನ್ನಡಕ್ಕಾಗಿ ಕನ್ನಡಿಗನ ರಕ್ತ ಕುದಿಯುತ್ತದೆ. ಈ ಸಂಕಲನದ ಪ್ರತಿ ವಚನದಲ್ಲೂ ಇಂಥ ಆಯ್ದುಕೊಳ್ಳುವ ಮಾತುಗಳಿವೆ. 'ಬಿಂದಲಿ' ಕಮಲಾ ಅವರ ಒಂದು ಅರ್ಥ ಪೂರ್ಣವಾದ ಕೃತಿ.

ಸರೋಜಿನಿ ಶಿಂತ್ರಿ

ತಾವು ಕಳಿಸಿದ 'ಬಿಂದಲಿ'ಯನ್ನು ಓದಿ ಮುಗಿಸಿದೆ. ತಾವು ಕವಿಗಳೂ ಆಗಿದ್ದೀರೆಂಬುದು ಈ ಒಂದೇ ಒಂದು ಕೃತಿಯಿಂದ ವಿಧಿತವಾಗುತ್ತದೆ. ಮುದ್ರಣವೂ ಸ್ವಚ್ಛವಾಗಿದೆ, ಅಂದವಾಗಿದೆ.

ಚೆನ್ನವೀರ ಕಣವಿ

'ಬಿಂದಲಿ' ಯನ್ನು ಶ್ರೀಮತಿ ಕಣವಿಯವರು ಮೊದಲು ಓದಿದರು. ಆಮೇಲೆ ನಾನು ಓದಿದೆ. ಕೆಲವು ವಚನಗಳು ಇಬ್ಬರ ಕುತೂಹಲವನ್ನು ತಣಿಸಿದವು. ನಮ್ಮ ಮನಸ್ಸನ್ನು ಕಾಡುವ ಕೆಲವು ವಿವರಗಳು, ಭಾವನೆಗಳು, ಆ ಕ್ಷಣದ ಚಿಂತನೆಗಳು ಇಲ್ಲಿ ಅಲ್ಲಲ್ಲಿ ಚೆನ್ನಾಗಿ ಅಭಿವ್ಯಕ್ತಿಗೊಂಡಿವೆ. ೧, ೩, ೪, ೬, ೯, ೨೦, ೩೦, ೩೭, ೪೦, ೪೮, ೪೯, ೬೪, ೬೭, ೬೯- ಇವು ಒಂದಲ್ಲ ಒಂದು ರೀತಿಯಿಂದ ನಿಮ್ಮ ತುಡಿತವನ್ನು ಓದುಗರಿಗೆ ಪರಿಣಾಮಕಾರಿಯಾಗಿ ಮುಟ್ಟಿಸಬಲ್ಲವು. ೧೮ ತುಂಬ ಸುಂದರ, ೧೯ ರಲ್ಲಿಯ ಭಾವೋತ್ಕಟತೆ ಧ್ವನಿಪೂರ್ಣವಾಗಿದೆ. ೨೨, ೨೭, ೪೭, ಜೋಕುಗಳಿಗೆ ಈ ರೂಪ ತೊಡಿಸಿದಂತಿದೆ. ೮ರ ಘೋಷಣೆ ಸರಿಯಲ್ಲವೆನಿಸಿತು. ೧೧ರಲ್ಲಿ ಮೊದಲೆರಡು ಸಾಲುಗಳ ಔಚಿತ್ಯ ಅರ್ಥವಾಗದು. ೧೨, ೧೪, ೧೬, ೧೭ ಇವುಗಳಲ್ಲಿಯ ವಿಚಾರಗಳು ಸಮಗ್ರ ದೃಷ್ಟಿಗೂ

ಪಕ್ವತೆಗೂ ವಿಸ್ತರವಾಗಿದೆ ಎನಿಸುತ್ತದೆ. ೧೫, ೪೩ ವೈಯಕ್ತಿಕ ಮಟ್ಟದಲ್ಲಿಯೇ ಉಳಿದು ಬಿಡುತ್ತವೆ. 'ಬಿಂದಲಿಗೊಂದು ಹರಳು' ನನಗೆ ಹೆಚ್ಚು ಮೆಚ್ಚಿಕೆಯಾಯಿತು. ಅಲ್ಲಿಯ ಬರವಣಿಗೆಯು ಚಿಕ್ಕ ಹಾಗೂ ಪ್ರಾಮಾಣಿಕ. ಆಧುನಿಕ ವಚನಕಾರರಲ್ಲಿ ನೀವೂ ಒಬ್ಬರಾದುದು ಸಂತೋಷ ಸಂಗತಿ. ನಮ್ಮಿಬ್ಬರ ಶುಭಾಶಯುಗಳನ್ನು ಸ್ವೀಕರಿಸಿ.

ಅನುಪಮಾ ನಿರಂಜನ

"ಕ್ಷಣದ ಚಿಂತನೆಗಳನ್ನು ಹಿಡಿದುಕೊಡಲು ವಚನ ಸರಿಯಾದ ಪಾತ್ರೆ" ಎಂದು ನೀವು ಬರೆದಿದ್ದೀರಿ. ನನಗನ್ನಿಸುವುದು ನಿಮ್ಮ ಅಭಿವ್ಯಕ್ತಿಗೆ ವಚನ ಅತ್ಯಂತ ಸೂಕ್ತ ಮಾಧ್ಯಮ ಎಂದು. 'ಬಿಂದಲಿ' ಎಂಬ ಹೆಸರೇ ಮಧುರವಾದದ್ದು ; ವಿವಿಧ ಧ್ವನಿಗಳನ್ನು ಹೊರಡಿಸುವಂಥದ್ದು. ಸಂಕಲನದಲ್ಲಿ ಹತ್ತಾರು ವಚನಗಳು ತುಂಬ ಚೆಲುವಾಗಿವೆ. ಎಲ್ಲಕ್ಕಿಂತ ನನಗೆ ಮೆಚ್ಚಿಗೆಯಾದುದು "ಅತ್ತ ಉರಿದು ಬೂದಿಯಾಗದು, ಇತ್ತ ನಂದಿ ತಣ್ಣಗಾಗದು" ಎಂಬುದು. ಉರಿಯುವ ಹೆಣ್ಣು ಜೀವನಗಳಿಗೆಲ್ಲ ಈ ಕಾವ್ಯದ ಮೂಲಕ ನೀವು ದನಿಯಾಗಿದ್ದೀರಿ. ಪದೇಪದೇ ಕಾಡುವ ಈ ಸಾಲುಗಳು ನಮ್ಮ ಕಾವ್ಯ ಸಂದರ್ಭದಲ್ಲಿ ಮಹತ್ವಪೂರ್ಣ.

'ಮನ ಒಡೆದವರ ಮಧ್ಯೆ ಬದುಕಲಾರೆನಯ್ಯ' ಅಥವಾ 'ಎನ್ನಮನ ಒಂದು ಉಂಟು ನೋಡಾ' ಎನ್ನುವಾಗಿನ ವೇದನೆ, ತಾದಾತ್ಮ್ಯ, ತಾಕಲಾಟ, ಸಂಕಟ ಮನಸ್ಸಿನ ವಿವಿಧ ಪದರುಗಳಲ್ಲಿ ತೀವ್ರ ಪ್ರತಿಕ್ರಿಯೆ ಮೂಡಿಸುತ್ತದೆ. ನಿಮ್ಮ ವಚನಗಳ ಹಾಸ್ಯಪ್ರಜ್ಞೆ (೨೬ ಮತ್ತು ೪೬) ಕಂಡು ತುಟಿ ಬಿರಿಸಿ ನಕ್ಕಿದ್ದೇನೆ. 'ನಾನೊಬ್ಬ ನಿರ್ಗತಿಕಳು ಎನಗಾಗಿ ಎನ್ನ ಸಾಹಿತ್ಯಕ್ಕಾಗಿ ಏನೂ ಉಳಿಯಲಿಲ್ಲ' ಎನ್ನುವಾಗಿನ ವ್ಯಥೆ, ಅನೇಕ ಗಂಭೀರ ಲೇಖಕಿಯರ ವ್ಯಥೆಯೂ ಆಗಿದೆ. ಆದ್ದರಿಂದಲೇ ಇದು ಸಾರ್ವತ್ರಿಕ ಸತ್ಯವಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಒಬ್ಬ ಹೆಣ್ಣು ಅನುಭವಿಸುತ್ತಿರುವ ಯಾತನೆಗಳು, ಕವನದಲ್ಲಿ ಇಷ್ಟು ಸಹಜವಾಗಿ ಮತ್ತು ಮನಮಿಡಿಯುವಂತೆ ಚಿತ್ರಿತವಾಗಿರುವುದನ್ನು ಕಂಡು ನನಗೆ ವಿಸ್ಮಯವಾಗಿದೆ.
ಕನ್ನಡನುಡಿ ಮತ್ತು ನಾಡಿನ ಬಗ್ಗೆ ಬರೆದಿರುವ ವಚನಗಳಲ್ಲಿ ಪ್ರಚಾರದ ಅಬ್ಬರ ಜಾಸ್ತಿಯಾಗಿ ಕಾವ್ಯ ಸೊರಗಿದೆ. "ಮಾತೃದೇವೋಭವ ಎಂದು ಮೊದಲಸ್ಥಾನ ಕೊಟ್ಟಿಹರು ನಿನಗೆ" ಎಂಬ ನಿಮ್ಮ ವಾದವನ್ನು ನಾನು ಒಪ್ಪುವುದಿಲ್ಲ. ಈ ಹೆಗ್ಗಳಿಕೆ ಮಂತ್ರಗಳಲ್ಲಿ ಇವೆಯೇ ಹೊರತು ವಾಸ್ತವ ಜೀವನದಲ್ಲಿ ಇಲ್ಲ ಎಂಬುದು ನಿಮಗೂ ಗೊತ್ತು. ಏನೆಂದರೂ 'ಬಿಂದಲಿ' ನನಗೆ ತುಂಬ ಇಷ್ಟವಾಯಿತು.

ಶಾಂತಾದೇವಿ ಮಾಳವಾಡ

ನಿಮ್ಮ ಅನುಭವ ವಿಚಾರ ಭಾವನೆಗಳೆಲ್ಲ ವಚನರೂಪ ತಾಳಿ ಸುಂದರವಾದ 'ಬಿಂದಲಿ'ಯಾಗಿ ಕನ್ನಡ ಸಾಹಿತ್ಯ ಕಣಜ ತುಂಬಿದ್ದೀರಿ. ನಿಮಗೆ ಅಭಿನಂದನೆಗಳು.

ಟಿ. ಎಸ್. ಅನ್ನಪೂರ್ಣ

ಶುಭದ ಸೂಚನೆಯಂತೆ ನಿನ್ನ 'ಬಿಂದಲಿ' ಯುಗಾದಿ ಹಿಂದಿನ ದಿನವೇ ಸುರಕ್ಷಿತವಾಗಿ ಸೇರಿತು. ಅಂದೇ ಆತುರದಿಂದ ಓದಿದೆ. ಅಭಿನಂದನೆಗಳು.

ಸಿ. ಪಿ. ಕೃಷ್ಣಕುಮಾರ್

‘ಬಿಂದಲಿ’ ಯ ವಚನಗಳು ನನ್ನ ನಿರೀಕ್ಷೆಯನ್ನು ಮೀರಿ ಸೊಗಸಿದವು. ೧, ೩, ೬, ೩೦– ಈ ಮೊದಲಾದ ವಚನಗಳು ನಿಜಕ್ಕೂ ಉತ್ತಮ. ಆದರೆ ಬೆಳೆಯ ನಡುವೆ ಕಳೆಯೂ ಇರುತ್ತದಷ್ಟೆ. ಬೆಳೆ ವರ್ಧಿಸಲಿ, ೧೨, ೧೬ ರಂತಹ ವಚನಗಳಲ್ಲಿ ಸತ್ಯವೇನೋ ಇದೆ ; ಆದರೆ ಸೌಂದರ್ಯವಿಲ್ಲ. ‘ಇಚ್ಛೆಯನರಿತು ನಡೆವ ಪತಿಯೂ ಬೇಡ’ ಎಂದಿರುವುದು ಪ್ರೊ॥ ಪಂಪನಾ ಚಿಂತಿಸಬೇಕಾದ ಮಾತು. ಉಳಿದೆಲ್ಲವನ್ನು ಗೌಣವಾಗಿಸುವ ಕವಯತ್ರಿಯ ಈ ಅಂತರಂಗದ ಕರೆ ಇನ್ನಷ್ಟು ಸ್ಪಷ್ಟವಾಗಲಿ ; ಅದರಿಂದ ಮತ್ತು ಸತ್ವಪೂರ್ಣವಾದ ವಚನ ನಿಚಯ ರಚನೆಗೊಳ್ಳುವಂತಾಗಲಿ.

ಟಿ. ಸುನಂದಮ್ಮ

‘ಬಿಂದಲಿ’ ಕೈಯಲ್ಲಿ ಹಿಡಿದಿದ್ದು ಪೂರ್ತಿ ಓದಿದ ಮೇಲೆಯೇ ಕೆಳಗಿರಿಸಿದ್ದು. ಭಾವನೆಗಳನ್ನು ಭಟ್ಟಿ ಇಳಿಸಿ ಕೆಲವೇ ಸಾಲುಗಳಲ್ಲಿ ಅನುಭವ ಸಂಪತ್ತನ್ನು ಮೂಡಿಸಿದ್ದೀರಿ. ವಿಷದ ನಾಲಗೆಯಲಿ ಜೇನೇಕೆ ಸುರಿಸುವೆ, ಅತ್ತ ವಿಷವೂ ಹಾಳು ಇತ್ತ ಜೇನೂ ಹಾಳು’ ಇಂತಹ ಮುತ್ತಿನಂತಹ ವಾಕ್ಯಗಳು ; ಮುಗ್ಗುಲಿಗೇ ‘ಹೊದ್ದಿದ್ದೇನೆ ಸೆರಗ... ಬೊಜ್ಜು ಕಾಣದಿರಲಿ’ ವಿಡಂಬನೆಯ ಮಿಂಚು. ಆಧುನಿಕ ಕವನಗಳ ಈ ಸಂಕಲನಕ್ಕಾಗಿ ಹಾರ್ದಿಕ ಅಭಿನಂದನೆಗಳು.

ಸಂಗಮೇಶ ಸವದತ್ತಿಮಠ

‘ಬಿಂದಲಿ’ ಓದಿದೆ. ತುಂಬಾ ಸಂತೋಷವಾಯಿತು. ಅವರ ಬರವಣಿಗೆಯಲ್ಲಿ ಅಚ್ಚುಕಟ್ಟು ಇದೆ. ತಮ್ಮ ಅನಿಸಿಕೆಗಳನ್ನು ನೇರ ಸರಳಭಾಷೆಯಲ್ಲಿ ಸಹಜವಾಗಿ ಅಭಿವ್ಯಕ್ತಿಸಿದ್ದಾರೆ. ಅವರ ವಚನಗಳಲ್ಲಿ ಆತ್ಮ ನಿವೇದನೆ ಇದೆ, ಸಮಾಜ ವಿಡಂಬನೆ ಇದೆ, ನವಿರು ಪ್ರಣಯವಿದೆ, ಕುಟುಕುವ ಚುಟುಕಗಳಿವೆ. ಒಟ್ಟಿನಲ್ಲಿ ಪ್ರಬುದ್ಧ ಮನಸ್ಸಿನ ಸರಳ ಅಭಿವ್ಯಕ್ತಿ ಹೃದಯಕ್ಕೆ ತಲುಪುವ ಶಕ್ತಿ ಇಲ್ಲಿನ ವಚನಗಳಲ್ಲಿದೆ. “ಎನ್ನ ಆಯುಷ್ಯವೆಲ್ಲ ಅಕ್ಕಿ ಆಯುವುದರಲ್ಲಿ ಸೊಪ್ಪು ಸೋಸುವುದರಲ್ಲಿ...” (೫೯) ‘ವಿದ್ಯಾವಂತರೆಲ್ಲ ಬುದ್ಧಿವಂತರಲ್ಲ...’ (೬೩) ‘ಕುದಿಯುತ್ತಲೇ ಇದೆ ನನ್ನ ತನುಮನ...’ (೬೬) ಇವು ನನಗೆ ಬಹಳ ಹಿಡಿಸಿದುವು. ‘ಶಿವದಾರ’ ‘ಜನಿವಾರ’ ‘ಲಿಂಗವಂತ’ ಮುಂತಾದ ಪದಗಳನ್ನು ಹೊಸ ಅರ್ಥದಲ್ಲಿ ಬಳಸಿದ್ದು ವಿಶೇಷ ಕೆಲವು ‘ವಚನ’ಕ್ಕಿಂತ ಸುಂದರವಾದ ಹೃದ್ಯ ಭಾವಗೀತಗಳೇ ಆಗಿವೆ. (ಉದಾ : ೧೫, ೧೮ ೨೧, ೪೪). ರೂಪಕಗಳ ಬಳಕೆ, ಪ್ರತಿಮಾವಿಧಾನ, ಸಾಂಕೇತಿಕತೆಗಳು ಸೇರಿದಂತೆ ಇಂಥ ವಚನಗಳಿಗೆ ಅದ್ಭುತಶಕ್ತಿ ಬರುತ್ತದೆ. ಅಂಥವುಗಳನ್ನು ಬರೆಯುವ ಸಾಮರ್ಥ್ಯ ಸೌ॥ ಕಮಲಕ್ಕನವರಿಗಿದೆ.

ಜಿ. ವೆಂಕಟಸುಬ್ಬಯ್ಯ

‘ಬಿಂದಲಿ’ ಯನ್ನು ಇಲ್ಲಿಯತನಕ ಓದಲಾಗಲಿಲ್ಲ. ಏನಾದರೂ ಒಂದು ಅಡಚಣೆಯಿಂದ. ನಿನ್ನೆ ಕುಳಿತು ಅದನ್ನ ಒಂದೇಬಾರಿ ಓದಿದ್ದೇನೆ. ನಿಮ್ಮ ಸಮಾಜ ಸುಧಾರಣಾದೃಷ್ಟಿ, ವ್ಯಕ್ತಿಯ ಆತ್ಮೀಯ ಶೋಧನೆಯ ಪ್ರಯತ್ನ, ಬೌದ್ಧಿಕವಾದ ವಿಶ್ಲೇಷಣೆ ಇವು ಚೆನ್ನಾಗಿ ವಚನಗಳಲ್ಲಿ ಒಡಮೂಡಿವೆ. ವಚನಗಳ ಭಾಷೆ ಸರಳ ಸುಂದರ. ವಚನಗಳ ಪರಪು ಹಿತಮಿತ. ಆಧ್ಯಾತ್ಮಿಕ ಚಿಂತನೆಯತ್ತ ಈ ವಚನರಚನಾ ಶಕ್ತಿ ಮುನ್ನಡೆದರೆ ಅತ್ಯುತ್ತಮವಾದ ಕನ್ನಡ ವಚನಗಳು

ಬರುವುದರಲ್ಲಿ ಸಂಶಯವಿಲ್ಲ. ಪಾಠಪ್ರವಚನ, ಸಂಶೋಧನೆ, ಸಂಸ್ಥೆಗಳ ಕಾರ್ಯಕ್ರಮಗಳ ನಡುವೆ ನೀವು ಸೃಷ್ಟಿಶೀಲ ಬರಹದಲ್ಲಿ ಮುನ್ನಡೆದಿರುವುದು ನನಗೆ ತುಂಬ ಸಂತೋಷವನ್ನುಂಟುಮಾಡಿದೆ. ನಿಮ್ಮ ಮುಂದಿನ ಪ್ರಯತ್ನಗಳಿಗೆ ನನ್ನ ಶುಭಾಶಯಗಳು.

ಜಿ. ಗೀತಾ ನಾಗಭೂಷಣ

'ಬಿಂದಲಿ' ತುಂಬ ಮುದ್ದಾಗಿದೆ. ಅಚ್ಚು ಚಿನ್ನದ 'ಬಿಂದಲಿ' ಇದು. 'ಮನ ಒಡೆದವರ ಮಧ್ಯ ಬದುಕಲಾರೆನಯ್ಯ', 'ನಯವಂಚಕರಿಂದ ದೂರವಿರಿಸಯ್ಯ', 'ಹಿತಶತ್ರುಗಳನೆಂತು ಅರಿಯಬಲ್ಲೆನಯ್ಯ', 'ಸಹಿಸಿಕೊ ದುಃಖವ ಸುಖದ ಬರುವಿಕೆಗಾಗಿ' ಮೊದಲಾದ ಸಾಲುಗಳು ಓದುಗರ ಎದೆಯಲ್ಲಿ ಗಟ್ಟಿಯಾಗಿ ನಿಲ್ಲುತ್ತವೆ. ಗಟ್ಟಿಯಾದ ಅನುಭವದ ಹಿನ್ನೆಲೆಯಲ್ಲಿ ಬರೆದ ಪದ್ಯಗಳು ನಿಜಕ್ಕೂ ತುಂಬ ಪರಿಣಾಮಕಾರಿಯಾಗಿವೆ. ಇಂಥ ನೋವಿನ ತೀವ್ರತೆ, ಕಹಿಯ ತೀಕ್ಷ್ಣತೆಗಳು ನಮ್ಮಂಥ ದಲಿತರಿಂದಲ್ಲದೆ ಅನ್ಯರಿಂದ ಹೊರಬರಲಾರವು ಎಂಬುದಕ್ಕೆ 'ಬಿಂದಲಿ' ಜ್ವಲಂತ ನಿದರ್ಶನ.

ಬಿ. ಎ. ಸನದಿ

'ಬಿಂದಲಿ'ಯ ಪುಸ್ತಕದ ಮುದ್ರಣದಂತೆ ಒಳಗಿನ ವಚನಗಳೂ ಮೆಚ್ಚುವ ಹಾಗಿವೆ. ನಿಮ್ಮ ಸಾಮಾಜಿಕ ಪ್ರಜ್ಞೆ ಈ ಮುದ್ದಾದ ವಚನಗಳಲ್ಲಿ ಸಂದಿಗ್ಧತೆಗಿಂಬಿಲ್ಲದಂತೆ ಒಡಮೂಡಿ ನಿಂತಿದೆ. ನನಗೆ ೨, ೪, ೯, ೧೩, ೧೪, ೧೮, ೧೯, ೩೦, ೩೧, ೩೫, ೩೭, ೪೦, ೪೭, ೪೮, ೪೯, ೫೦, ೫೫, ೫೮, ೬೦, ೬೧, ೬೩, ೬೪, ೬೮, ೭೦–ಈ ವಚನಗಳು ತುಂಬ ಹಿಡಿಸಿದವು. 'ಬಿಂದಲಿ' ಪದವಂತೂ ಸರಿಯೆ. ಅದರೊಡನೆ ನುಂಗಣ್ಣ, ನಯವಂಚಕ, ಗೊಂದಲಿಗೆಯ ನಾಯಿ, ವಡ್ಯಾಣ, ಇಹದೇಶಿ– ಇತ್ಯಾದಿ ಶಬ್ದಗಳಿಗೆ ಸಮರ್ಥ ಚಲಾವಣೆ ನೀಡಿದ ಶ್ರೇಯಸ್ಸು ನಿಮ್ಮದು. ಕೆಲವು ವಚನಗಳಂತೂ ಅಪ್ಪಟ ಭಾವಗೀತೆಗಳಂತೆ ಮನದಾಳಕ್ಕಿಳಿದು ಬಹುಕಾಲ ಉಳಿಯುವಂತಿವೆ. ಇಂಥ ಸುಂದರ ವಚನಗಳ ಸಂಗ್ರಹವನ್ನು ಕನ್ನಡಿಗರಿಗಿತ್ತು ಆಧುನಿಕ ವಚನಕಾರರ ನಡುವೆ ವಚನಕಾರ್ತಿಯ ಬಾವುಟವೆತ್ತಿಹಿಡಿದ ನಿಮಗೆ ಹಾರ್ದಿಕ ಅಭಿನಂದನೆಗಳು.

ಶ್ರೀನಿವಾಸ ಹಾವನೂರ

'ಬಿಂದಲಿ' ನನ್ನ ಕೈಗೆ ಬಂದು ಎರಡು ತಿಂಗಳಾಗುತ್ತಬಂತು. ಪೂರ್ಣ ಓದಿಯೇ ಬರೀಬೇಕು ಅಂತ ಹಟ ತೊಟ್ಟಿದ್ದೆ. ಈಗ ಆ ಕೆಲಸ ಮುಗಿಸಿದೆ. ಮೃದುವಾದ ಹಿತವಾದ ಭಾವನೆಯನ್ನು ನವುರಾಗಿ ವ್ಯಕ್ತಪಡಿಸಿದ್ದೀರಿ. ನಿಮ್ಮ ಬರಹದ ಈ ಮುಖದ ಪರಿಚಯ ನನಗಿರಲಿಲ್ಲ. ಅಂತೂ ಸಂತೋಷಪಟ್ಟೆ. ಪದ್ಯ ೧೧, ೧೬ ತುಂಬಾ ಹಿಡಿಸಿದುವು. ಕೆಲವು ಸಂದೇಹಗಳು : ಪುಟ ೬ 'ಇಚ್ಛೆಯನರಿತು ನಡೆವ ಪತಿಯೂ ಬೇಡ... ಕಮಲಾಪ್ರಿಯ, ಅನ್ನೋ ದ್ವಂದ್ವಾರ್ಥಕ್ಕೆ ಇದು ವಿರೋಧಾಭಾಸವೆ? ಪದ್ಯ ೬೧ ಯಾರನ್ನು ಉದ್ದೇಶಿಸಿದ್ದು? ಕೊನೆಯ ಸಾಲಿನ ಅರ್ಥ ?

ಗುಂಡ್ಮಿ ಚಂದ್ರಶೇಖರ ಐತಾಳ

ನಿಮ್ಮ 'ಬಿಂದಲಿ'ಯನ್ನು ಓದಿ ತುಂಬ ಸಂತೋಷಿಸಿದೆ. ಕನ್ನಡ ಭಾಷೆ ಸಾಹಿತ್ಯಗಳಿಗೆ ಒಂದು ಹೊಸ ಮುದ್ದಾದ ಶಬ್ದವನ್ನು ನೀಡಿದ್ದೀರಿ. ಅದನ್ನು ನಾನು ಈ ಮೊದಲು ಕೇಳಿರಲಿಲ್ಲ. ಇಲ್ಲಿಯ ಎಲ್ಲ ವಚನಗಳು 'ಬಿಂದಲಿ' ಎಂಬ ಹೆಸರಿಗೆ ಅನ್ವರ್ಥಕವಾಗಿವೆ ಆದರಲ್ಲಿ ನನಗೆ ೧೬, ೨೨, ೨೯, ೩೩, ೩೫, ೪೨, ೪೧, ೪೯, ೫೦, ೬೩, ೬೮–ಈ 'ಬಿಂದಲಿ'ಗಳು ಹಿಡಿಸಿ ಮೆಚ್ಚಿಕೆಯಾದುವು. ಹೊಸಗನ್ನಡ ವಚನ ಸಾಹಿತ್ಯಕ್ಕೆ ನೀಡಿದ ಒಂದು ಉತ್ತಮ ಕೃತಿಗಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ.

ನ್ಯಾಯತೀರ್ಥ ಸಿದ್ಧಾಂತಾಚಾರ್ಯ ಜಿನರಾಜಶಾಸ್ತ್ರಿ

ನಾನು ಎಂದಿನಂತೆ ಧರ್ಮಸ್ಥಳ ಬೀಡಿಗೆ ಶಾಸ್ತ್ರ ಪ್ರವಚನಕ್ಕಾಗಿ ಹೋದಾಗ ಮಾತೃಶ್ರೀ ರತ್ನಮ್ಮನವರೇ ಮಾನ್ಯಶ್ರೀ ವೀರೇಂದ್ರ ಹೆಗ್ಗಡೆಯವರ ಬೈಟಕ್‌ನಿಂದ ಇಳಿದು ಬಂದು ಒಂದು ಪುಸ್ತಕವನ್ನು ಕೈಗಿತ್ತು ಇದನ್ನು ಓದಿ ಎಂದರು. ನೋಡಿದೆ–'ಬಿಂದಲಿ'. ಇದರ ಅರ್ಥ ತಿಳಿಯಲಿಲ್ಲ. ಮುಂದೆ 'ಬಿಂದಲಿ'ಯ ಅರ್ಥವಿವರಣೆ ಸಿಕ್ಕಿತು. ಮುಂದೆ ದೃಷ್ಟಿ ಹರಸಿದಾಗ 'ಅರ್ಪಣೆ' ಶಿರೋನಾಮೆಯ ಅಡಿಯಲ್ಲಿ 'ಆದರ್ಶ ಅಣ್ಣತಮ್ಮಂದಿರಿಗೆ' ಎಂದಿದೆ. ಮುಂದೆ ಓದುವ ಕುತೂಹಲ ಕೆರಳಿತು, ಓದಿದೆ .ಸೋಸಿದಭಾವನೆ, ಮುದ್ದಾದ ಭಾಷೆ, ಅರ್ಥಪೂರ್ಣ ಮೃದು ಪದಬಂಧ ಅಯಸ್ಕಾಂತ ಶಕ್ತಿಯಿಂದ ಪ್ರತಿವಚನವೂ ಚಿತ್ತಾಪಹಾರಕವಾಗಿದೆ. ನನ್ನ ಆನಂದಾನುಭವವನ್ನೂ ಮಾತೃಶ್ರೀಯವರಲ್ಲಿ ಹೇಳಿ ಕೊಂಡಾಗ ಅವರು ಬಹಳ ಸಂತೋಷಪಟ್ಟರು. ಪುಸ್ತಕ ಮಾತೃಶ್ರೀಯವರ ಕೈಗೆ ಸಿಕ್ಕಿರುವುದು ಆಕಸ್ಮಿಕ. 'ಬಿಂದಲಿ'ಯ ಓದಿನಿಂದಾದ ನನ್ನ ಕಾವ್ಯಾನಂದ ಬಗೆಯನ್ನು ಬರೆಯಲೇ ಬೇಕೆಂದು ಮನಸ್ಸಿನ ಒತ್ತಾಯದಂತೆ ಬರೆದೆ. ಇದು ಸಾರಸ್ವತ ಪ್ರಪಂಚದ 'ಕರ ಬಿಂದಲಿ' ಎಂಬುದು ಯಥಾರ್ಥ. ಕನ್ನಡಮ್ಮನ ಮೂಗಿನ ಮೂಗುತಿಯಂತಿರಲಿ.

ಬುದ್ಧಣ್ಣ ಹಿಂಗಮಿರೆ

'ಬಿಂದಲಿ'ಯ ಒಂದೊಂದು ವಚನದಲ್ಲಿಯೂ ನಿಮ್ಮ ಮನಸ್ಸು ವ್ಯಾಪಕವಾಗಿದ್ದು ಇವು ನಿಮ್ಮ ಪ್ರತಿಭೆಯ ಸಂಕೇತವಾಗಿವೆ. ಪಿ.ರಾ., ಅಕ್ಕಮಹಾದೇವಿಯವರಂತೆ ನಿಮ್ಮ 'ಬಿಂದಲಿ' ಯ ಪ್ರೌಢ ವಚನಗಳು ಭಾಷೆ, ಭಾವ, ಸರಳತೆಗಳಿಂದ ಸ್ಪಷ್ಟವಾಗಿವೆ. ಇಷ್ಟೇ ಅಲ್ಲದೆ ಖಚಿತವಾದ ಭಾವ ವಿಚಾರಗಳನ್ನು ಬಿಂಬಿಸುವಲ್ಲಿ ಸಮರ್ಥವಾಗಿವೆ. ನಿಮ್ಮ ನುಡಿಗಳಲ್ಲಿ ವರ್ತಮಾನದ ತುಡಿತಗಳಿರುವುದು ನನಗೆ ಹೆಚ್ಚು ಪ್ರಿಯವೆನ್ನಿಸಿತು. ನಿಮ್ಮ 'ಬಿಂದಲಿ'ಯ ಕುರಿತ ನನ್ನ ಅಭಿಪ್ರಾಯ ಸ್ವೀಕರಿಸಿ.

ಟಿ. ಕೆ. ಮಹಮೂದ್

ಬದುಕಿನ ಅಸಹ್ಯಗಳನ್ನು, ದುರಂತ ವಿಷಾದಗಳನ್ನು, ಬೋಳೇತನವನ್ನು ನಿಮ್ಮ ಕೆಲವು ವಚನಗಳು ಬಹುಸಮರ್ಥವಾಗಿ ಹಿಡಿದಿಟ್ಟಿವೆ.

V. K. Gokak

I am greatful to you for your Precious gift of a Copy of 'Bharathesha Vaibhava' new edition and of the 'Sukumara Chariteya Sangraha'

which you have edited all by yourself. I am glad to see your efforts in the field of Kannada Scholarship.

D. Javaregowda

I have known Smt. C. R. Kamalamma for over two decades as a student of mine and also a lecturer in Kannada. As a student she earned the good will of all teachers on account of her studies habits excellent character and literary talents. As a teacher she is very popular because she has that communicative talent which meny teachers lack. She has already made a mark as a writer and has a good number of research and creative articles to her credit. Her oration is known all over Karnataka.

ಚದುರಂಗ

ಅಗ್ಗದ ಜನಪ್ರಿಯ ಸಾಹಿತ್ಯ ರಚನೆಯ ಕಡೆಗೆ ಆಕರ್ಷಿತರಾಗದೆ ಪ್ರಬುದ್ಧ ಸಾಹಿತ್ಯ ರಚನೆಗೆ ಆಕರ್ಷಿತರಾದ ಕಮಲಾ ಹಂಪನಾ ಅವರ ಬಗೆಗೆ ನನಗೆ ಆಶ್ಚರ್ಯ ಹಾಗೂ ಸಂತೋಷ. ಈ ಕೃತಿಗಳಲ್ಲಿ ಪ್ರಬುದ್ಧವಾದ ಮನಸ್ಸು ಕೆಲಸ ಮಾಡುತ್ತಿರುವುದನ್ನು ಮನಗಾಣಬಹುದು.

ಸಿದ್ಧಯ್ಯ ಪುರಾಣಿಕ

ಮಹಿಳಾ ಸಾಹಿತ್ಯವೆಂಬ ರಿಯಾಯಿತಿಯನ್ನು ಬಯಸದೆ ಲಿಂಗಭೇದವನ್ನು ಮೀರಿ ದೊಡ್ಡವರಾಗಿ ಬೆಳೆದ ಕಮಲಾ ಅವರು ಊರ್ಧ್ವಮುಖವಾದ ಆತ್ಮ ಯಾತ್ರೆಯಲ್ಲಿ ಇನ್ನೂ ಹೆಚ್ಚಿನ ಸಾಹಸಕ್ಕೆ ಪ್ರೇರಣೆ ಪಡೆಯಲಿ.

ಚಂದ್ರಶೇಖರ ಕಂಬಾರ

ಶೂದ್ರ ಹೆಣ್ಣುಗಳ ಧ್ವನಿಯಾಗಿ, ಪ್ರತಿಭಟನಾಕಾರರಾಗಿ, ನ್ಯಾಯವಾಗಿ ಕಂಡದ್ದನ್ನು ಹೇಳದೆ ಬಿಡದ ಮತ್ತು ಅನ್ಯಾಯವನ್ನು ಪ್ರತಿಭಟಿಸದೆ ಸುಮ್ಮನಿರಲಾರದವರು ಕಮಲಾ ಹಂಪನಾ.

ಸುಜನಾ

ಶಾಸ್ತ್ರೀಯ ಪ್ರಕ್ರಿಯೆಯ ಸಾಹಿತ್ಯ ರಚನೆ ಮಾಡುವ ಮಹಿಳೆಯರು ವಿರಳವಾಗಿರುವಾಗ, ಸಂಕೀರ್ಣ ಅನುಭವಗಳನ್ನು ಪಡೆದು ಮತೀಯ ಆವೇಶವಿಲ್ಲದ ಆರೋಗ್ಯಕರವಾದ ಲಕ್ಷಣವುಳ್ಳ ಸಾಹಿತ್ಯ ರಚನೆಯ ಬಗ್ಗೆ ಲೇಖಕಿಯನ್ನು ಅಭಿನಂದಿಸುತ್ತೇನೆ. ಕಮಲಾ ಹಂಪನಾ ಅವರ ಸಾಹಿತ್ಯದಲ್ಲಿ ಅನುಭವಪೂರಿತ ವ್ಯಾಖ್ಯಾನವಿದೆ.

ಡಿ. ವೀರೇಂದ್ರ ಹೆಗ್ಗಡೆ

ಅಗ್ಗದ ಜನಪ್ರಿಯ ಕಾದಂಬರಿಗಳಿಗೆ ಮಾತ್ರ ಬೇಡಿಕೆ ಇರುವ ಇಂದಿನ ದಿನಗಳಲ್ಲಿ ಧಾರ್ಮಿಕ ಮೌಲ್ಯಗಳುಳ್ಳ ವೈಚಾರಿಕ ಸಾಹಿತ್ಯ ರಚನೆ ಮಾಡಿದ ಕಮಲಾ ಹಂಪನಾ ಅವರು ಅಭಿನಂದನೆಗೆ ಅರ್ಹರಾಗಿದ್ದಾರೆ.

ಗೀತಾ ಕುಲಕರ್ಣಿ

ನೀವು 'ಮಹಿಳಾ ಸಾಹಿತ್ಯ ಕೊರತೆ' ಎನ್ನುವ ಭಾಗವನ್ನು ತುಂಬಿಕೊಟ್ಟಿದ್ದೀರಿ. ಸಂಶೋಧನೆ, ಸಂಪಾದನೆ, ವಿಮರ್ಶೆ, ಭಾಷಣ--ಇವುಗಳಲ್ಲಿ ಅಗ್ರಗಣ್ಯರು. ನೀವು ಯಾವ ಪುರುಷ ಸಾಹಿತಿಗೂ ಕಡಿಮೆ ಇಲ್ಲ ಎನ್ನುವ ಪಾಂಡಿತ್ಯ ಪಡೆದಿದ್ದೀರಿ.

ಅನುಪಮಾ ನಿರಂಜನ

ನೀವು ಪ್ರೀತಿಯಿಂದ ಕೊಟ್ಟ 'ನಕ್ಕಿತು ಹಾಲಿನ ಬಟ್ಟಲು' ಓದಿ ಮುಗಿಸಿದೆ. ಸುಮಾರು ಹತ್ತು ವರ್ಷಗಳಿಗೆ ಹಿಂದೆ ಬರೆದ ಕತೆಗಳಾದರೂ ಅವು ಸುಭಗವಾಗಿವೆ, ಸುಂದರವಾಗಿವೆ. ಓದಿ ಸಂತೋಷಪಟ್ಟಿದ್ದೇನೆ.

'ಊರಿಗೆ ಹೊರಟೇ ಹೋದರು' ಈ ಸಂಕಲನದ ಅತ್ಯುತ್ತಮ ಕತೆ. ತಾಯಿಯ ಪ್ರೀತಿ, ತ್ಯಾಗ, ಸಮಾಜದ ರೋಷ ಇವು ಬಹು ಯಥಾವತ್ತಾಗಿ ಮಾರ್ಮಿಕವಾಗಿ ಚಿತ್ರಿತ ವಾಗಿವೆ. 'ಉತ್ತಮ ಜಾತಿಯವರಿಂದ ಬಂದ ಉತ್ತರ ಕಂಡು ಡಾಕ್ಟರ್ ಮೈ ಉರಿಯಿತು' ಇಂದಿಗೂ ಇದು ಎಷ್ಟು ಸತ್ಯ. 'ಘುಂಗಳಿ' ಮತ್ತು 'ಊರಿಗೆ...' ಕತೆಗಳಲ್ಲಿ ಅಂತರ್ಜಾತೀಯ ವಿವಾಹದ ದುಃಸ್ಥಿತಿಗಳನ್ನು ನೈಜವಾಗಿ ರಚಿಸಿದ್ದೀರಿ. 'ಯೌವನ ನುಡಿಯಿತು' ಸ್ತ್ರೀ ಸ್ವಾತಂತ್ರ್ಯದ ದಿನಗಳಲ್ಲೂ ಇಂಥವು ನಡೆಯುವುದು ಎಂಥ ವಿಪರ್ಯಾಸ. ಹೆಣ್ಣು 'ಇಂಥವನೊಬ್ಬನ' ಮಡದಿಯಾದಾಗಲೇ ಅವಳು ಬಚಾವು.

ನಿಮ್ಮ ಮೂರು ಕತೆಗಳಲ್ಲಿ (ಸಮಸ್ಯೆಯ ಸುಳಿಯಲ್ಲಿ, ಊರಿಗೆ ಹೋದರು, ಸೂಕ್ಷ್ಮ) ಕಥಾ ನಾಯಕಿಯರು ಸಮಸ್ಯೆ ಎದುರಿಸಲಾರದಾದಾಗ ಆತ್ಮಹತ್ಯೆಗಿಂತ ಬೇರೆ ದಾರಿಯಿರಲಿಲ್ಲವೆ ಅನಿಸುತ್ತದೆ. 'ನಾನು ಎಲ್ಲಿಗೂ ಹೋಗೋಲ್ಲಮ್ಮ' ಕತೆಯ ಸುಧೆಯ ದುರಂತ ಬದುಕು ಮನಕರಗಿಸುವಂತಿದೆ. ಬದುಕು ಎಷ್ಟು ಕ್ರೂರ ಅಲ್ಲವೆ ? ಯಾರಿಗೆ ಏನೇ ಆದರೂ ಅದು ನಿರ್ದಯವಾಗಿ ಮುನ್ನಡೆಯುತ್ತಲೇ ಇರುತ್ತದೆ. ಅಪರೂಪವಾದ ಕತೆಗಳನ್ನು ನೀವು ಕನ್ನಡ ನಾಡಿಗೆ ಕೊಡುತ್ತೀರಿ ಎಂಬ ಭರವಸೆ ನನಗಿದೆ. ಸಹಲೇಖಕಿಯ ಅಭಿನಂದನೆ ಗಳನ್ನು ಸ್ವೀಕರಿಸಿ.

ಬಿ. ವಿ. ವೀರಭದ್ರಪ್ಪ

ತಮ್ಮ ಭಾಷಣದ ಬಗ್ಗೆ ನಮ್ಮ ಇಡೀ ಕಾಲೇಜು ವಿದ್ಯಾರ್ಥಿಗಳು ಅತ್ಯಂತ ಸಂತೋಷ-ಸಂತೃಪ್ತಿ ವ್ಯಕ್ತಪಡಿಸಿದರು. ಇನ್ನೂ ನಾನು ಆ ಭಾಷಣವನ್ನು ಮೆಲುಕಾಡುತ್ತಿದ್ದೇನೆ. ನಿಮ್ಮ ಕಥಾ ಸಂಕಲನ 'ನಕ್ಕಿತು ಹಾಲಿನ ಬಟ್ಟಲು' ಮನೆಯವರೇ ಅಲ್ಲದೆ ಅಕ್ಕಪಕ್ಕದ ಮನೆಗಳವರೂ ಓದಿ ಮೆಚ್ಚುಗೆ ತಿಳಿಸಿದ್ದಾರೆ. ಜೀವನದ ನೈಜ ಚಿತ್ರಣದಿಂದ ಒಂದೊಂದು ಕತೆಯೂ ಪ್ರಭಾವಶಾಲಿಯಾಗಿದೆ. ಸೂಕ್ಷ್ಮ, ವರ್ತುಲ, ಮಂಗಳಿ–ಇವು ಅತ್ಯಂತ ಶ್ರೇಷ್ಠ ಕತೆಗಳು. 'ಸೂಕ್ಷ್ಮ' ಕತೆಯಲ್ಲಿ ಸಂಧ್ಯಾಳ ಪಾತ್ರ ಓದುಗರ ಕರುಳು ಹಿಂಡಿ ಕಣ್ಣಲ್ಲಿ ನೀರು

ಮಿಡಿಯುತ್ತಗೆ. ಆದರೆ ಒಂದು ಪ್ರಶ್ನೆ ! ಅವಳು ವಿದ್ಯಾವಂತೆ, ಪ್ರಪಂಚ ತಿಳಿದವಳು. ಆದರೂ ಆ ಕ್ಷಣಿಕ ಮನೋದೌರ್ಬಲ್ಯಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದು ಆಶ್ಚರ್ಯ ವೆನಿಸುವುದಿಲ್ಲವೇ ?

ಪ್ರಜಾವಾಣಿ

ಕಮಲಾ ಹಂಪನಾ ಅವರ ಎರಡನೆಯ ಕಥಾಸಂಕಲನ 'ರೆಕ್ಕೆ ಮುರಿದಿತ್ತು'ವಿನಲ್ಲಿ ಒಟ್ಟು ಒಂಭತ್ತು ಕಥೆಗಳಿವೆ. ಈ ಕಥೆಗಳಲ್ಲಿ ಎದ್ದುಕಾಣುವ ಗುಣವೆಂದರೆ ನಿತ್ಯಜೀವನದ ಸಾಮಾನ್ಯ ಘಟನೆಗಳಿಗೂ ಸಣ್ಣಕಥೆಯ ರೂಪವನ್ನು ಕೊಡುವ ಕೌಶಲ. 'ಕಾವಾಲೆ', 'ರೆಕ್ಕೆ ಮುರಿದಿತ್ತು', 'ಕಾಮನಬಿಲ್ಲು' ಮುಂತಾದ ಕಥೆಗಳಲ್ಲಿ ಮನುಷ್ಯ ಸ್ವಭಾವದ ಬಗ್ಗೆ ಇರುವ ರೂಢಿಗತ ನಂಬಿಕೆಗಳ ಆಚೆಗಿನ ಸತ್ಯವನ್ನು ಧ್ವನಿಸುವ ಪ್ರಯತ್ನ ಮಾಡಿದ್ದಾರೆ.

ಗ್ರಂಥಲೋಕ

ಕಮಲಾ ಹಂಪನಾ ಅವರ 'ಬಿಂದಲಿ' ಗಮನಾರ್ಹವಾದುದು. ಇಲ್ಲಿನ ವಚನಗಳಲ್ಲಿ ಕೆಲವು ಸಾಮಾನ್ಯವೆನಿಸಿದರೆ, ಇನ್ನು ಕೆಲವು ಚೊಕ್ಕವಾಗಿವೆ. ಸ್ವಾರಸ್ಯಳ್ಳವುಗಳಾಗಿವೆ. ನಿದರ್ಶನಕ್ಕೆ ಮೊದಲನೆಯ ವಚನ.

ಆಕಾಶವಾಣಿಯ ಸಮಾಚಾರದ ಮೊರ
ದೂರವಾಣಿಯ ಟ್ರಿಣ್ ಟ್ರಿಣ್ ಕರೆ
ಮಕ್ಕಳ ಮಮತೆಯ ಕರೆ
ಇನಿಯನ ಇನಿದನಿಯ ಕರೆ
ಈ ವಿವಿಧ ಕರೆಗಳ ನಡುವೆ
ಎಂತು ಕೇಳುವೆ ನಾನು
ಎನ್ನಂತರಂಗದ ಕರೆಯ ಕಮಲಾಪ್ರಿಯ

ಆಧುನಿಕ ವಚನ ನಿರ್ಮಾತೃಗಳ ಪಾಲಿಗೆ ನಿರಾತಂಕವಾಗಿ ಸೇರುತ್ತಿದ್ದಾರೆ ಕಮಲಾ ಹಂಪನಾ.

ಡಾ. ಸಿ. ಪಿ. ಕೆ.

ಸಮಕಾಲೀನ ಸಂದರ್ಭದಲ್ಲಿ ಮಹಿಳೆಯರು ನಿರ್ಭಿಡೆಯಿಂದ ಬರವಣಿಗೆ ಕೈಗೊಂಡಿದ್ದಾರೆ. ಜೀವನದುದ್ದಕ್ಕೂ ಶೋಷಣೆಗೆ ಒಳಗಾದ ಈ ಸಮೂಹ ತನ್ನ ಜವಾಬ್ದಾರಿಯನ್ನು ಹೊರಬೇಕಾಗಿದೆ. ಪುರುಷರ ದಬ್ಬಾಳಿಕೆ ಕುರಿತು ವಿಚಾರ ಮಾಡಬೇಕಾಗಿದೆ. ಮಹಿಳೆಯರು ತಮ್ಮ ಅಭಿವ್ಯಕ್ತಿಗೆ 'ಕಾದಂಬರಿ' ಪ್ರಕಾರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ವಿಚಾರ, ವಿಮರ್ಶೆ, ಸಂಶೋಧನೆಯ ಕಡೆ ಅಷ್ಟಾಗಿ ಒಲವು ತೋರಿಸುತ್ತಿಲ್ಲ ಎನ್ನುವ ಮಾತೂ ಇದೆ. ಆದರೆ ಈ ಮಾತು ಎಷ್ಟರ ಮಟ್ಟಿಗೆ ಸಮಂಜಸ ಎಂದು ಪ್ರಶ್ನಿಸಬೇಕಾಗಿದೆ. ಈಗ್ಗೆ ಬರವಣಿಗೆಗೆ ತೊಡಗಿರುವ ಮಹಿಳೆಯರು ಈ ಮುಂದೆ ಸಾಹಿತ್ಯದ ಪ್ರತಿಯೊಂದು ಪ್ರಕಾರದಲ್ಲೂ ಕೃಷಿ ನಡೆಸಬಹುದು; ಅಂತಹ ದಿನಗಳು ದೂರವಿಲ್ಲ ಎನ್ನುವುದಕ್ಕೆ ಶ್ರೀಮತಿ ಕಮಲಾ ಹಂಪನಾ ಅವರು ಉದಾಹರಣೆಯಾಗಿದ್ದಾರೆ.

ಕತೆ, ಕಾವ್ಯ, ವಿಮರ್ಶೆ, ವಿಚಾರ, ಸಂಶೋಧನೆ, ಶಿಶುಸಾಹಿತ್ಯ, ಜೀವನ ಚರಿತ್ರೆ, ಗ್ರಂಥ ಸಂಪಾದನೆ ಇತ್ಯಾದಿ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಮಲಾ ಹಂಪನಾ ಅವರು ಸಾಹಿತ್ಯ ಕೃಷಿ ನಡೆಸಿದ್ದಾರೆ. ದಲಿತ ಕಾಳಜಿಯುಳ್ಳವರು, ಭಾಷಣಕಾರರಾಗಿಯೂ ಉತ್ತಮ ಉಪನ್ಯಾಸಕಿಯಾಗಿಯೂ ಹೆಸರಾಗಿದ್ದಾರೆ. ಅವರ ಪ್ರತಿಭೆಗೆ ಈ ಎಲ್ಲ ಆಯಾಮಗಳಿರುವುದರಿಂದ ಇತರರಿಗೂ ಕನ್ನಡದ ಉಳಿದ ಲೇಖಕಿಯರಿಗೂ ಸ್ವಲ್ಪಮಟ್ಟಿಗೆ ವ್ಯತ್ಯಾಸವಿದೆ. ಕಮಲಾ ಹಂಪನಾ ಅವರು ಅಧ್ಯಾಪನದ ಜೊತೆಗೆ ಸಾಹಿತ್ಯಕೃಷಿ ಮಾಡುತ್ತ ಬಂದವರು. ಈ ದೃಷ್ಟಿಯಿಂದ ಪ್ರಾಚೀನ ಸಾಹಿತ್ಯವಾಗಲೀ ಆಧುನಿಕ ಸಾಹಿತ್ಯವಾಗಲೀ ಇವರಿಗೆ ಚಿರಪರಿಚಿತ. ಯಾವುದೇ ವಿಷಯದ ಬಗೆಗೂ ಅಧಿಕೃತವಾಗಿ ಮಾತನಾಡಬಲ್ಲರು, ಚರ್ಚಿಸಬಲ್ಲರು. 'ನಕ್ಕಿತು ಹಾಲಿನ ಬಟ್ಟಲು', 'ರೆಕ್ಕೆ ಮುರಿದಿತ್ತು', 'ಚಂದನಾ' ಎಂಬ ಇವರ ಕಥಾ ಸಂಕಲನಗಳಲ್ಲೂ ಬದುಕನ್ನು ತುಂಬ ಪ್ರೀತಿಯಿಂದ ಕಂಡಿರುವುದನ್ನು ಗುರುತಿಸಬಹುದು. ಇವರ 'ನಕ್ಕಿತು ಹಾಲಿನ ಬಟ್ಟಲು' ಕೃತಿ ಹೊರಬಂದದ್ದು ನವ್ಯ ಚಳುವಳಿಯ ಆರಂಭದ ಹಂತದಲ್ಲಿ. ಮೂಢನಂಬಿಕೆ, ಆಚರಣೆ, ಸಂಪ್ರದಾಯಗಳನ್ನು ಧಿಕ್ಕರಿಸಿ ಮುನ್ನುಗ್ಗುವ ಸಂದರ್ಭವದು. ಆ ಸಂದರ್ಭದಲ್ಲಿ ಬರವಣಿಗೆಗೆ ತೊಡಗಿದವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಅದರ ಪ್ರಭಾವಕ್ಕೆ ಒಳಗಾಗಿದ್ದರು. ಆದರೆ ಬರಹಗಳಲ್ಲಿ ಮೌಢ್ಯವನ್ನು ವಿರೋಧಿಸುವ ಬರಹಗಾರರನೇಕರು ತಮ್ಮ ವೈಯಕ್ತಿಕ ಬದುಕಿನಲ್ಲಿ, ಸಾಂಸಾರಿಕ ಚೌಕಟ್ಟಿನಲ್ಲಿ ಸ್ಥಗಿತ ಮೌಲ್ಯಗಳನ್ನು ಖಡಾಖಂಡಿತವಾಗಿ ವಿರೋಧಿಸುವ ಗೋಜಿಗೇ ಹೋಗಲಿಲ್ಲ. ನವ್ಯ ಲೇಖಕರ ಇಂಥ ಅಬ್ಬರದ ಸೃಜನಶೀಲತೆಯ ಸಂದರ್ಭದಲ್ಲಿ ಕಮಲಾ ಹಂಪನಾ ಅವರು ತಮ್ಮದೇ ಆದ ಶೈಲಿಯಲ್ಲಿ ಕತೆಗಳನ್ನು ರಚಿಸಿದರು. ನವೋದಯ ಶೈಲಿಯನ್ನು ತಿರಸ್ಕರಿಸುವುದರೊಂದಿಗೆ ತನ್ನ ರೆಕ್ಕೆ ಪುಕ್ಕಗಳನ್ನು ಬಿಚ್ಚಲು ಪ್ರಾರಂಭಗೊಂಡ ನವ್ಯ ಚಳುವಳಿಯ ಆರ್ಭಟಕ್ಕೆ ಒಳಗಾಗದೆ ಕಮಲಾ ಹಂಪನಾ ಅವರು ತಮ್ಮತನವನ್ನು ಉಳಿಸಿಕೊಂಡು, ಬದುಕಿನಕಡೆಗೆ, ಜೀವಪರ ಮೌಲ್ಯಗಳತ್ತ ಮುಖ ಮಾಡಿರುವುದು ಗಮನಾರ್ಹ ವಿಷಯ.

— **ಸಂಪಾದಕರು**